ಜನಶಕ್ತಿ

ಕನ್ನಡ ವಾರಪತ್ರಿಕೆ
Blog janashakthi.wordpress.com e-mail : js_weekly@yahoo.com
ಸಂಪುಟ 7, ಸಂಚಿಕೆ 16
ಏಪ್ರಿಲ್ 21, 2013
ಪುಟ 16 ರೂ. 10/-



ವಿಧಾನ ಸಭಾ ಚುನಾವಣೆ-2013

ಎಡಪರ್ಯಾಯ ಬಲಪಡಿಸಲು ಸಿಪಿಐ(ಎಂ) ಮನವಿ






ಕಾಂಗ್ರೆಸ್ ಪಾಳಯದಲ್ಲಿ ಯಾಕಿಷ್ಟು ನೂಕುನುಗ್ಗಲು?



ಕ್ಷೇತ್ರ ಸಂದರ್ಶನ : ಬಾಗೇಪಲ್ಲಿ : ಜನರ ಕಷ್ಟಗಳಿಗೆ ಒದಗಿದವರ ಕುರಿತು ಒಳ್ಳೆ ಮಾತುಗಳು


"ಕಾಂಗ್ರೆಸ್, ಬಿಜೆಪಿಗೆ ಪರ್ಯಾಯ ಶಕ್ತಿ ತನ್ನಿ"

– ಮಳವಳ್ಳಿಯಲ್ಲಿ ಯೆಚೂರಿ





ಭಾರತಿಯ "ಭಾರತ್ ಸ್ಟೋರ್ಸ್" ಹುಡುಕಾಟ



ಜನಾರೋಗ್ಯವೋ, ಆರೋಗ್ಯದ ನಿರ್ಲಕ್ಷ್ಯವೋ?

ಆರೋಗ್ಯ, ಜನಾರೋಗ್ಯ ವಿಷಯಗಳನ್ನು ಜನರಿಗೆ ತಿಳಿಸುವುದರೊಂದಿಗೆ ಜನಾರೋಗ್ಯದ ನಿರ್ಲಕ್ಷ್ಯೆಯನ್ನು ಗುರುತಿಸಿ ಸರಿಪಡಿಸ ಬೇಕಾ[illegible]ದ. ಆರೋಗ್ಯ ಜನಾರೋಗ್ಯ ಹಾಗೂ ನಿರ್ಲ[illegible]ಯ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ವೈದ್ಯರು

1) ಭಾರತ ಗ್ರಾಮಗಳ ದೇಶ. ದೇಶದಲ್ಲಿ ಸುಮಾರು 70 ರಷ್ಟು ಜನರು ಗ್ರಾಮಗಳಲ್ಲಿ ವಾಸಿಸುತ್ತಾರೆ. ಆದರೆ ಗ್ರಾಮಗಳ ಆಸ್ಪತ್ರೆ, ಆರೋಗ್ಯ ಕೇಂದ್ರಗಳಿಗೆ ಭೇಟಿನೀಡುವ ವೈದ್ಯರ ಸಂಖ್ಯೆ ಕೇವಲ 2%. ಅರ್ಹವೈದ್ಯರು ಹಲವಾರು ಕಾರಣಗಳಿಂದ ಗ್ರಾಮಗಳಿಗೆ ಹೋಗುವುದಿಲ್ಲ, ಅವರ ಸಮಸ್ಯೆಗಳನ್ನು ಕೇಳಲು ಸರ್ಕಾರ ತಯಾರಿಗಿಲ್ಲ ಗ್ರಾಮಗಳಲ್ಲಿ ಜನರಿಗೆ ಅರ್ಹ ವೈದ್ಯರು, ಚಿಕಿತ್ಸೆ ದೊರಕದೇ ಇದ್ದುದರಿಂದ ಜನರು ಹೋಮಿಯೋಪತಿ ಆಯುರ್ವೇದ ಪರಿಸರ ಚಿಕಿತ್ಸೆಯನ್ನು ಪಡೆಯಬೇಕಿದೆ. ಇಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇತರೇ ಪದ್ಧತಿಯ ವೈದ್ಯರನ್ನು ನೇಮಕ ಮಾಡಲಾಗಿದೆ. ಆದ್ದರಿಂದ ಗ್ರಾಮದಲ್ಲಿಯ ಖಾಸಗೀ ಸಂಪ್ರಾದಾಯಕ ವೈದ್ಯರ ಮೇಲೂ ಆರೋಗ್ಯ ವ್ಯವಸ್ಥೆ ನಿಂತಿದೆ. ಭಾರತದಲ್ಲಿ ಪ್ರತಿಶತ 80 ರಷ್ಟು ಜನರು ಚಿಕಿತ್ಸೆ ಪಡೆಯಲು ಖಾಸಗೀ ಆರೋಗ್ಯ ವ್ಯವಸ್ಥೆಗೆ ಹೋಗುತ್ತಿದ್ದಾರೆ. ಭಾರತ ಒಟ್ಟು ಅನಕ್ಷರಸ್ತರಿರುವ ದೇಶವಾದ್ದರಿಂದ ಸರಕಾರೀ ವ್ಯವಸ್ಥೆಯನ್ನು ಸರಿಪಡಿಸುವುದರ ಬಗ್ಗೆ ಸರಕಾರ ಯೋಚಿಸದಿರುವುದು ಇಂತಹ ಪರಿಸ್ಥಿತಿಗೆ ಕಾರಣ.

ಆರೋಗ್ಯ ಕಾರ್ಯಕರ್ತರು :

ಆರೋಗ್ಯ ವ್ಯವಸ್ಥೆಯಲ್ಲಿ ಆರೋಗ್ಯ ಕಾರ್ಯಕರ್ತರು ವೈದ್ಯದಾದಿಯರಷ್ಟೆ ಪ್ರಮುಖ ಪಾತ್ರ ವಹಿಸುತ್ತಾರೆ. ಭಾರತದಲ್ಲಿ ಆರೋಗ್ಯ ಕಾರ್ಯಕರ್ತರ ಕೊರತೆ ಸುಮಾರು 65 ಲಕ್ಷ. ಇವರು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಬಲ್ಲರು. ಭಾರತದಲ್ಲಿ ವೈದ್ಯರ ಪ್ರಮಾಣವೂ ಸಮರ್ಪಕರವಾಗಿಲ್ಲ

ವೈದ್ಯರು

ಜನಸಂಖ್ಯೆ

ಭಾರತ	0.5%	1000
	0.3%	1000
ಶ್ರೀಲಂಕಾ	0.4%	1000
ಚೀನಾ	1.6%	1000
ಯುಕೆ	5.4%	1000
ಅಮೇರಿಕ	5.5%	1000

ಮಕ್ಕಳ [illegible]ೋಗ್ಯ

ಭಾ[illegible]ಲ್ಲಿ ಶಿಶುಮರಣ ಸಂ[illegible] ನೆರೆಹೊರೆಯ ಶ್ರೀಲಂಕಾಗಿಂತ ಹೆಚ್ಚಾಗಿದೆ. ಆರೋಗ್ಯ ಕಾರ್ಯಕ್ರಮವಾದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಒಂದು ಮುಖ್ಯ ಉದ್ದೇಶ ಶಿಶುಮರಣ ಸಂಖ್ಯೆಯನ್ನು ಕಡಿಮೆ ಮಾಡುವುದು. ಆದರೆ ಇವರೆಗೂ 50% ಶಿಶುಮರಣ ನಮ್ಮ ದೇಶದ ಐದು ರಾಜ್ಯಗಳಲ್ಲಿ ಕಂಡುಬರುತ್ತಿದೆ: ಉತ್ತರ ಪ್ರದೇಶ, ರಾಜಸ್ಥಾನ, ಒರಿಸ್ಸಾ, ಮಧ್ಯಪ್ರದೇಶ, ಆಂಧ್ರ ಪ್ರದೇಶ ಪ್ರತಿವರ್ಷ ತಡೆಗಟ್ಟಬಹುದಾದ ರೋಗಗಳಿಂದ 5 ವರ್ಷ ಕಡಿಮೆ ವಯಸ್ಸಿನ 18 ದಶಲಕ್ಷ ಮಕ್ಕಳು ಸಾವನ್ನಪ್ಪುತ್ತಿದ್ದಾರೆ.

ಗರ್ಬಿಣಿ ಆರೋಗ್ಯ :

ಗರ್ಬಿಣಿ ಆರೋಗ್ಯ ಕಾಪಾಡುವ ಒಂದು ಮುಖ್ಯ ಸೂತ್ರ ಹೆರಿಗೆಗೆ ಮುನ್ನ ಮೂರು ಬಾರಿ ವೈದ್ಯರಿಂದ ಪರೀಕ್ಷೆ ಮಾಡಿಸಿಕೊಳ್ಳುವುದು. ಆ ಪರೀಕ್ಷೆಯಿಂದ ಗರ್ಬಿಣಿ ಆರೋಗ್ಯ ಕಾಪಾಡಿಕೊಳ್ಳಲು ಸಹಾಯವಾಗುವುದು. ಆದರೆ ಈಗಲೂ 49% ಮಹಿಳೆಯರಿಗೆ ಮಾತ್ರ ಹೆರಿಗೆ ಪೂರ್ವ ಪರೀಕ್ಷೆಯನ್ನು ಮಾಡಲಾಗುತ್ತಿದೆ. ಭಾರತದಲ್ಲಿ ಈಗಲೂ ಪ್ರತಿ ಹತ್ತು ನಿಮಿಷಕ್ಕೆ ಹೆರಿಗೆಯಿಂದಾಗಿ ಒಬ್ಬ ಮಹಿಳೆ ಸಾವನ್ನಪ್ಪುತ್ತಿದ್ದಾಳೆ!

ಸಾಂಕ್ರಮಿಕ ರೋಗಗಳು :

ಭಾರತದಲ್ಲಿ ಈಗಲೂ ಸಾಂಕ್ರಾಮಿಕ ರೋಗಗಳನ್ನು ಹತೋಟಿಯಲ್ಲಿಡಲಾಗಿಲ್ಲ. ಸಾಮಾನ್ಯ ಕಾಯಿಲೆಯಾದ ಧಡಾರ ಪ್ರತಿವರ್ಷ 60,000 ರಿಂದ 1,00,000 ಮಕ್ಕಳ ಸಾವಿಗೆ ಕಾರಣವಾಗುತ್ತಿದೆ. ಧಡಾರವನ್ನು ಸಂಪೂರ್ಣವಾಗಿ ಗುಣಪಡಿಸಬಹುದು ಆದರೂ ಇಷ್ಟೊಂದು ಸಾವುಗಳು? ಇತರೇ ಸೋಂಕು ರೋಗಗಳಾದ ಮಲೇರಿಯಾ, ಕ್ಷಯ, ಡೆಂಗೂ, ಚಿಕುನ್‌ಗುನ್ಯ ಮುಂತಾದವುಗಳು ಅಷ್ಟೆ ಪ್ರಮಾಣದಲ್ಲಿವೆ ಹಾಗೂ ಕೆಲವು ಹೆಚ್ಚಾಗಿವೆ. ಸಾಂಕ್ರಾಮಿಕ ರೋಗಗಳನ್ನು ಹತೋಟಿಯಲ್ಲಿಡಲು ಸಾಧ್ಯ. ಆದರೆ ಅದನ್ನು ಸಾಧ್ಯವಾಗಿಸಲು ನೈರ್ಮಲ್ಯ ಸಾಧನೆ ಇಲ್ಲವಾಗಿದೆಯೆಂದೇ ಹೇಳಬಹುದು.

ಅಸಾಂಕ್ರಾಮಿಕ ರೋಗಗಳು :

ಈಗಿನ ದಿನಗಳಲ್ಲಿ ಸಾಂಕ್ರಾಮಿಕ ರೋಗಗಳ ಭಾರ ಕಡಿಮೆಯಾಗಿದೆಯೆಂದು ಒಪ್ಪಿಕೊಳ್ಳಬಹುದು. ಆದರೆ ಈಗ ಸಾಂಕ್ರಾಮಿಕ ವಲ್ಲದ ರೋಗಗಳು ಹೆಚ್ಚುತ್ತಲಿವೆ. ಈ ರೋಗಗಳು ಹೆಚ್ಚುದಿನ ಮನುಷ್ಯನಲ್ಲಿ ಉಳಿಯಲಿದ್ದು, ಜೀವನ ಪರ್ಯಂತ ಚಿಕಿತ್ಸೆ ನೀಡಬೇಕಾಗುತ್ತದೆ ಹಾಗೂ ಚಿಕಿತ್ಸೆ ದುಬಾರಿಯಾಗುತ್ತಿದೆ. ಈಗಾಗಲೇ ಸಾಂಕ್ರಾಮಿಕವಲ್ಲದ ರೋಗಗಳು ಭಾರತದಲ್ಲಿ ವ್ಯಾಪಕವಾಗಿ ಕಂಡುಬರುತ್ತಿದೆ. ಈ ರೋಗಗಳ ಹತೋಟಿಗೆ ಸರಕಾರ ಕೆಲವೊಂದು ವ್ಯವಸ್ಥೆ ಮಾಡಿದೆ. ಆದರೆ ಅದು ಸಮರ್ಪಕವಾಗಿಲ್ಲ.

ಭಾರತದಲ್ಲಿ ಉತ್ತರ ಪ್ರದೇಶ ಅತಿ ಹೆಚ್ಚು ಜನಸಂಖ್ಯೆ ಇರುವ ರಾಜ್ಯ. ಆದರೂ ಆ ರಾಜ್ಯದಲ್ಲಿ ಒಂದೂ ಕ್ಯಾನ್ಸರ್ ಆಸ್ಪತ್ರೆ ಇಲ್ಲ. ಈಗಿನ ದಿನಗಳಲ್ಲಿ ಸಾಂಕ್ರಮಿಕವಲ್ಲದ ರೋಗಗಳು ಹೆಚ್ಚುತ್ತಿವೆ. ಅದರಲ್ಲಿ ಕ್ಯಾನ್ಸರೂ ಕೂಡ ಒಂದು. ಇಂದಿನ ಪರಿಸ್ಥಿತಿಯಲ್ಲಿ ತಂಭಾಕು ಉಪಯೋಗ ಕಡಿಮೆಯಾಗುತ್ತಿಲ್ಲ ಹಾಗೂ ಆಹಾರ ಹಾಗೂ [illegible] ಕ್ಯಾನ್ಸರ್ ಉಂಟುಮಾಡುತ್ತಿದೆ. ಕ್ಯಾನ್ಸರ್ ತಡೆಗಟ್ಟಲು ಜನರಿಗೆ ಮಾಹಿತಿ ಇಲ್ಲ ಹಾಗೂ ಸರಕಾರ ವ್ಯವಸ್ಥಿತ ಪ್ರಯತ್ನ ಮಾಡಿಲ್ಲ. ಹೆಚ್ಚಿನ ಜನ ಕ್ಯಾನ್ಸರ್ ಚಿಕಿತ್ಸೆಗೆ ಮುಂದುವರೆದ ಹಂತದಲ್ಲಿ ಬರುತ್ತಾರೆ ಹೀಗಾಗಿ ಕ್ಯಾನ್ಸರ್ ಚಿಕಿತ್ಸೆಗೆ ವಿಶೇಷ ಆಸ್ಪತ್ರೆಗಳ ಅಗತ್ಯತೆ ಇದೆ. ಈಗಲೂ ಹೆಚ್ಚಿನ ಜನರು ಕ್ಯಾನ್ಸರ್ ಚಿಕಿತ್ಸೆ ಇಲ್ಲದೆ ಮರಣ ಹೊಂದುತ್ತಿದ್ದಾರೆ [illegible] ಅನಿವಾರ್ಯವಾಗಿ ನಾಟೀ ಚಿ[illegible] ಮೊರೆಹೋಗುತ್ತಿದ್ದಾರೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಭಾರತದಲ್ಲಿ!

ಭಾರತದಲ್ಲಿ ಸಾವಿಗೆ ಕಾರಣವಾಗುವ ಮೂರು ರೋಗಗಳೆಂದರೆ ಮಲೇರಿಯಾ, ಕ್ಷಯ ರೋಗ ಹಾಗೂ ಬೇಧಿರೋಗ. ಈ ಎಲ್ಲ ರೋಗಗಳನ್ನು ಸಂಪೂರ್ಣ ಗುಣಪಡಿಸಬಹುದಾಗಿದೆ ಆದರೆ ಈಗಲೂ ಈ ರೋಗಗಳಿಂದ ಸಾಕಷ್ಟು ಸಾವು ನೋವುಗಳು ಮುಂದುವರೆದಿವೆ.



ಸಂಪೂರ್ಣ ಗುಣಹೊಂದುವ ರೋಗಗಳನ್ನೇ ನಾವು ಹತೋಟಿಗೆ ತರದಿರುವಾಗ! ಸಂಪೂರ್ಣ ಗುಣವಾಗದ ರೋಗಗಳ ಪರಿಸ್ಥಿತಿಯೇನು? ವಿಶ್ವ ಆರೋಗ್ಯ ಸಂಸ್ಥೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸಾಧನೆಯ ಆಧಾರದ ಮೇಲೆ ಜಗತ್ತಿನ ದೇಶಗಳನ್ನು ಪಟ್ಟಿಮಾಡಿದೆ. 190 ದೇಶಗಳಲ್ಲಿ ಭಾರತದ ಸ್ಥಾನಮಾನ 112, ಭಾರತದಲ್ಲಿ 80% ಆರೋಗ್ಯ ಕ್ಷೇತ್ರ ಖಾಸಗಿ ಸಂಸ್ಥೆಗಳ ಕೈಯಲ್ಲಿದೆ. ಅದನ್ನು ಕೆಲವೇ ಜನರು ನಿಯಂತ್ರಿಸುತ್ತಿದ್ದಾರೆ. ದೊಡ್ಡ ಪಟ್ಟಣಗಳಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸಣ್ಣ ಪಟ್ಟಣಗಳಿಗೆ ಹೋಲಿಸಿದರೆ ಉತ್ತಮವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಜನರು ಅನೇಕಬಾರಿ ಖೊಟ್ಟಿ ವೈದ್ಯರ ಹತ್ತಿರ ಹೋಗಬೇಕಾಗುವ ಸನ್ನಿವೇಶವಿದೆ ಹಾಗೂ ಮೊಸಹೋಗುವ ಸನ್ನಿವೇಶಗಳಿವೆ. "ಜನರು ಆರೋಗ್ಯ ಸೇವೆ ಪಡೆಯಲು ತಮ್ಮ ಜೇಬಿನಿಂದಲೇ ಖರ್ಚು ಮಾಡಿಬೇಕಾದ ಸನ್ನಿವೇಶವಿದೆ." ಆದರೆ ಜಗತ್ತಿನ ಇತರೆ ರಾಷ್ಟ್ರಗಳಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಜನರಿಗೆ ಲಭ್ಯವಿದೆ ಎಂದು ನೊಬೆಲ್ ಪುರಸ್ಕೃತ ಅಮಾರ್ತ್ಯಸೇನ್ ಹೇಳುತ್ತಾರೆ.

ಈಗ ಆರೋಗ್ಯ ವೆಚ್ಚಗಳು ಹೆಚ್ಚುತ್ತಿವೆ. ಇದರ ಪರಿಣಮವಾಗಿ ಪ್ರತಿವರ್ಷ 39 ದಶಲಕ್ಷ ಜನರು ಬಡತನ ರೇಖೆಗಿಂತ ಕೆಳಗೆ ತಳ್ಳಲ್ಪಡುತ್ತಿದ್ದಾರೆ. ಆದರೆ 199[illegible] ರಲ್ಲಿ ಈ ಸಂಖ್ಯೆ 26 ದಶಲಕ್ಷ ಜನ[illegible] ಎಂದು ಆರೋಗ್ಯ ಅರ್ಥ ಶಾಸ್ತ್ರಜ್ಞರು ಹೇಳುತ್ತಾರೆ. ಕೇಂದ್ರ ಆರೋಗ್ಯ ಮಂತ್ರಿಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸುಧಾರಿಸಲು ಒತ್ತಾಯಿಸಿದರೆ, ಭಾರತ ಸರಕಾರ ಯೋಜನಾ ಆಯೋಗ ಖಾಸಗೀ ಕ್ಷೇತ್ರದ ಪಾಲುದಾರಿಕೆಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತದೆ. 2014 ರ ಚುನಾವಣೆಗೆ ಸರಕಾರ ಆರೋಗ್ಯವನ್ನು ಜಾರಿಮಾಡುವ ಸಾಧ್ಯತೆ ಇದೆ!.

ವೈದ್ಯಕೀಯ ಪ್ರವಾಸೋದ್ಯಮ :

ಬೇರೆ ದೇಶದ ನಾಗರೀಕರಿಗೆ ಅವರ ದೇಶದಲ್ಲಿ ದೊರಕುವ ಚಿಕಿತ್ಸೆಯ ವೆಚ್ಚಕ್ಕಿಂತ ಕಡಿಮೆ ಖರ್ಚಿನಲ್ಲಿ (ಹತ್ತನೇ ಒಂದು ಭಾಗ) ನೀಡುವ ವ್ಯವಸ್ಥೆಯೇ ಭಾರತೀಯ ವೈದ್ಯಕೀಯ ಪ್ರವಾಸೋದ್ಯಮ. ಇದರಿಂದ ವೈದ್ಯಕೀಯ ಕ್ಷೇತ್ರಕ್ಕೆ ವಿದೇಶಿ ವಿನಿಮಯ ದೊರೆಯುತ್ತದೆ ಎಂಬ ವಾದವನು ಇಡಲಾಗಿದೆ. ಕೋಟ್ಯಾಂತರ ಜನ ಅನಾರೋಗ್ಯಕ್ಕೆ ಸ್ಪಂದಿಸದ ಸರಕಾರ ಈ ಹೊರದೇಶದವರಿಗೆ ಕರೆದು ಮಣೆಹಾಕಿ ಆರೊಗ್ಯ ಸೌಲಭ್ಯ ನೀಡುವುದು ಸರಿಯಲ್ಲ ಕಾಂಗ್ರೆಸ್ ಪಕ್ಷ 'ಆಮ್ ಆದಮೀ ಆಕಾಂಕ್ಷೆಗಳಿಗೆ ಸ್ಪಂದಿಸುವ ಪಕ್ಷ', ಬಿಜೆಪಿ 'ಸ್ವದೇಶಿ' ಎಂದು ಹೇಳಿಕೊಳ್ಳುವ ಇನ್ನೊಂದು ಪಕ್ಷ, ಆದರೂ ಈ ಎರಡೂ ಪಕ್ಷಗಳು ಈ ಪ್ರವಾಸಿ ವೈದ್ಯಕೋದ್ಯಮಕ್ಕೆ ಹಸಿರು ನಿಶಾನೆ ತೋರಿಸಿವೆ.!

ಸಣ್ಣ ಪಟ್ಟಣಗಳಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸರಿಯಾಗಿಲ್ಲ. "ಸರಕಾರೀ ಆರೋಗ್ಯ ಕೇಂದ್ರಗಳು ಕೆಲವೆಡೆ ಇದ್ದರೂ ಅಲ್ಲಿ ವೈದ್ಯರು, ಉಪಕರಣಗಳು, ಔಷಧಿಗಳು ಹಾಗೂ ಅನೇಕ ಬಾರಿ ಕಟ್ಟಡಗಳಿರುವುದಿಲ್ಲ" ಎಂದು ಹೇಳುತ್ತಾರೆ ಡಾ॥ ರಾಜೀವ್ ಶುಕ್ಲಾ. ಇವರು ಸಣ್ಣ ಪಟ್ಟಣಗಳಲ್ಲಿ ಇರುವ ಸರಕಾರಿ ಆಸ್ಪತ್ರೆಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕಾಂಗ್ರೆಸ್ ಪಾಳಯದಲ್ಲಿ ಯಾಕಿಷ್ಟು ನೂಕುನುಗ್ಗಲು?

ಟಿಕೆಟ್ ಆಕಾಂಕ್ಷಿಗಳು ಮತ್ತು ಅವರ ಬೆಂಬಲಿಗರು ಕಳೆದ ಕೆಲವು ದಿನಗಳಿಂದ ಕೆಪಿಸಿಸಿ ಕಛೇರಿ ಎದುರು ಉಂಟುಮಾಡಿದ ಉದ್ರಿಕ್ತ ಪರಿಸ್ಥಿತಿ, ಅದನ್ನು ನಿಯಂತ್ರಿಸಲು ಪೊಲೀಸರು ನಡೆಸಿದ ಕಾರ್ಯಾಚರಣೆ ಮತ್ತು ಆಗ ನಡೆದ ನೂಕು ನುಗ್ಗಾಟದಲ್ಲಿ ಒಬ್ಬ ಕಾಂಗ್ರೆಸ್ ಕಾರ್ಯಕರ್ತ ಮೃತಪಟ್ಟಿದ್ದು ರಾಜ್ಯ ಕಾಂಗ್ರೆಸ್ ಇತಿಹಾಸದಲ್ಲೇ ಮೊದಲ ಬಾರಿಗೆ ನಡೆದ ಘಟನೆಯಾಗಿದೆ.

224 ಕ್ಷೇತ್ರಗಳಿಗೆ ಒಟ್ಟು 2040 ಟಿಕೆಟ್ ಆಕಾಂಕ್ಷಿಗಳಂತೆ! ಅವರ ಪೈಕಿ ಕಳೆದ ಬಾರಿ ಗೆದ್ದು ಸುಮ್ಮನಿದ್ದವರು, ಸೋತು ಹಾಸಿಗೆ ಹಿಡಿದವರು, ಮಠಾಧೀಶರ ಆಶೀರ್ವಾದ ಗಿಟ್ಟಿಸಿಕೊಂಡ ಜಾತಿ ಮುಖಂಡರು, ನಿಷ್ಠಾವಂತರು, ಬೇರೆ ಪಕ್ಷಗಳಿಂದ ಹಾರಿ ಬಂದು ಹೆಚ್ಚು ನಿಷ್ಠೆ ಸಾಬೀತು ಪಡಿಸಿದವರು, ಮೂಲ ಕಾಂಗ್ರೆಸಿಗರು, ವಲಸೆ ಕಾಂಗ್ರೆಸಿಗರು, ದಾಖಲೆ ಸೇವೆಸಲ್ಲಿಸಿದ್ದ ನಿವೃತ್ತ ಪೊಲೀಸ್ ಅಧಿಕಾರಿಗಳು, ಮಾಜಿ ಅಧಿಕಾರಿಗಳು, ರಿಯಲ್ ಎಸ್ಟೇಟ್ ಕುಳಗಳು, ಇದುವರೆಗೂ ಲೋಕಾಯುಕ್ತರ ಕಣ್ಣಿಗೆ ಬೀಳದಿದ್ದವರು, ಹಿರಿಯ ಕಾಂಗ್ರೆಸಿಗರ ಮಡದಿಯರು, ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಇದ್ದರು. ಈ ನೂಕುನುಗ್ಗಲು ಪೂರ್ವಯೋಜಿತವಾಗಿರಲಿಲ್ಲ. ಇದು ಅನಿರೀಕ್ಷಿತವಾಗಿತ್ತು. ಈ ಸಲ ರಾಜ್ಯದಲ್ಲಿ ಅಧಿಕಾರ ಕೈವಶ ಮಾಡಿಕೊಳ್ಳಬಹುದು ಎಂಬ ಕೆಟ್ಟ ಕನಸು ಬಿದ್ದದ್ದೇ ತಡ. ಎಲ್ಲಿಲ್ಲದ ನೂಕುನುಗ್ಗಲು!

ಈ ನಡುವೆ, ಕಾಂಗ್ರೆಸ್ ಟಿಕೆಟ್ ಹಂಚಿಕೆಯಲ್ಲಿ ಹಣದ ವಹಿವಾಟು ನಡೆದಿದೆ ಎಂಬ ಆರೋಪವೂ ಕೇಳಿಬರುತ್ತಿದೆ. 'ಅಭ್ಯರ್ಥಿಗಳ ಆಯ್ಕೆಗೆ ಹಣವೇ ಮುಖ್ಯ ಮಾನದಂಡವಾಗಿದೆ. ಪ್ರಾಮಾಣಿಕ ಮತ್ತು ಕಳಂಕರಹಿತ ನಾಯಕರನ್ನು ಕಡೆಗಣಿಸಿ ಧನವಂತ ಕುಬೇರರಿಗೆ ಟಿಕೆಟ್ ನೀಡಲಾಗಿದೆ' ಎಂಬ ಸ್ಪಷ್ಟವಾದ ತಕರಾರು. ಹೀಗೆ ತಕರಾರು ಎಬ್ಬಿಸಿದವರು ಬೇರೆ ಯಾರೂ ಅಲ್ಲ. ಕಾಂಗ್ರೆಸಿಗರೇ. ಅವರು ತಮ್ಮನ್ನು 'ನಿಷ್ಠಾವಂತ ಕಾಂಗ್ರೆಸಿಗರು' ಎಂದು ಹೇಳಿಕೊಳ್ಳುತ್ತಾರೆ. ಈಗಾಗಲೇ ಬಿಡುಗಡೆಗೊಂಡಿರುವ ಅಭ್ಯರ್ಥಿಗಳ ಹೆಸರುಗಳನ್ನು ಗಮನಿಸಿದರೆ 'ನಿಷ್ಠಾವಂತ' ಕಾಂಗ್ರೆಸಿಗರ ಆರೋಪವನ್ನು ತಳ್ಳಿಹಾಕಲಾಗುದಿಲ್ಲ.

ಗಾಂಧಿಜಿಯವರು ಬದುಕಿದ್ದರೆ ಈ ಬೆಳವಣಿಗೆಗಳನ್ನು ನೋಡಿ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರಲ್ಲವೆ? ತಾವು ಕಟ್ಟಿ ಬೆಳೆಸಿದ 'ಕಾಂಗ್ರೆಸ್' ಪರಿಸ್ಥಿತಿಗೆ ತಕ್ಕಂತೆ ಬದಲಾಗುತ್ತಾ ಭಾರತದ ಜನರ ನಡುವೆ ಜೀವಂತವಾಗಿ ಉಳಿದಿದೆ. ಎಷ್ಟೊಂದು ಜನರನ್ನು ಅದು 'ಜನಸೇವೆ' ಗಾಗಿ ಆಕರ್ಷಿಸುತ್ತಿದೆ ಎಂಬುದು 2013 ರ ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲೇ ವ್ಯಕ್ತವಾಗಿದೆ. ಕಾಂಗ್ರೆಸ್ ಟಿಕೆಟನ್ನು ಅವರು ಉಚಿತವಾಗಿ ಕೊಡಿ ಎಂದು ಕೇಳುವುದಿಲ್ಲ. ದುಡ್ಡು ಕೊಟ್ಟು ಖರೀದಿ ಮಾಡಲು ಸಿದ್ದರಿದ್ದಾರೆ. ಜನಸೇವೆಗಾಗಿ ತಾವು ಕೂಡಿಟ್ಟ ದುಡ್ಡನ್ನು ಹೂಡಿಕೆ ಮಾಡಲು ಅವರು ಅವಕಾಶ ಕೋರುತ್ತಾರೆ!

ಬಿಜೆಪಿ ಈಗಾಗಲೇ ಸೋಲನ್ನು ಒಪ್ಪಿಕೊಂಡಿರುವುದರಿಂದ ಅಲ್ಲಿ ಅಷ್ಟೊಂದು ನೂಕುನುಗ್ಗಲು ಕಾಣಲಿಲ್ಲ. ಜೆಡಿಎಸ್, ಕೆಜೆಪಿ, ಬಿಎಸ್ಆರ್ ಪಕ್ಷಗಳಲ್ಲಿಯೂ ಟಿಕೆಟ್‌ಗಾಗಿ ಆಕಾಂಕ್ಷಿಗಳು ಕ್ಯೂನಲ್ಲಿ ನಿಂತಿದ್ದರೂ ಅಷ್ಟೇನೂ ನುಗ್ಗಾಟ ಇರಲಿಲ್ಲ. ಕಾರಣ ಎಲ್ಲರಿಗೂ ತಿಳಿದಿರುವುದೇ. ಕಾಂಗ್ರೆಸಿನ ದೆಹಲಿ ನಾಯಕರು ಕರ್ನಾಟಕದ ಬೆಳವಣಿಗೆಗಳ ಬಗ್ಗೆ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದರೂ ಅಂತರಂಗದಲ್ಲಿ ಖುಷಿ ಪಟ್ಟುಕೊಂಡಿದ್ದಾರೆ. ಅನೇಕ ವರ್ಷಗಳ ವನವಾಸದ ನಂತರ ಕರ್ನಾಟಕದಲ್ಲಿ ಪಟ್ಟಕ್ಕೇರುತ್ತಿದ್ದೇವೆ ಎಂಬುದರ ಶುಭಶಕುನವಿದು ಎಂದುಕೊಳ್ಳುತ್ತಿದ್ದಾರೆ. ಆದರೆ ಸಾಕಷ್ಟು ಅನುಭವ ಪಡೆದಿರುವ ಕರ್ನಾಟದ ಮತದಾರರು ಈ ನೂಕು ನುಗ್ಗಾಟವನ್ನು ಹೇಗೆ ಅರ್ಥೈಸುತ್ತಾರೆ ಎಂಬುದು ಇನ್ನೂ ನಿಗೂಢವಾಗಿದೆ.

ತಮ್ಮ ಸೇವೆಗಾಗಿ ಸಾವಿರಾರು ಜನ, ಸಾಕಷ್ಟು ದುಡ್ಡು ಇದ್ದವರು, ಸಾಲಾಗಿ ನಿಂತಿರುವುದನ್ನು ಕಂಡು ಸಾಮಾನ್ಯ ಮತದಾರರು ದಂಗಾಗದೆ ಇರಲಾರರು. ಊಟಕ್ಕಿಲ್ಲದವರು, ಉದ್ಯೋಗಕ್ಕಾಗಿ ಪರಿತಪಿಸುವವರು, ತಲೆಯ ಮೇಲೊಂದು ಸೂರು ಇಲ್ಲದವರು ಲಕ್ಷಾಂತರ ಮಂದಿ ಇಲ್ಲೇ, ಅವರ ಕಣ್ಣೆದುರಿನಲ್ಲೇ ಬಟಾಬಯಲಿನಲ್ಲಿರುವಾಗ, ಇವರು ಕಾಂಗ್ರೆಸ್ ಕೋಟೆ ಬಾಗಿಲಿಗೆ ಏಕೆ ಸಾಲು ನಿಂತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲಾಗದೆ ಮತದಾರರು ಗೊಂದಲಕ್ಕೀಡಾಗಿದ್ದಾರೆ. ಇವರು ಭಾರೀ ಶ್ರಮಪಟ್ಟು ಮುಚ್ಚಿಟ್ಟಿದ್ದ ನಿಧಿಯನ್ನು ಹೊತ್ತು ತಂದಿರುವುದನ್ನು ನೋಡಿದರೆ ಮತದಾರರು ಅನುಮಾನ ಪಡದೆ ಇರುತ್ತಾರಾ?


ಸುತ್ತಿ ಬಳಸಿ ಮಾತನಾಡುವುದರಿಂದ ಪ್ರಯೋಜನವಿಲ್ಲ. ಇದು "ದುಡ್ಡು ಮಾಡುವ ದಂಧೆ". ಗೆಲ್ಲುವ ಪಕ್ಷದಲ್ಲಿ ಬಂಡವಾಳ ಹೂಡಿದರೆ ಲಾಭ ಗ್ಯಾರಂಟಿ ಎಂಬ ಸರಳ ಲೆಕ್ಕಾಚಾರ ಈ ನೂಕು ನುಗ್ಗಾಟಕ್ಕೆ ಕಾರಣ. ಈ ಲೆಕ್ಕಾಚಾರವನ್ನು ಸುಳ್ಳುಮಾಡುವ ಸಾಮರ್ಥ್ಯ ಇರುವುದು ಮತದಾರರ ಬಳಿಯಲ್ಲಿ. ಈ ಸಲದ ರೇಸ್‌ನಲ್ಲಿ ಕಾಂಗ್ರೆಸೇ ಗೆಲ್ಲುವ ಕುದು- [ರೆ] ... ಮೇಲೆ ಹಣ ಹೂಡಲು ... ರೆ ಎಂದು "ದುಡ್ಡು ಮಾಡುವ ದಂಧೆ" ಯವರು ಕಾಂಗ್ರೆಸ್ ... ರಾಜಕೀಯವನ್ನು ಮುಂದಾಗಿದ್ದಾರೆ. ಇಲ್ಲಿ ಜನಸೇವೆಯ ಪ್ರಶ್ನೆ ಅಪ್ರಸ್ತುತ. ಜನಸೇವೆ ಎಂಬ ... ದುಡ್ಡು ಮಾಡುವ ದಂಧೆಯಾಗಿ ಪರಿವರ್ತಿಸಿರುವ ಲೂಟಿಕೋರರು ನೇಣುಹಾಕಿಕೊಳ್ಳುವಂತೆ ಮಾಡುವ ಸಾಮರ್ಥ್ಯವನ್ನು ಮತದಾರರು ಈ ಸಲ ಸಮರ್ಪಕವಾಗಿ ಬಳಸಿಕೊಳ್ಳುತ್ತಾರೆ ಎಂದು ಆಶಿಸೋಣ.

ಗೊಂದಲದ ಗೂಡಿನೊಳಗೆ . . .

ರಾಷ್ಟ್ರೀಯ ಪಕ್ಷಗಳು ಎನಿಸಿಕೊಂಡಿರುವ ಕಾಂಗ್ರೆಸ್, ಬಿಜೆಪಿ ಪಕ್ಷಗಳು, ಪ್ರಾದೇಶಿಕ ಎಂದು ಕರೆಸಿಕೊಳ್ಳಲು ಅನಿವಾರ್ಯವಾಗಿ ಇಷ್ಟ ಪಡುವ ಜಾತ್ಯಾತೀತ ಜನತಾ ದಳ, ಕೆಜೆಪಿ, ಬಿಎಸ್ಆರ್ ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಇನ್ನೂ ಅಂತಿಮಗೊಳಿಸಲು ಆಗಿಯೇ ಇಲ್ಲ!

ಪ್ರಜಾಸೇವಕರು, ತೋಳೇರಿಸಿದ ಮಲ್ಲರು!

ಈಗಾಗಲೇ ನಾಮಪತ್ರ ಸಲ್ಲಿಕೆಯ ಪ್ರಕ್ರಿಯೆ (ಏಪ್ರೀಲ್ 10 ರಿಂದ) ಆರಂಭಗೊಂಡಿದೆ. ಇಂದೇ ಕಾಂಗ್ರೆಸ್‌ನ ಅಂತಿಮ ಪಟ್ಟಿ ಪ್ರಕಟವಾಗಬೇಕಿತ್ತು. ಬಿಜೆಪಿ ಹೇಳಿಕೊಂಡಂತೆ ಎಂದೋ ಅದೂ ಮುಗಿದಿರಬೇಕಿತ್ತು. ಆದ- ರೆ ಮತ್ತೆರಡು ದಿನಗಳನ್ನು ಆ ಎರಡೂ ಪಕ್ಷಗಳೂ ತೆಗೆದುಕೊಂಡಿರುವುದು ಅವುಗಳ ದಯನೀಯ ,ಸ್ಥಿತಿಯನ್ನು ತೋರಿಸುತ್ತದೆ. ಕೆಲವೊಮ್ಮೆ ತಮ್ಮ ಎದುರಾಳಿ ಅಭ್ಯರ್ಥಿಯ 'ತೂಕ' ಅನುಸರಿಸಿ ತಾವು ಅಭ್ಯರ್ಥಿಯನ್ನು ಹಾಕಬೇಕು ಎಂಬುದೇನೋ ಒಂದು ಲೆಕ್ಕಚಾರ. ಆದರೆ ಈಗಿನ ತಿಣುಕಾಟ ಅದಲ್ಲ! ಅಭ್ಯರ್ಥಿಯ ಹೆಸರು ಅಂತಿಮಗೊಳಿಸಲು ಸಾಧ್ಯವಾಗುತ್ತಲೇ ಇಲ್ಲ. ಮುಖ್ಯವಾಗಿ ಸ್ಪರ್ಧಿಸಲು ಹಲವರ ಪೈಪೋಟಿ, ಆಕಾಂಕ್ಷಿಗಳು ಹತ್ತಾರು, ಅಂತಹ ಆಕಾಂಕ್ಷಿಗಳಿಗೆ ಬೆಂಬಲವಾಗಿ ನಿಂತಿರುವ ಆಯಾ ಪಕ್ಷದ ಅತೀ ಭಾರವಿರುವ ನಾಯಕರು! ಗಣದ ಥೈಲಿ ಹಿಡಿದಿರುವ ಪ್ರಜಾಸೇವಕರು, ಜಾತಿಗಳ ಬಲಾಬಲಕ್ಕಾಗಿ ತೋಳೇರಿಸಿದ ಮಲ್ಲರು!



ಈ ವಾರ
■ ಎಸ್.ವೈ.ಗುರುಶಾಂತ್

ಈ ಪಕ್ಷಗಳ ನಾಯಕರು ದೆಹಲಿಯಲ್ಲೀಗ ಬೀಡು ಬಿಟ್ಟಿದ್ದಾರೆ! ಹೈಕಮಾಂಡ್‌ನ ಮುಂದೆ ಡಿಮಾಂಡ್ ಹಾಕಿ ಝುಂಡಾ ಊರಿದ್ದಾರೆ. ಚುನಾವಣೆ ರಾಜ್ಯ ಮಟ್ಟದ್ದಾದರೂ ತೀರ್ಮಾನ ದೆಹಲಿ ದರ್ಬಾರಿನಲ್ಲೇ! ರಾಜಕಾರಣವೆಂಬುದು ಸಹ ಜಾಗತೀಕರಣದಲ್ಲಿ ಕೇಂದ್ರೀಕರಣಗೊಳ್ಳುತ್ತಿದೆ. ಅಧಿಕಾರ ಬಂದ ನಂತರ ಫಲಾನುಭವ ಅಲ್ಲಿಂದಲೇ ಮೊದಲ್ಗೊಂಡು ಕೆಳಗೆ ಸರಿಯುತ್ತದೆ. ಎಲ್ಲವೂ ಹೂಡಿಕೆ ಉದ್ಯಮ, ಲಾಭದ ವಹಿವಾಟುಗಳೇ! ಹೀಗಾಗಿ ಮಕ್ಕಳು, ಮೊಮ್ಮಕ್ಕಳಿಗೂ, ಸಾಧ್ಯವಾದರೆ ನೆಂಟರಿಗೂ ಟಿಕೇಟ್ ಕೊಡಿಸಲು ಪೈಪೋಟಿಯಿದೆ. ಕಾಂಗ್ರೆಸ್ ಇನ್ನೇನು ಅಧಿಕಾರಕ್ಕೆ ಬಂದೇ ಬಿಡುತ್ತದೆ ಎಂಬ ಭ್ರಮಾಲೋಕ ಸೃಷ್ಟಿಯಾದ ನಂತರ ಈ ಪಕ್ಷಕ್ಕೆ ಡಿಮಾಂಡ್ ಹೆಚ್ಚಾಗಿದೆ. ಹೀಗಾಗಿ ಈಗ ಹೆಚ್ಚು ಬಡಿದಾಟವೂ ಆ ಪಕ್ಷದಲ್ಲೇ ನಡೆದಿದೆ.


ಒತ್ತಡಗಳೋ ಒತ್ತಡಗಳು

ಈಗಂತೂ ಪ್ರಕಟಗೊಂಡಿರುವ ಕ್ಷೇತ್ರಗಳಲ್ಲಿ ಆಕಾಂಕ್ಷೆಗಳಿಂದ ಪ್ರತಿಭಟನೆಗಳು ನಡೆಯುತ್ತಿವೆ. ಅ ಪ್ರಕಟಿತ ಕ್ಷೇತ್ರಗಳಲ್ಲಿ 'ಟಿಕೇಟ್' ಕೊಡಿರೆಂದು ಆಗ್ರಹಿಸಲಾಗುತ್ತಿದೆ. ಅತೃಪ್ತಗೊಂಡವರು ಅಪ್ಪಿಕೊಂಡಿದ್ದ ಪಕ್ಷ ತೊರೆದು ಬೇರೆ ಪಕ್ಷಗಳತ್ತ ಗುಳೇ ಹೊರಟಿದ್ದಾರೆ. ಕಳಂಕಿತರಿಗೆ, ಅಡ್ಡ ಮತದಾನ ಮಾಡಿದವರಿಗೆ, ಅಧಿಕಾರ ಅರಸಿ ವಲಸೆ ಬಂದವರಿಗೆ ಟೀಕೆಟ್ ನೀಡುವುದಿಲ್ಲವೆಂದೇನೋ ದೊಡ್ಡದನಿಯಲ್ಲಿ ಹೇಳಿದ್ದನ್ನು ಅದೇ ಕಾಂಗ್ರೆಸ್ ಉಲ್ಲಂಘಿಸಿತು.

ಇದು ಬಹುತೇಕ ಎಲ್ಲಾ ಪಕ್ಷಗಳಲ್ಲಿಯೂ ಇದೆ. ಕಾಂಗ್ರೆಸ್‌ನಲ್ಲಿ ಅತ್ಯಧಿಕ. ಬಿಜೆಪಿಗೆ ಆಕಾಂಕ್ಷೆಗಳ ಒತ್ತಡ ಇಲ್ಲದಿದ್ದರೂ ತನ್ನನ್ನು ಸ್ವಚ್ಛ, ಶಿಸ್ತು ಬದ್ಧ ತತ್ವನಿಷ್ಠ ಎಂದು ಚುನಾವಣೆಯ ಕಾಲದಲ್ಲಿ ಎಂದಾದರೂ ತೋರಿಸಿಕೊಳ್ಳುವ ಪ್ರಯತ್ನವಂತೂ ಈಗ ಅಸಾಧ್ಯವೇ ಆಗಿದೆ. ಜೆಡಿ(ಎಸ್) ನದೂ ಅಷ್ಟೇ. ಕನಿಷ್ಠ ಗೌಡರ ಕುಟುಂಬದೊಳಗಿನ ಒತ್ತಡವನ್ನೂ ಇನ್ನೂ ನಿವಾರಿಸಿಕೊಂಡಿಲ್ಲ.

ಒಟ್ಟಾರೆ 'ಟೀಕೇಟ್'ನ ಸುತ್ತ ಪಕ್ಷ ನಿಷ್ಠೆ ಎಂಬುದು ತಲೆಕೆಳಗೆ ಹಾಕಿ ಗಿರಕಿ ಹೊಡೆಯುತ್ತಲಿದೆ. ಮುಕ್ತ ಮಾರುಕಟ್ಟೆಯ ವ್ಯಾಪಾರೋದ್ಯಮದಲ್ಲಿ ಕಂಪನಿ ಬ್ರಾಂಡ್ ಬಹಳ ಮುಖ್ಯ ಪಾತ್ರ ವಹಿಸುತ್ತದೆ ಅಲ್ಲವೇ? ಉದಾರಿಕರಣದ ಯುಗದಲ್ಲಿ ಪಕ್ಷದ ಚಿಹ್ನೆ ಎಂಬುದೂ ಒಂದು ಬಿಕರಿಗಿಟ್ಟ ಬ್ರ್ಯಾಂಡ್! ಹಾಗೇ ಈ ಪಕ್ಷಗಳ ರಾಜಕಾರಣವೂ ಸಹ. ಅದರಿಂದ ಹೊರಗೆ ಉಳಿಯಲಾದರೂ ಹೇಗೆ ಸಾಧ್ಯ? ಅಂತೂ ಬಡವರಿಂದ ಬಿರಿಯುತ್ತಿರುವ ಕರ್ನಾಟಕ ರಾಜ್ಯದಲ್ಲಿ ಇವರನ್ನು ಪ್ರತಿನಿಧಿಸಿ ನೂರಾರು ಕೋಟಿ ರೂ.ಗಳ ಶ್ರೀಮಂತ

ಪುಟ 4 ಕ್ಕೆ



ಕಾಂಗ್ರೆಸ್, ಬಿಜೆಪಿಗೆ ಪರ್ಯಾಯ ಶಕ್ತಿ ತನ್ನಿ

"ಮಳವಳ್ಳಿಯಲ್ಲಿ ಸೀತಾರಾಂ ಯೆಚೂರಿ ಕರೆ"

ದೇಶದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯ ಶಕ್ತಿ ತರಬೇಕಿದೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಹಾಗೂ ರಾಜ್ಯ ಸಭಾ ಸದಸ್ಯ ಸೀತಾರಾಂ ಯೆಚೂರಿ ಇಲ್ಲಿ ಕರೆ ನೀಡಿದ್ದಾರೆ. ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ, ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಿಪಿಐ(ಎಂ) ಆಯೋಜಿಸಿದ್ದ ರಾಜಕೀಯ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.



ದೇಶದಲ್ಲಿ ಶ್ರೀಮಂತ ಮತ್ತು ಬಡವರೆಂಬ ಎರಡು ರೀತಿಯ ಸಮಾಜ ನಿರ್ಮಾಣದತ್ತ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಕೆಲಸ ನಿರ್ವಹಿಸುತ್ತಿವೆ. ಈ ಎರಡರ ನಡುವೆ ಪರ್ಯಾಯ ಶಕ್ತಿಯಾದ ಎಡಪಕ್ಷಗಳನ್ನು ಬೆಂಬಲಿಸಬೇಕೆಂದು ಅವರು ಈ ಸಂದರ್ಭದಲ್ಲಿ ಮನವಿ ಮಾಡಿದರು.

ಪ್ರಸಕ್ತ ಕರ್ನಾಟಕ ಚುನಾವಣೆ ಪರ್ಯಾಯ ಶಕ್ತಿಗೆ ವೇದಿಕೆಯಾಗಿದೆ ಎಂದ ಅವರು, ರಾಜ್ಯದ 16 ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಸ್ಪರ್ಧಿಸಿ ಗೆದ್ದರೆ ಸಾಕೆ? ಎಂಬ ಚಿಂತನ ನಿಮ್ಮಲ್ಲಿರಬಹುದು. ಆದ-ರೆ ಪರ್ಯಾಯ ಶಕ್ತಿ ನಿರ್ಮಿಸಲು ಶಾಸನ ಸಭೆಯಲ್ಲಿ ಈ 16 ಜನರು ಹೋರಾಟವನ್ನು ಇತರರು ಮಾಡಲಾರರು. ಈ ಸಿಟ್ಟಿನಲ್ಲಿ ಪರ್ಯಾಯ ಶಕ್ತಿಯನ್ನು ಬಲಪಡಿಸುವ ಭಾಗವಾಗಿ ಕೆ. ಬಸವರಾಜು ಅವರಂಥ ವ್ಯಕ್ತಿಗಳಿಗೆ ಮತ ಹಾಕಿ ಅವರನ್ನು ಗೆಲ್ಲಿಸಿದಾಗ ಮಾತ್ರ ನಿಮ್ಮ ಗೆಲುವು ಸಾಧ್ಯವೆಂದು ಯೆಚೂರಿ ತಿಳಿಸಿದರು.

ದೇಶದ ಪ್ರಧಾನಿ ಹುದ್ದೆಗೆ ರಾಹುಲ್ ಗಾಂಧಿ ಮತ್ತು ನರೇಂದ್ರ ಮೋದಿಯವರ ಬಗ್ಗೆ ವ್ಯಾಪಕ ಚರ್ಚೆಗಳು ಕೇಳಿ ಬರುತ್ತಿವೆ. ಆದರೆ ಚುನಾವಣೆಯೇ ಆಗದೇ ಇಂತಹ ಚರ್ಚೆಗಳು ಅಪ್ರಸ್ತುತ ಎಂದರು. ಜನಸಾಮಾನ್ಯರಿಗೆ ಸಬ್ಸಿಡಿ ನೀಡಲು ಹಣವಿಲ್ಲ ಎಂದು ಹೇಳುವ ಈ ಸರ್ಕಾರಗಳು, ಶ್ರೀಮಂತರ ವಹಿವಾಟಿಗೆ ಭಾರಿ ಪ್ರಮಾಣದಲ್ಲಿ ರಿಯಾಯಿತಿ ನೀಡಿವೆ ಎಂದು ಅವರು ಆರೋಪಿಸಿದರು. ಕೇಂದ್ರ ಸರ್ಕಾರ ವಿವಿಧ ಹಗರಣದಲ್ಲಿ ಸಂಪೂರ್ಣವಾಗಿ ಮುಳುಗಿದೆ. ಇದಕ್ಕೆ ಪೂರಕವಾಗಿ 2ಜಿ ಸ್ಪೆಕ್ಟ್ರಂ ಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣ, ಕಲ್ಲಿದ್ದಲು ಹಗರಣಗಳಲ್ಲಿ ಹಣ ಲೂಟಿ ಮಾಡಿದೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ರಾಹುಲ್ ಗಾಂಧೀ ಮತ್ತು ಅವರ ಭಾವ ವಡೇರಾ ಸೇರಿ ನಡೆಸಿದ ಮತ್ತೊಂದು ಹಗರಣ ಹಿಂದಿಯಲ್ಲಿ 'ಜೀಜಾಜಿ ಹಗರಣ' ಎಂದು ಹೆಸರಾಗಿದೆ ಎಂದು ಛೇಡಿಸಿದರು.

ಬಿಜೆಪಿಯು ಗುಜರಾತನಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ನರಮೇಧ ನಡೆಸಿದ್ದು, ಈಗ ಅವರನ್ನೇ ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸಲಾಗುತ್ತಿದೆ. ಇದಕ್ಕೆ ಆರ್‌ಎಸ್‌ಎಸ್ ನಾಟಕವಾಡುತ್ತಿದೆ ಎಂದು ಟೀಕಿಸಿದರು.

ಮೊದಲ ಯುಪಿಎ ಸರ್ಕಾರಕ್ಕೆ ಸಿಪಿಐ(ಎಂ) ಬೆಂಬಲ ನೀಡಿ, ಹೋರಾಟ ನಡೆಸಿದ ಹಿನ್ನೆಲೆಯಲ್ಲಿ ದೇಶದಲ್ಲಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಜಾರಿಯಾಯಿತು. ರೈತರ ಸಾಲ ಮನ್ನಾ ಮಾಡಲಾಯಿತು ಎಂದರು. ಜನಪರ ನೀತಿಗಳನ್ನು ಜಾರಿಗೊಳಿಸಲು ಸಿಪಿಐ(ಎಂ) ನಿಂದ ಮಾತ್ರ ಸಾಧ್ಯ. ಆದ್ದರಿಂದ ಸಿಪಿಐ(ಎಂ) ಅಭ್ಯರ್ಥಿ ಕೆ. ಬಸವರಾಜು ಅವರಿಗೆ ಮತ ಹಾಕುವಂತೆ ಮನವಿ ಮಾಡಿದರು. ರಾಷ್ಟ್ರ ರಾಜಕಾರಣದಲ್ಲಿ ಸಂಘ ಪರಿವಾರ ಶಕುನಿ ಮಾವನಂತೆ. ಈ ಶಕುನಿ ಮಾವನ ಮಾತು ಕೇಳಿ ಆಡಳಿತ ನಡೆಸಿದರೆ ಕೌರವರಿಗೆ ಆದ ಗತಿಯೇ ಬಿಜೆಪಿಯವರಿಗೂ ಬರುತ್ತ ಎಂದು ಎಚ್ಚರಿಸಿದರು.

ರೈತರಿಗೆ ಕಂಟಕ

ಇದೇ ತಿಂಗಳು 14 ರಂ ಯುರೋಪಿಯನ್ ಯೂನಿಯನ್ ರಾಷ್ಟ್ರ ಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ವಿದೇಶ ತೆರಳುತ್ತಿದ್ದು, ಅಲ್ಲಿ ವಿದೇಶಿ ವಸ್ತುಗಳನ್ನು ನ ರಾಷ್ಟ್ರದಲ್ಲಿ ಮುಕ್ತವಾಗಿ ಮಾರಾಟ ಮಾಡು ವ್ಯವಸ್ಥೆಗೆ ಸಹಿ ಮಾಡಲಿದ್ದಾರೆ. ಇದ ರಿಂದಾಗಿ ರಾಷ್ಟ್ರದ ಜನತೆ, ಅದರಲ್ಲೂ ರೇ ಬೆಳೆಗಾರರಿಗೆ ತುಂಬ ತೊಂದರೆಯಾಗಲಿ ಎಂದು ಅವರು ವಿಷಾದಿಸಿದರು.

ಅಧ್ಯಕತೆಯನ್ನು ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂ. ಪುಟ್ಟುಮಾದ ವಹಿಸಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ ಜಿಲ್ಲಾ ಸಮಿತಿ ಸದಸ್ಯ. ಜಿ.ರಾಮಕೃ ಜಿಲ್ಲಾ ಸಮಿತಿಯ ಸದಸ್ಯ ಹಾಗೂ ಮಳವ ಮೀಸಲು ಕ್ಷೇತ್ರದ ಅಭ್ಯರ್ಥಿ ಕೆ.ಬಸವರಾಜ ಸದಸ್ಯರಾದ ದೇವಿ, ಟಿ.ಎಲ್ ಕೃಷ್ಣೇಗೌ ಟಿ.ಎಚ್. ಅನಂದ್, ಸಿ. ಕುಮಾರಿ, ಯಶವಂತ್, ಎನ್. ಸುರೇಂದ್ರ, ಎ ಲಿಂಗರಾಜುಮೂರ್ತಿ, ಮಹದೇವಮ ಹನುಮೇಗೌಡ, ರಾಜ್ಯ ಸಮಿತಿ ಸದಸ್ಯ ಎಸ ವೈ. ಗುರುಶಾಂತ್, ಮತ್ತಿತರರ ಪ್ರಮುಖ ಇದ್ದರು.

ಕಾರ್ಯಕ್ರಮಕ್ಕೂ ಮುನ್ನ ತಾಲೂಕಿ ಗಡಿಭಾಗವಾದ ಹೊಂಬೇಗೌಡದೊ ಗೇಟ್‌ಗೆ ಆಗಮಿಸಿದ ಸೀತಾರಾಂ ಯೆಚೂ ಅವರನ್ನು ಕೆಂಪು ಬಾವುಟದ ಸ್ವಾಗತ ನೀಡಿ ಸಿಪಿಐ(ಎಂ) ಕಾರ್ಯಕರ್ತರು ಬೈಕ್ ರ್ಯಾ ಮೂಲಕ ಪಟ್ಟಣಕ್ಕೆ ಕರೆ ತಂದರು.

ವರದಿ : ಕೆ. ಹನುಮೇಗೌ

ಗೊಂದಲದ ಗೂಡಿನೊಳಗೆ . . .

ಪುಟ 3 ರಿಂದ

ಜನ ಪ್ರತಿನಿಧಿಗಳು ವಿಧಾನಸಭೆಯಲ್ಲಿ ಬಹುಸಂಖ್ಯೆಯಲ್ಲಿ ತುಂಬಿಕೊಳ್ಳಲಿರುವುದು ನಿಚ್ಚಳ.

ಮೌನ ಕಣಿವೆಗಿಳಿದ ಪಕ್ಷಗಳು!

ಪಕ್ಷದ ಟಿಕೇಟ್ ನೀಡುವ, ಕೊಡಿಸುವ ಈ ವ್ಯವಹಾರದಲ್ಲಿ ಆಕಾಂಕ್ಷಿಗಳಿಂದ ಕೋಟ್ಯಾಂತರ ರೂಪಾಯಿಗಳ ಕೈ ಬದಲಾವಣೆಯಾಗಿದೆಯೆಂಬ ಬಹಿರಂಗ ಆರೋಪಗಳೂ, ದೂರುಗಳೂ ಕೇಳಿ ಬಂದವು. ಕಾಂಗೆಸ್‌ನ ಹೈ ಕಮಾಂಡ್ ತನಿಖೆಯ ಉನ್ನತ ಸಮಿತಿಯನ್ನೂ ರಚಿಸಿತು. ಈ ಆರೋಪಗಳು ಜೆಡಿ(ಎಸ್), ಬಿಜೆಪಿಯ ಮೇಲೂ ಕೇಳಿ ಬಂದವು. ಆದರೆ ಅದರ ಹೈಕಮಾಂಡ್‌ಗಳು 'ಮೌನ ಕಣಿವೆ'ಯಲ್ಲಿ ಜಾರಿವೆ.

ಆಮಿಷಗಳು

ಅಂತೆಯೇ ಚುನಾವಣೆಯಲ್ಲಿ ಗೆಲ್ಲಲು, ಈಗಾಗಲೇ ವಿವಿಧ ಪಕ್ಷಗಳ ಅಭ್ಯರ್ಥಿಗಳು ತಮ್ಮ 'ಶಕ್ತ್ಯಾನುಸಾರ' ಜನರನ್ನು 'ಮನ ಒಲಿಸಿ, ಕೊಳ್ಳಲಾರಂಭಿಸಿದ್ದಾರೆ. ಚುನಾವಣಾ ಆಯೋಗದ ನೀತಿ ಸಂಹಿತೆ ಅನುಸರಿಸಿಯೇ 'ಬಾಡೂಟಗಳು', ಪಾರ್ಟಿಗಳು ಏರ್ಪಡಾಗುತ್ತಿವೆ. ಕೆಲವೆಡೆ 'ಬಿರಿಯಾನಿ'ಯನ್ನು, ಬಾಟಲಿಗಳನ್ನು ಆಯೋಗದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಲೆಕ್ಕವಿಲ್ಲದ, ಲಕ್ಷಾಂತರ (ಕೋಟಿಯ ಹತ್ತಿರ) ಹಣವನ್ನು, ಹಂಚುತಿದ್ದ ಸೀರೆ, ಟಿ.ವಿ, ಫ್ರಿಡ್ಜ್ ನಂತಹ ಸಾಮಾನುಗಳನ್ನು ಜಪ್ತಿ ಮಾಡಲಾಗಿದೆ. ಅಡಗಿಸಿಟ್ಟ ವಿಸ್ಕಿ, ಬ್ರಾಂದಿ ಕೇಸ್‌ಗಳನ್ನು ಹೊರಗೆಳೆಯಲಾಗಿದೆ. ನೀತಿ ಸಂಹಿತೆ ಬಿಗಿಯಾಗಿ ಜಾರಿಯಲ್ಲಿದ್ದರೂ ಇವು ಎಗ್ಗಿಲ್ಲದೇ ನಡೆಯುತ್ತಿವೆ. ಹೀಗೆ ಮತದಾರರಿಗೆ ಆಮಿಷ ಒಡ್ಡಲಾಗುತ್ತದೆ. ಅದೂ ಇನ್ನೂ ನಾಮಪತ್ರವೇ ಸಲ್ಲಿಕೆಯಾಗದಿರುವಾಗ. ಇತ್ತೀಚೆಗೆ ಕಾಂಗ್ರೆಸ್‌ನ ಮಾಜಿ ಮಂತ್ರಿ ಡಿ.ಕೆ. ಶಿವಕುಮಾರ್ ರವರದ್ದೆಂದು ಹೇಳಲಾದ ಅಪಾರ ಹಣ ವಸ್ತುಗಳನ್ನು ಜಪ್ತಿ ಮಾಡಿರುವುದು ಅದರಲ್ಲೊಂದು. ಇಂತಹದ್ದೇ ಪ್ರಕರಣಗಳು ರಾಜ್ಯದ ಹತ್ತಾರು ಕಡೆಗಳಲ್ಲಿ ವರದಿಯಾಗುತ್ತಿರುವುದು ನಾಳಿನ ಮುಕ್ತ ಚುನಾವಣಾ ಚಿತ್ರದ ಸ್ಯಾಂಪಲ್‌ಗಳಾಗಿವೆ.

ವೈಫಲ್ಯಗಳು

ಕಳೆದ ಒಂದೆರಡು ಚುನಾವಣೆಗಳನ್ನು ಕಂಡವರಿಗೆ, ಈ ಹಿಂದಿನ ಅವಧಿಯಲ್ಲಿ ನಡೆದ ಲೂಟಿ, ಭರಾಟೆಗಳನ್ನೂ ಬಲ್ಲವರಿಗೆ ಹೋಗಲಿ ಸಾಮಾನ್ಯ ಜನತೆಗೂ ಮನವರಿಕೆಯಾಗಿರುವ ಸಂಗತಿಯೆಂದ-ರೆ: ಈ ಚುನಾವಣೆಯಲ್ಲಿ ಹಣ, ಹೆಂಡ, ಆಮಿಷಗಳ ಹೊಳೆ ಹಿಂದೆಂದಿಗಿಂತಲೂ ಅತ್ಯಧಿಕವಾಗಿ ಹರಿಯಲಿದೆ ಎಂಬುದು. ಇದನ್ನು ನಮ್ಮ ಕೇಂದ್ರದ ಚುನಾವಣಾ ಆಯೋಗವೂ ನಿರೀಕ್ಷಿಸಿದೆಯಂತೆ. ಆದ-ರೆ ಪೂರ್ಣ ತಡೆಯಲು ಸಾಧ್ಯವಾದೀತೆ? ಎಂದಾಗ ಉತ್ತರ ಕ್ಷೀಣ ಧ್ವನಿಯದ್ದು, ಅಥವಾ ಇಲ್ಲವೆನ್ನುವಂತಹದ್ದು. ಆದ್ದರಿಂದಲೇ ಈ ಯಾವ ಪಕ್ಷಗಳಿಗೂ ತಮ್ಮ ರಾಜಕೀಯ, ತಾತ್ವಿಕ ನಿಲುಮೆಗಳ ಆಧಾರದಲ್ಲಿ ಚುನಾವಣೆ ಎದುರಿಸುತ್ತಿಲ್ಲ, ಅಭ್ಯರ್ಥಿಗಳನ್ನು ಆರಿಸುತ್ತಿಲ್ಲ. ಅವು ಜನರನ್ನು ನೇರ ಹಾದಿಯಲ್ಲಿ ಗೆಲ್ಲಬಹುದೆಂಬ ಯಾವ ನಂಬಿಕೆಯನ್ನೂ ಇರಿಸಿಕೊಂಡಿಲ್ಲ ಮತ್ತು ಈ ಮೂಲಕ ತಮ್ಮ ವೈಫಲ್ಯಗಳನ್ನು ಒಪ್ಪಿಕೊಂಡಿವೆ.

ರಕ್ತ ಸಿಕ್ತವೇ?

ಆದರೆ ಈಗಿನ ಬೆಳವಣಿಗೆಗಳು ಹಣ-ಆಮೀಷಗಳ ಮಟ್ಟಕ್ಕೆ ಮಾತ್ರ ಸೀಮಿತಗೊಳ್ಳುವವು ಎಂದು ಹೇಳಲು ಹಿಂಜರಿಕೆಯನ್ನುಂಟು ಮಾಡುವಂತಹ ವಾತಾವರಣ ಇದೆ. ಕಾಂಗ್ರೆಸ್‌ನ ಯಾವುದೋ ನಾಯಕನಿಗೆ ಟಿಕೆಟ್ ಕೊಡಿರೆಂದು ಕಾಂಗ್ರೆಸ್ ಕಛೇರಿಯೆದುರಿನ ಪ್ರತಿಭಟನೆಯ ಪೊಲೀಸರ ಲಾಠಿ ಚಾರ್ಜ್, ನೂಕುನುಗ್ಗಲಿನ ಒಬ್ಬ ಹೃದಾಯಾಘಾತದಿಂದ ಸತ್ತಿದ್ದಾನೆ!.

ಆದರೆ ಇಲ್ಲಿ ಒಂದು ಅತ್ಯಂತ ದುರಂತ ಘಟನೆ ಬೆಚ್ಚಿ ಬೀಳಿಸಿದೆ. ಇತ್ತೀಚೆಗೆ ಚುನಾ ಪ್ರಚಾರ ಮುಗಿಸಿಕೊಂಡು ಮನೆಗೆ ಹೊರಟ ಶಾಂತಿನಗರದ ಜೆಡಿ(ಎಸ್) ಕಾರ್ಯಕರ್ತ ಲೋಕೇಶ್‌ನನ್ನು(ಅಭ್ಯರ್ಥಿ ಸಂಬಂಧಿಯಂತ ಇರಿದು ಕೊಲ್ಲಲಾಗಿದೆ. (ಇದು ಕಾಂಗ್ರೆ ಶಾಸಕರ ಕೃತ್ಯವೆಂಬ ಆರೋಪವೂ ಕೇಳಿದೆ ಈ ಚುನಾವಣೆಯ ರಕ್ತ ಸಿಕ್ತ ಅಧ್ಯಾಯ 'ಶಾಂತಿನಗರ' ದಿಂದ ಆರಂಭಗೊಂಡಿರ ಈ ಬಾರಿಯಂತೂ, ಭೂ ಮಾಫಿಯಾ, ಗ ಮಾಫಿಯಾ, ಉದ್ಯಮಿಗಳೇ ಪೈಪೋಟಿಯ ಹಿಂದೆಗಿಂತಲೂ ಸ್ಪರ್ದೆಗೆ ಇಳಿಯುತ್ತಿರುವಾ ಸ್ಥಿತಿ ಏನಾಗಬೇಡ ಎಂಬ ಆತಂಕ ಸಹಜ

ಎಚ್ಚರವಿರಲಿ

ಇವೆಲ್ಲವನ್ನೂ ನಮ್ಮ ಮತದಾರರ ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕಾಗಿದೆ ಅರಿಯಬೇಕಿದೆ. ಅಂತಹವರನ್ನು ತಿರಸ್ಕರಿಸು ತಕ್ಕ ಉತ್ತರವನ್ನೂ ಕೊಡಬೇಕಿದೆ. ಪ್ರಜಾಪ್ರಭುತ್ವದ ರಕ್ಷಣೆ ಆಗಬೇಕಿರುವುದ ಜನರಿಗೇ! ಇದು ನಮ್ಮೆಲ್ಲರ ಹೊಣೆ.

ಎಪ್ರೀಲ್ 10, 2013

ಜನಶಕ್ತಿ
ಕನ್ನಡ ವಾರಪತ್ರಿಕೆ

ನೈಜ ಪ್ರಜಾಪ್ರಭುತ್ವಕ್ಕಾಗಿ ವಿಧಾನಸಭಾ ಚುನಾವಣೆಯಲ್ಲಿ ಯುವಜನ ಸ್ಪಂದಿಸಲಿ :

ಕೋ. ಚೆನ್ನಬಸಪ್ಪ



ಯುವಜನರ ಸಮಾವೇಶದಲ್ಲಿ ಮಾತನಾಡುತ್ತಿರುವ ಎಂ.ಬಿ. ರಾಜೇಶ್, ವೇದಿಕೆ ಮೇಲೆರಾಜಶೇಖರ ಮೂರ್ತಿ, ನಟ ಚೇತನ, ಭರತ್‌ರಾಜ್, ಹಿರಿಯ ಸಾಹಿತಿಗಳಾದ ಕೋ.ಚೆ., ಮುಂತಾದವರು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಯ ಮೂಲಭೂತ ಹಕ್ಕುಗಳು ಅನುಷ್ಠಾನಗೊಂಡಾಗ ಮಾತ್ರ ಅದು ಪ್ರಜಾಪ್ರಭುತ್ವದ ವ್ಯವಸ್ಥೆಯೆಂದು ಖಾತ್ರಿಯಾಗುತ್ತದೆ. ವ್ಯಕ್ತಿ ಸ್ವಾತಂತ್ರ್ಯ ಬೇಕು. ಸಮೃದಿಯಿಂದ ಬದುಕುವಂತಾಬೇಕು. ಮುಖ್ಯವಾಗಿ ಆಹಾರ-ವಸತಿ, ಅರೋಗ್ಯ-ಶಿಕ್ಷಣ ಮತ್ತು ಸೌಹಾರ್ದತೆ ಮತ್ತು ಸಹ ಬಾಳ್ವೆ ಇರಬೇಕು. ಆದರೆ ನಮ್ಮ ದೇಶದಲ್ಲಿ ಇಂದಿಗೂ ಮೇಲು-ಕೀಳು, ಹಸಿವು-ಬಡತನ ದಾರಿದ್ರ್ಯ ತುಂಬಿದೆ. ಇತ್ತೀಚೆಗಂತೂ ಭ್ರಷ್ಟಾಚಾರದ ರಾಜಕಾರಣದಿಂದಾಗಿ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಅಣಕಿಸುವಂತಾಗಿದೆ. ಭ್ರಷ್ಟಾಚಾರವೆಸಗಿರುವವರು ನಮ್ಮದೇ ನಿಜವಾದ ಪ್ರಜಾಪ್ರಭುತ್ವವೆಂದು ಬೀಗುವಂತಾಗಿದೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಯುವಜನ ನೈಜ ಪ್ರಜಾಪ್ರಭುತ್ವಕ್ಕಾಗಿ ಸ್ಪಂದಿಸಬೇಕು. ಹೀಗಾಗಿ ಸಂದರ್ಭದಲ್ಲಿ ಯುವಜನತೆ ಎಚ್ಚೆತ್ತುಕೊಳ್ಳಬೇಕೆಂದು ನಿವೃತ್ತ ನ್ಯಾಯಮೂರ್ತಿಗಳಾದ ಕೋ. ಚೆನ್ನಬಸಪ್ಪನವರು ಹೇಳಿದರು. ಅವರು ಡಿ.ವೈ. ಎಫ್.ಐ.ನ ರಾಜಕೀಯ ಸಮಾವೇಶವನ್ನು ಉದ್ಘಾಟಿಸಿ ಮಾತ್ತಾಡುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಆಶಯ ಸರ್ವರಿಗೂ ಸಮ ಸಮಾನತೆಯಾಗಿತ್ತು. ದೇಶದ ಸಂಪತ್ತು ಮತ್ತು ಸೌಕರ್ಯಗಳೂ ಎಲ್ಲರಿಗೂ ಸಮಾನ ಹಂಚಿಕೆಯಾಗಬೇಕು. ಇಂತಹ ಸಮ



ಸಮಾನತೆಗಾಗಿ ಯುವಜನ ಒಂದಾಗಿ ಮುಂದಾಗಬೇಕೆಂದರು. ಇದು ನಮ್ಮ ಸಂವಿಧಾನದ ಆಶಯವೂ ಆಗಿದೆ ಎಂದರು. ಮುಖ್ಯ ಅಥಿತಿಯಾಗಿ ಭಾಗವಹಿಸಿದ್ದ ಡಿ.ವೈ.ಎಫ್.ಐ. ಅಖಿಲ ಭಾರತ ಅಧ್ಯಕ್ಷರಾದ

> ವಿಧಾನಸಭಾ ಚುನಾವಣೆ ಹತ್ತಿರದಲ್ಲಿದೆ. ರಾಜ್ಯದ ಯುವಜನ ಏನು ಮಾಡಬೇಕು? ಅಧಿಕಾರಸ್ಥರು ಅಥವಾ ಅಧಿಕಾರಾಕಾಂಕ್ಷಿಗಳು ನಾವು ಎಸೆಯುವ ಬಿರಿಯಾನಿ ಪೊಟ್ಟಣ ಕ್ಯಾಚ್ ಹಿಡಿದುಕೊಳ್ಳ ಬನ್ನಿ ಎನ್ನುತ್ತಿದ್ದಾರೆ. ಅವರಿಗೆ ಏನು ಹೇಳಬೇಕು ?
>
> – ಬಿ.ರಾಜಶೇಖರಮೂರ್ತಿ

ಎಂ.ಬಿ.ರಾಜೇಶ್ ರವರು, ಬಿಜೆಪಿ-ಕಾಂಗ್ರೇಸ್ ಒಂದೇ ನಾಣ್ಯದ ಎರಡು ಮುಖಗಳು. ರಾಜಕೀಯ-ಆರ್ಥಿಕ ವಿಷಯಗಳಲ್ಲಿ ಒಂದೇ ತೆರನಾಗಿ ಬಂಡವಾಳಿಗರ ಪರ ನಿಲುವನ್ನು ಅನುಸರಿಸುತ್ತವೆ. ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ 10 ಲಕ್ಷಕ್ಕೂ ಮೀರಿ ಇರುವ ಖಾಲಿ ಹುದ್ದೆಗಳನ್ನು ತುಂಬದೆ, ಹೊರ ಗುತ್ತಿಗೆ ಆಧಾರದಲ್ಲಿ ಯುವಜನರಿಂದ ದುಡಿಸಿಕೊಳ್ಳಲಾಗುತ್ತಿದೆ. ಉದ್ಯೋಗ ಸೃಷ್ಟಿಸುವಂತಹ ಸಾರ್ವಜನಿಕ ಉದ್ದಿಮೆಗಳನ್ನು ಆರಂಭಿಸದೆ, ದೇಶದ ನೈಸರ್ಗಿಕ ಸಂಪತ್ತನ್ನು ಖಾಸಗಿ ಕಂಪನಿಗಳಿಗೆ ಧಾರೆಯಲಾಗುತ್ತಿದೆ. ಸಾರ್ವಜನಿಕ ವಲಯವೂ ಸೇರಿದಂತೆ ಚಿಲ್ಲರೆ ವ್ಯಾಪಾರ, ಆರೋಗ್ಯ-ಶಿಕ್ಷಣ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ವಿದೇಶಿ ಕಾರ್ಪೊರೇಟ್ ಕಂಪನಿಗಳಿಗೆ ಮಣೆಹಾಕಿ ನಮ್ಮ ಸಾಮಾನ್ಯ ಜನತೆಯ ಜೀವನವನ್ನು ಹಾಳುಗೆಡವಲಾಗುತ್ತಿದೆ. ಹೀಗಾಗಿ ಯುವ ಜನತೆ ಚುನಾವಣೆಯ ಸಂದರ್ಭದಲ್ಲಿ ಜನಪರವಾದ ನೀತಿಗಳನ್ನು ಮತ್ತು ಜನಪರ ಚಳುವಳಿಗಳನ್ನು ನಡೆಸುವ ಎಡ ರಾಜಕೀಯ ಪಕ್ಷಗಳನ್ನು ಬೆಂಬಲಿಸಬೇಕೆಂದರು.

ಸಾಮಾಜ ವಿರೋಧಿ ಬೆಳವಣಿಗೆಗಳ ಬಗ್ಗೆ ಯುವಜನತೆ ಧ್ವನಿ ಎತ್ತಬೇಕು– ನಟ ಚೇತನ್

ಖ್ಯಾತ ಚಲನ ಚಿತ್ರ ನಟರಾದ ಚೇತನ್ ರವರು ಮಾತಾಡಿ ನಮ್ಮ ದೇಶದಲ್ಲಿ ಬಡವರು ಇನ್ನೂ ಬಡವರಾಗುತ್ತಿದ್ದಾರೆ. ಶ್ರೀಮಂತರು ಅಗರ್ಭ ಶ್ರೀಮಂತಾರಗುತ್ತಿದ್ದಾರೆ. ಜಾತಿ-ಅಸ್ಪೃಶ್ಯತೆ ಆಚರಣೆಯಲ್ಲಿದೆ. ಮಹಿಳೆಯ ಮೇಲೆ ದೌರ್ಜನ್ಯಗಳ ಹೆಚ್ಚುತ್ತಿವೆ. ಇಂತಹ ಸಾಮಾಜ ವಿರೋಧಿ ಬೆಳವಣಿಗೆಗಳ ಬಗ್ಗೆ ಯುವಜನತೆ ಧ್ವನಿಎತ್ತಬೇಕೆಂದರು. ಇನ್ನೋರ್ವ ಮುಖ್ಯ ಅಥಿತಿಯಾಗಿ ಬಾಗವಹಿಸಿದ್ದ ಸರ್ಕಾರಿ ಕಲಾ ಲಾಲೇಜಿನ ಪ್ರಧ್ಯಾಪಕರಾದ ಡಾ. ಕೆ. ಕೃಷ್ಣಪ್ಪ ಮಾತಾಡಿ ನಮ್ಮ ಮುಂದಿರುವ ವಿಧಾನ ಸಭಾ ಚುನಾವಣೆಯಲ್ಲಿ ಯುವಜನತೆ ಜಾಗರೂಕತೆಯಿಂದ ವರ್ತಿಸಬೇಕೆಂದರು. ಸಮಾವೇಶದ ಅಧ್ಯಕ್ಷತೆಯನ್ನು ಎನ್.ಎಲ್.ಭರತ್‌ರಾಜ್ ವಹಿಸಿದ್ದರು: ಪ್ರಾಸ್ತಾವಿಕವಾಗಿ ಮಾಡಿದ ಬಿ. ರಾಜಶೇಖರಮೂರ್ತಿ, ಡಿ.ವೈ. ಎಫ್.ಐ. ಅಯೋಜಿಸಿದ್ದ ರಾಜಕೀಯ ಸಮಾವೇಶದ ಮೂಲ ಆಶಯ ಮತ್ತು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸಂದರ್ಭದಲ್ಲಿ ಡಿ.ವೈ. ಎಫ್.ಐ. ಅನುಸರಿಬೇಕಾದ ರಾಜಕೀಯ ಧೋರಣೆಯನ್ನು ಲಿಖಿತವಾಗಿ ವಿವರಿಸಿದರು. ವಿವಿಧ ಜಿಲ್ಲೆಗಳಿಂದ ಮತ್ತು ಬೆಂಗಳೂರಿನ ವಿದ್ಯಾರ್ಥಿ-ಯುವಜನರು ಸೇರಿದಂತೆ 300 ಕ್ಕೂ ಹೆಚ್ಚು ವಿದ್ಯಾರ್ಥಿ-ಯುವಜನರು. ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಯುವಜನರ ಆಶೋತ್ತರಗಳಿಗೆ ಸ್ಪಂದಿಸುವ ಸಿಪಿಐ(ಎಂ) ಮತ್ತು ಎಡ ಪಕ್ಷಗಳನ್ನು ಬೆಂಬಲಿಸಿ – ಡಿ.ವೈ.ಎಫ್.ಐ. ಕರೆ :

ಕಾಂಗ್ರೇಸ್‌ನ ಕೇಂದ್ರ ಸರ್ಕಾರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಯುವಜನರನ್ನು ದಿಕ್ಕೆಡಿಸಿವೆ. ಯುವಜನತೆಯು ನಿರುದ್ಯೋಗ-ಬಡತನದ ಸಂಕಷ್ಟದಲ್ಲಿದ್ದಾರೆ. ಪ್ರತಿದಿನ ಭ್ರಷ್ಟಾಚಾರದ ಸುದ್ದಿಗಳು. ರಾಜಕೀಯ ಅರಾಜಕತೆ. ಪ್ರಜಾಪ್ರಭುತ್ವ ವಿರೋಧಿ ಆಡಳಿತಗಳು ಯುವಜನರನ್ನು ದಿಗ್ಭ್ರಮೆಗೊಳಿಸುತ್ತಿವೆ. ರಾಜ್ಯ ಸರ್ಕಾರದ ಇಲಾಖೆಗಳಲ್ಲಿ 2 ಲಕ್ಕಕ್ಕೂ ಮೀರಿ ಉದ್ಯೋಗಗಳು ಖಾಲಿ ಇವೆ. ಈ ಖಾಲಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡು ಯುವಜರಿಂದ ದುಡಿಸಿಕೊಳ್ಳಲಾಗುತ್ತಿದೆ. ಜೀವನ ನಿರ್ವಹಣೆಗಾಗಿ ತಿಂಗಳಿಡೀ ಕೇವಲ 3-4 ಸಾವಿರಕ್ಕಾಗಿ ಲಕ್ಷಾಂತರ ಯುವಜನರು ಅಸಂಘಟಿತ ವಲಯದಲ್ಲಿ ಮೈಮುರಿದು ದುಡಿಯುವಂತಾಗಿದೆ. ಕುಟುಂಬಗಳನ್ನು ಅಗಲಿ ಉದ್ಯೋಗಕ್ಕಾಗಿ ದೂರ ದೂರದ ಊರುಗಳಿಗೆ ವಲಸೆ ಹೋಗುತ್ತಿದ್ದಾರೆ. ಖಾಯಂ ಉದ್ಯೋಗವಿಲ್ಲ. ಹೊರಗುತ್ತಿಗೆ, ದಿನಗೂಲಿ, ಕಾಂಟ್ರಾಕ್ಟ್, ತರಬೇತಿ, ಸಂಭಾವನೆ, ಗೌರವ ಧನ ಮುಂತಾದ ಹೆಸರಲ್ಲಿ ಬಿಟ್ಟಿ ಚಾಕರಿ. ಸಂಬಳ-ಸೌಲಭ್ಯ ಕೇಳಿದರೆ ಸಿಕ್ಕಿರುವ ಕೆಲಸವೂ ದಕ್ಕಲ್ಲ. ವಯಸ್ಸು 30-40 ಮೀರಿದ್ದರೂ ಮದುವೆಗಳಿಲ್ಲ. ಆಗಿದ್ದರೂ ಕುಟುಂಬ ಒಂದೆಡೆ ಇವರೊಂದೆಡೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಭೂಮಿಯನ್ನು ಕಳೆದು ಕೊಂಡು ಯುವರೈತರನ್ನು ಬೀದಿ ಬಿಕಾರಿಗಳನ್ನಾಗಿಸಲಾಗುತ್ತಿದೆ. ಸರ್ವರಿಗೂ ಸೇರಿರುವ ನೈಸರ್ಗಿಕ ಸಂಪತ್ತಿನ ಹಗಲು ದ-ರೋಡೆ. ಇದರಿಂದಾಗಿ ಲಕ್ಷಾಂತರ ಉದ್ಯೋಗ ನಾಶ. ಈ ರೀತಿಯ ಉದ್ಯೋಗ ನಾಶದಿಂದ ಜನಜೀವನವೇ ಅಸ್ತವ್ಯಸ್ಥ.

ಅತ್ಯಂತ ಕಡಿಮೆ ಆದಾಯ. ಅಗತ್ಯ ವಸ್ತುಗಳ ಬೆಲೆ ಏರಿಕೆ. ಪಡಿರತ ಅವ್ಯವಸ್ಥೆ. ಆರೋಗ್ಯ ವೆಚ್ಚ ದುಬಾರಿ. ಮನೆ – ನಿವೇಶನ, ಕುಡಿಯುವ ನೀರೂ ಸಿಗದ ಬವಣೆ. ಇನ್ನೂ ಅಮಾನವೀಯ ಸಾಮಾಜಿಕ ಸಮಸ್ಯೆಗಳು. ಜಾತಿ ತಾರತಮ್ಯ. ಪಂಕ್ತಿ ಬೇಧ. ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲೆ ದೌರ್ಜನ್ಯಗಳು. ಇನ್ನೊಂದೆಡೆ ಕೆಲವರು ಮಾತ್ರ ಐಶರಾಮಿ ಮತ್ತು ಐಭೋಗ ಜೀವನ ನಡೆಸುವ ಪರಿ. ಇಂತಹ ಅವಕಾಶವಿಲ್ಲ ವೆಂಬ ಪ್ರಶ್ನೆಗಳು. ಇದಕ್ಕಾಗಿ ಸ್ವಾರ್ಥ ಮತ್ತು ಸ್ವಹಿತಾಸಕ್ತಿಗಳಿಗೆ ಕೆಲವು ಮಧ್ಯಮ ವರ್ಗದ ಯುವಜನ ಸೀಮಿತವಾಗಿರುವುದು. ಇಂತಹ ನೂರಾರು ಸಮಸ್ಯೆಗಳಿಂದ ಯುವಜನತೆ ಹತಾಶರಾಗುತ್ತಿದ್ದಾರೆ. ಅತೃಪ್ತಿಗೆ ಒಳಗಾಗುತ್ತಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ತಂದೊಡ್ಡಿರುವುದು

ಪುಟ 14 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಅರಣ್ಯ ಭೂ ಒತ್ತುವರಿ ತೆರವು: ಬೈಕ್, ಬುಲ್ಡೋಜರ್‌ಗೆ ಬೆಂಕಿ ಇಟ್ಟ ರೈತರು

ಕನ್ನಡ ಪ್ರಭ ಕೃಪೆ 8-4-2013

ಭದ್ರಾವತಿ ತಾಲೂಕಿನ ಬದನೆಹಾಳ್ ಗ್ರಾಮದಲ್ಲಿ ಘಟನೆ

ಪರಿಸ್ಥಿತಿ ನಿಯಂತ್ರಿಸಲು ಲಾಠಿ ಪ್ರಹಾರ, ಗಾಳಿಯಲ್ಲಿ ಗುಂಡು ಹಾರಿಸಿದ ಅರಣ್ಯ ಸಿಬ್ಬಂದಿ

50ಕ್ಕೂ ಹೆಚ್ಚು ರೈತರ ಬಂಧನ, ಬಂಧನಕ್ಕೆ ತಾ ಮುಂದು, ನಾ ಮುಂದು ಎಂದು ಬಂದ ರೈತರು


ಅರಣ್ಯ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆ ವಿರುದ್ದ ಸಿಡಿದೆದ್ದ ಸಾಗುವಳಿದಾರರು ಬುಲ್ಡೋಜರ್ ಹಾಗೂ ಒಂದು ಬೈಕ್‌ಗೆ ಬೆಂಕಿ ಇಟ್ಟ ಘಟನೆ ಭಾನುವಾರ ಭದ್ರಾವತಿ ತಾಲೂಕಿನ ಬಂಡಿ-ಗುಡ್ಡ ಅರಣ್ಯದಲ್ಲಿರುವ ಬದನೆಹಾಳ್ (ಬೆಳ್ಳಿಗೆರೆ) ಗ್ರಾಮದಲ್ಲಿ ನಡೆದಿದೆ. ಅಲ್ಲದೇ ಘಟನೆಗೆ ನಾವೇ ಕಾರಣ ಎಂದು 50ಕ್ಕೂ ಹೆಚ್ಚು ರೈತರು ಜೈಲ್‌ಭರೋ ಚಳುವಳಿ ನಡೆಸಿದ್ದಾರೆ.

ಭದ್ರಾವತಿ ನಗರದಿಂದ 18 ಕಿ.ಮೀ. ದೂರದಲ್ಲಿರುವ ಬದನೆಹಾಳ್ (ಬೆಳ್ಳಿಗೆರೆ) ಸರ್ವೆ ನಂಬರ್ 35ರಲ್ಲಿ ಸುಮಾರು 832 ಎಕರೆ ಅರಣ್ಯ ಭೂಮಿ ಇದೆ. ಅದರಲ್ಲಿ 220 ಎಕರೆಯನ್ನು 2004ರಲ್ಲಿ ಹುಲ್ಲುಬನಿ ಎಂದು ಘೋಷಿಸಲಾಗಿತ್ತು. ಅಲ್ಲದೇ ಸಾಗುವಳಿ ಚೀಟಿಯನ್ನು ನೀಡಲು ಸ್ಥಳೀಯ ಆಡಳಿತಕ್ಕೆ ಸರ್ಕಾರ ಸೂಚನೆ ನೀಡಿತ್ತು. ಆದರೆ, ಸಾಗುವಳಿ ಚೀಟಿ ಮಾತ್ರ ರೈತರ ಕೈ ಸೇರಿರಲಿಲ್ಲ. ಈ ನಡುವೆ ಅಲ್ಲೇ ಇರುವ ಸರ್ವೆ ನಂ.7ರಲ್ಲಿ ಸಾಗುವಳಿ ಮಾಡುತ್ತಿದ್ದ ಎಲ್ಲ ರೈತರಿಗೂ ಸಾಗುವಳಿ ಚೀಟಿ ನೀಡಲಾಗಿದೆ. ಅರಣ್ಯ ಇಲಾಖೆಯಿಂದ ಒತ್ತುವರಿ ತೆರವು ಕಾರ್ಯಾಚರಣೆಯ ಮುನ್ಸೂಚನೆ ಅರಿತ ಸ್ಥಳೀಯ ರೈತರು ಹಲವಾರು ಬಾರಿ ಜಿಲ್ಲಾಡಳಿತಕ್ಕೆ ಮನವಿ ಮಾಡಿದ್ದಾರೆ. ಶನಿವಾರ ಸಹ ತಹಸೀಲ್ದಾರ್ ಕಚೇರಿ ಎದುರು ಧರಣಿ ನಡೆಸಿದ್ದರು

ಅತ್ತ ರೈತರು ನ್ಯಾಯಕ್ಕಾಗಿ ಅಂಗಲಾಚಿದರೆ ಇತ್ತ ಅರಣ್ಯ ಇಲಾಖೆ ನೇತೃತ್ವದಲ್ಲಿ ಕೃಷಿ ಭೂಮಿಯ ಮೇಲೆ ಬುಲ್ಡೋಜರ್ ಹತ್ತಿಸಿ ತಮ್ಮ ವಶಕ್ಕೆ ಪಡೆದುಕೊಳ್ಳುವ ಕಾರ್ಯ ನಡೆದಿತ್ತು. ಭಾನುವಾರವೂ ಈ ಕಾರ್ಯ ಮುಂದುವರಿದಿದ್ದರಿಂದ ಸಿಡಿದೆದ್ದ ರೈತರು, ಸರ್ವೆ ನಂ.35ರ ಜೊತೆಯಲ್ಲಿ ಸರ್ವೆ ನಂ.7ರಲ್ಲಿ ಸಾಗುವಳಿ ಚೀಟಿ ಇದ್ದರೂ ಇಲ್ಲಿನ ಜಮೀನುಗಳ ಒತ್ತುವರಿ ತೆರವು ಮಾಡಲು ಬಂದ ಅರಣ್ಯ ಇಲಾಖೆ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಚಾಲಕ ಪರಾರಿ

ಬೆಳಿಗ್ಗೆ 10.ಗಂಟೆ ಸುಮಾರಿಗೆ ಮನೆಯನ್ನೂ ತೆರವು ಮಾಡಬೇಕಾಗುತ್ತದೆ ಎಂಬ ಅರಣ್ಯ ಇಲಾಖೆಯ ಗದರಿಕೆಗೆ ಮತ್ತಷ್ಟು ಕೆರಳಿದ ರೈತರು, ಕೃಷಿ ಭೂಮಿಯನ್ನು ನಾಶ ಮಾಡಿ ತಮ್ಮ ವಶ ಮಾಡಿಕೊಳ್ಳುವುದಕ್ಕಾಗಿ ತಂದಿದ್ದ ಬುಲ್ಡೋಜರ್ ಹಾಗೂ ಬೈಕ್‌ಗೆ ರೈತರು ಬೆಂಕಿ ಇಟ್ಟಿದ್ದಾರೆ. ಬುಲ್ಡೋಜರ್ ಎಂಜಿನ್ ಹಾಗೂ ಬೈಕ್ ಸಂಪೂರ್ಣ ಭಸ್ಮಗೊಂಡಿವೆ. ಜೊತೆಗೆ



ಲಾರಿ ಹಾಗೂ ಜೆಸಿಬಿ, ಮತ್ತೊಂದು ಬೈಕನ್ನು ಜಖಂಗೊಳಿಸಲಾಗಿದೆ. ಸ್ಥಳಕ್ಕಾಗಮಿಸಿದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಲು ಲಾಠಿ ಪ್ರಹಾರ ನಡೆಸಿದ್ದಾರೆ. ಅಲ್ಲದೇ ಅರಣ್ಯ ಇಲಾಖೆ ಸಿಬ್ಬಂದಿ ಗಾಳಿಯಲ್ಲಿ ಗುಂಡು ಹಾರಿಸಿ ಪ್ರತಿರೋಧ ವ್ಯಕ್ತಪಡಿಸಿದ್ದಾರೆ.

ನಾವೇ ಮಾಡಿದ್ದು

ದಾಳಿ ಮಾಡಿದ ರೈತರನ್ನು ಬಂಧಿಸಲು ಪೊಲೀಸರು ಮುಂದಾದಾಗ ನಾ ಮುಂದು, ತಾ ಮುಂದು ಎಂದು ನೂರಾರು ರೈತರು ಪೊಲೀಸರತ್ತ ಧಾವಿಸಿ ಬಂದು 'ಘಟನೆಗೆ ನಾವೇ ಕಾರಣ, ನಮ್ಮನ್ನೂ ಬಂಧಿಸಿ' ಎಂದಾಗ ಪೊಲೀಸರು ಗೊಂದಲಕ್ಕೊಳಗಾ ಕೊನೆಗೆ 50ಕ್ಕೂ ಹೆಚ್ಚು ರೈತರನ್ನು ವಶಕ್ಕೆ ತೆ ಗೆದುಕೊಂಡಿದ್ದಾರೆ.

ಜನಶಕ್ತಿ ಟಿಪ್ಪಣಿ

ರಾಜ್ಯದ ಹಲವಾರು ಕಡೆ ಇದೇ ರೀತಿಯ ಬಡ ಅರಣ್ಯ ಭೂಮಿ ಸಾಗುವಳಿದಾರರ ಒಕ್ಕಲೆಬ್ಬಿಸಲಾಗುತ್ತಿದೆ. ಶ್ರೀಮಂತರು, ತ ೋಟ ಮಾಲೀಕರು ಆಕ್ರಮಿಸಿಕೊಂಡಿರು ಅರಣ್ಯ ಭೂಮಿಯಿಂದ ಅವರನ ಒಕ್ಕಲೆಬ್ಬಿಸಲು ಅರಣ್ಯ ಇಲಾಖೆಯವ ಮುಂದಾಗುವುದಿಲ್ಲ. ಬಡವರನ ಮಾತ್ರ ಒಕ್ಕಲೆಬ್ಬಿಸಲಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ಬ ಭೂರಹಿತರು ಸಾಗುವಳಿ ಮಾಡುತ್ತಿರು ಅರಣ್ಯ ಭೂಮಿ ಜನವಸತಿ ಇರು ಗ್ರಾಮಗಳ ಆಸುಪಾಸಿನಲ್ಲಿದ್ದು ಅ ಯಾವುದೇ ಅರಣ್ಯ ಇರುವುದಿ ಅರಣ್ಯ ಇಲಾಖೆಗೆ ಸೇರಿದ ಜಮೀನ ಅನ್ನುವುದನ್ನು ಬಿಟ್ಟರೆ ಅಲ್ಲಿ ಯಾವುದ ಅರಣ್ಯ ಇರುವುದಿಲ್ಲ. ಅನುಕೂಲಕರವಾ ಮಳೆಯಾದಾಗ ಮಾತ್ರ ಬಡವರು ಭೂಮಿಯನ್ನು ಸಾಗುವಳಿ ಮಾಡಿಕೊಂಡ ಒಪ್ಪತ್ತಿನ ಗಂಜಿಯನ್ನು ಖಚಿತಪಡಿ ಕೊಳ್ಳಲು ಪ್ರಯತ್ನಿಸುತ್ತಾ ಬಂದಿದ್ದಾ ಅರಣ್ಯ ಇಲಾಖೆಯವರ ಇಂತ ದೌರ್ಜನ್ಯದ ವಿರುದ್ದ ರಾಜ್ಯ ಮಟ್ಟದ ತೀವ್ರ ಚಳವಳಿಯೊಂದನ್ನು ರೂಪಿಸುವುದ ಅಗತ್ಯವಿದೆ. ಆದಿವಾಸಿ ಗಿರಿಜನರಿಗೂ ಇದ ಮುಖ್ಯವಾದ ಪ್ರಶ್ನೆಯಾಗಿದ್ದು ಮುಂಬರು ಚುನಾವಣೆಯಲ್ಲಿಯೂ ಈ ಪ್ರಶ್ನೆಯನ ಚರ್ಚೆಗೆ ಒಳಪಡಿಸುವುದು ಅಗತ್ಯವಾಗಿದೆ.

ಆಂಧ್ರ: ವಿದ್ಯುತ್ ದರ ಏರಿಕೆ ವಿರುದ್ಧ ಯಶಸ್ವಿ ರಾಜ್ಯ ಬಂದ್

ಆಂಧ್ರ ಪ್ರದೇಶದ ಎಲ್ಲ ಎಡ ಪಕ್ಷಗಳು ಒಟ್ಟಿಗೆ ಸೇರಿ ಇತೀಚೆಗೆ ವಿಪರೀತ ವಿದ್ಯುತ್ ದರ ಏರಿಕೆ ಮಾಡಿರುವ ಕಾಂಗ್ರೇಸ್ ಸರ್ಕಾರದ ವಿರುದ್ದ ಅನಿರ್ಧಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಿದ್ದರೂ ರಾಜ್ಯ ಸರ್ಕಾರ ಈ ಕುರಿತು ಕಿಂಚಿತ್ತು ತಲೆ ಕೆಡಿಸಿಕೊಳ್ಳಲಿಲ್ಲ.

ರಾಜ್ಯದ ಹಲವು ಭಾಗಗಳಲ್ಲಿ ವ್ಯಾಪಕ ಪ್ರತಿಭಟನೆಗಳನ್ನು ನಡೆಸಿದ ಎಡ ಪಕ್ಷಗಳ ಕಾರ್ಯಕರ್ತರು ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿದರು. ರಾಜಧಾನಿ ಹೈದರಾಬಾದ್‌ನಲ್ಲಿ ಉಪವಾಸ ಸತ್ಯಾಗ್ರಹದ ನೇತೃತ್ವ ವಹಿಸಿರುವ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾದ ಬಿ.ವಿ. ರಾಘವಲು, ಸಿಪಿಐ ಮುಖಂಡರಾದ ಕೆ.ನಾರಾಯಣ ಮತ್ತಿತರೆ ಮುಖಂಡರು ಮಾತನಾಡಿ ಜನಸಾಮಾನ್ಯರ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ದರ ಏರಿಕೆ ನೀತಿಗಳನ್ನು ಕೂಡಲೇ ಹಿಂಪಡೆಯಬೇಕು ಮತ್ತು ಸುಮಾರು 720 ಕೋಟಿ ರೂ ಇಂಧನದ ಸರ್ಚಾರ್ಜ್ ಸಂಗ್ರಹವನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹಿಸಿದರು. ಮತ್ತು ರಾಜ್ಯದ ಜನತೆ ಕಾಂಗ್ರೇಸ್‌ನ ಜನವಿರೋಧಿ ನೀತಿಗಳನ್ನು ತಿರಸ್ಕರಿಸುವಂತೆ ಕರೆನೀಡಿದರು. ಈ ಹೋರಾಟಕ್ಕೆ ತೆಲುಗುದೇಶಂ ಮತ್ತಿತರೆ ಪಕ್ಷಗಳು ಬೆಂಬಲ ವ್ಯಕ್ತಪಡಿಸಿದ್ದವು.

ಒಂದೆಡೆ ಮೊಂಡ ಸರ್ಕಾರ ಬೇಡಿಕೆಗಳನ್ನು ಆಲಿಸದಿದ್ದಾಗ ಎಡಪಕ್ಷಗಳು ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿದವು. ಈ ಸಂಧರ್ಭದಲ್ಲಿ ಕಾಂಗ್ರೇಸ್ ಸರ್ಕಾರ ರಾಜ್ಯದ ಪೊಲೀಸ್ ಬಲವನ್ನು ಬಳಸಿ ಲಾಠಿ ಚಾರ್ಜ್ ನಡೆಸಿ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸಿತು. ಈ ಸಂದರ್ಭದಲ್ಲಿ ಬಿ.ವಿ.ರಾಘವಲು ಸೇರಿದಂತೆ ಹಲವರನ್ನು ಬಂಧಿಸಿ ಹೋರಾಟ ತಡೆಯುವ ಯತ್ನ-ಕ್ಕೆ ಸರ್ಕಾರ ಮುಂದಾಯಿತು. ಸರ್ಕಾರದ ಧೋರಣೆ ಖಂಡಿಸಿ ಏಪ್ರಿಲ್ 9, 2013 ರಂದು ಆಂಧ್ರ ಪ್ರದೇಶ ಬಂದ್‌ಗೆ ಎಡಪಕ್ಷಗಳು ಕರೆ ನೀಡಿದವು. ಈ ಕರೆ ಜನರಿಂದ ಅದ್ಬುತ ಬೆಂಬಲ ಪಡೆದು ಭರ್ಜರಿ ಯಶಸ್ಸು ಕಂಡಿತು. ಈ ಕರೆಗೆ ಟಿಡಿಪಿ, ವೈಎಸ್ ಆರ್ ಕಾಂಗ್ರೆಸ್, ಬಿಜೆಪಿ ಮುಂತಾದ ಪಕ್ಷಗಳು ಬೆಂಬಲ ಘೋಷಿಸಿದವು.

ಸಿ.ಪಿ.ಐ. (ಎಂ) ಅಭ್ಯರ್ಥಿಗಳ ಪಟ್ಟಿ

ಕ್ರಸಂ	ಕ್ಷೇತ್ರಗಳು	ಜಿಲ್ಲೆ	ಅಭ್ಯರ್ಥಿ
1	ಬಾಗೇಪಲ್ಲಿ	ಚಿಕ್ಕಬಳ್ಳಾಪುರ	ಜಿ.ವಿ.ಶ್ರೀರಾಮರೆಡ್ಡಿ (ಮಾಜಿ ಶಾಸಕರು)
2	ಗೌರಿಬಿದನೂರು	ಚಿಕ್ಕಬಳ್ಳಾಪುರ	ಸಿ.ಸಿ ಅಶ್ವತ್ಥಪ್ಪ
3	ಚಿಂತಾಮಣಿ	ಚಿಕ್ಕಬಳ್ಳಾಪುರ	ಸಿ. ಗೋಪಿನಾಥ್
4	ಕೆ.ಜಿ.ಎಫ್	ಕೋಲಾರ	ಪಿ. ತಂಗರಾಜ್
5	ದೊಡ್ಡಬಳ್ಳಾಪುರ	ಬೆಂ. ಗ್ರಾ	ಆರ್. ಚಂದ್ರತೇಜಸ್ವಿ
6	ಕೆ.ಆರ್. ಪುರಂ	ಬೆಂ. ನಗರ	ಗೌರಮ್ಮ
7	ಆನೇಕಲ್	ಬೆಂ. ನಗರ)	ಡಿ. ಮಾದೇಶ್
8	ಮಳವಳ್ಳಿ	ಮಂಡ್ಯ	ಕೆ. ಬಸವರಾಜ್
9	ಮಂಗಳೂರು ದಕ್ಷಿಣ	ದಕ್ಷಿಣ ಕನ್ನಡ	ವಸಂತ ಆಚಾರಿ
10	ಮಂಗಳೂರು	ದಕ್ಷಿಣ ಕನ್ನಡ	ಕೃಷ್ಣಪ್ಪ ಸಾಲಿಯಾನ್
11	ಬೆಳ್ತಂಗಡಿ	ದಕ್ಷಿಣ ಕನ್ನಡ	ಬಿ.ಎಂ. ಭಟ್
12	ಕಂಪ್ಲಿ	ಬಳ್ಳಾರಿ	ಶಿವಶಂಕರ್
13	ಹೊಸಪೇಟೆ	ಬಳ್ಳಾರಿ	ಆರ್. ಭಾಸ್ಕರ ರೆಡ್ಡಿ
14	ಕನಕಗಿರಿ	ಕೊಪ್ಪಳ	ಎ. ಹುಲುಗಪ್ಪ
15	ಬೈಂದೂರು	ಉಡುಪಿ	ಕೆ. ಶಂಕರ್
16	ಗುಲ್ಬರ್ಗಾ ಗ್ರಾಮೀಣ	ಗುಲ್ಬರ್ಗಾ	ಮಾರುತಿ ಮಾನ್ಪಡೆ

ಜನಶಕ್ತಿ
ಕನ್ನಡ ವಾರಪತ್ರಿಕೆ

"ಮಹಿಳೆಯರು ಕೀಳು ಎಂದು ತುಚ್ಚೀಕರಿಸುವ 'ಮನುಸ್ಮೃತಿ'ಯ ಮೌಲ್ಯಗಳನ್ನು ತಿರಸ್ಕರಿಸಿ – ಕೆ. ನೀಲಾ ಕರೆ



ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ರಾಜ್ಯ ಸಮಿತಿಯು ಇತ್ತೀಚೆಗೆ ಹಾವೇರಿ ನಗರದಲ್ಲಿ ರಾಜ್ಯ ಮಟ್ಟದ ವಿದ್ಯಾರ್ಥಿನಿಯರ ಸಮಾವೇಶವನ್ನು ಸಂಘಟಿಸಿತ್ತು. ವಿದ್ಯಾರ್ಥಿಯರ ಮೇಲೆ, ಹೆಣ್ಣು ಮಕ್ಕಳ ಮೇಲೆ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿಯೂ ದೌರ್ಜನ್ಯ, ಆಸಿಡ್ ದಾಳಿ, 'ಪ್ರೀತಿ'ಗೆ ಒಪ್ಪಿಗೆ ಸೂಚಿಸದಿದ್ದುದಕ್ಕೆ ಕೊಲೆಗಳಂತಹ ಪಾತಕಿ ಕೃತ್ಯಗಳು ನಡೆಯುತ್ತಿರುವ ಇಂಥ ಹೊತ್ತಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಲಿಂಗ ಸಂವೇದನೆ ಹಾಗೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಇದೊಂದು ಸಮಯೋಚಿತ ಪ್ರಯತ್ನವಾಗಿತು. ಒಂದು ವರದಿ.

ಆರ್. ಕೆ.

ನಮ್ಮ ಸಮಾಜದಲ್ಲಿ ಅಕ್ಷರ ಎಲ್ಲರಿಗೂ ಸಿಕ್ಕಿಲ್ಲ... ಎಲ್ಲರಿಗೂ ದಕ್ಕಲು ಬಿಟ್ಟಿಲ್ಲ. ಹೆಣ್ಣು ಮಕ್ಕಳು, ಶೂದ್ರರು, ದಲಿತರನ್ನು ಶಿಕ್ಷಣದಿಂದ ವಂಚಿಸಲಾಗಿದೆ. ಭಾರತದ ಎಲ್ಲ ಜನರಿಗೂ ಅಕ್ಷರ ದೊರಕಬೇಕು. ಅಕ್ಷರ ಬಲದಿಂದ ಇತಿಹಾಸ ತಿಳಿದುಕೊಂಡು ಭವಿಷ್ಯ ಕಟ್ಟಿಕೊಳ್ಳಲು ಆಗಬೇಕು. ಅಕ್ಷರಕ್ಕೆ ಮೊದಲು ಕೂಡ ಮುನುಷ್ಯನ ಬದುಕು ಇತ್ತು. ಇತಿಹಾಸ ಹೊರಳು ನೋಡಿದನೆಂದರೆ ಅನ್ಯಾಯ, ಅಸಮಾನತೆಯ ಜೊತೆ ಜನತೆ ಹೊಂದಾಣಿಕೆ ಮಾಡಿಕೊಂಡು ಬದುಕಿದ್ದಿಲ್ಲ. ತಾಯಿ ರೊಟ್ಟಿ ಬಡಿಯುತ್ತಾ ಹಾಲು ಕುಡಿಸುವುದು ಮರೆತಿದ್ದರೆ ಮಗು ಕೂಡ ಅಳುತ್ತದೆ. ಇತಿಹಾಸದುದ್ದಕ್ಕೂ ಆತ್ಮ ಗೌರವಕ್ಕಾಗಿ ಸಂಘರ್ಷ ಮಾಡುತ್ತಲೇ ಬರಲಾಗುತ್ತಿದೆ. ಹೀಗಾಗಿ ವಿದ್ಯಾರ್ಥಿಗಳು ವಿಶೇಷವಾಗಿ ಹೆಣ್ಣು ಮಕ್ಕಳು ಸಂಘಟಿತರಾಗಿ ಶಿಕ್ಷಣದ ಹಕ್ಕಿಗಾಗಿ, ಸಮಾನತೆಗಾಗಿ, ದೌರ್ಜನ್ಯಗಳ ವಿರುದ್ದ ದಿಟ್ಟ ಹೋರಾಟಕ್ಕೆ ಮುಂದಾಗಬೇಕು ಎಂದು ಲೇಖಕಿ ಹಾಗೂ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ನಾಯಕಿ ಕೆ. ನೀಲಾ ಅವರು ಕರೆ ನೀಡಿದರು. ಅವರು 'ದೌರ್ಜನ್ಯ ರಹಿತ ಸಮ ಸಮಾಜಕ್ಕಾಗಿ, ಸಮಾನ ಶಿಕ್ಷಣಕ್ಕಾಗಿ' ಹಾವೇರಿಯ ಶಿವಶಕ್ತಿ ಪ್ಯಾಲೇಸಿನಲ್ಲಿ ಏಪ್ರಿಲ್ 6–7, 2013 ರಂದು ನಡೆದ ವಿದ್ಯಾರ್ಥಿನಿಯರ 6 ನೇ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಡಂ.ಡಂ.ಡಂ... ಡಮಾಡಮಾ ಡಂ.... ಎಂದು ಡೊಳ್ಳು ವಾದ್ಯವನ್ನು ಬಾರಿಸಿ 'ಎಚ್ಚರ'ದ ಸದ್ದು ಮಾಡುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದ ಕೆ. ನೀಲಾ ಅವರು ಮುಂದುವರಿದು ಮಾತನಾಡುತ್ತಾ ಕೇರಳದಲ್ಲಿ ರಾಜ್ಯ ಬಜೆಟ್ಟಿನ ಸುಮಾರು ಶೇ. 28 ರಷ್ಟನ್ನು ಶಿಕ್ಷಣಕ್ಕೆ ಕೊಡಲಾಗುತ್ತಿದೆ. ಏಕೆಂದರೆ ಅಲ್ಲಿ ಒಂದು ದೊಡ್ಡ ಹೋರಾಟದ ಚರಿತ್ರೆಯೇ ಇದೆ. ಕರ್ನಾಟಕದಲ್ಲಿ ಬಜೆಟ್‌ನ ಕೇವಲ ಶೇ. 15 ರಷ್ಟು ಮಾತ್ರ ಶಿಕ್ಷಣಕ್ಕೆ ಕೊಡಲಾಗಿದೆ. ರಾಜ್ಯದಲ್ಲಿ 54 ಸಾವಿರ ಮಕ್ಕಳು ಶಾಲೆಯಿಂದ ಹೊರಗೆ ಇದ್ದಾರೆ ಇತ್ತೀಚೆಗೆ ವರದಿಯೊಂದು ಪ್ರಕಟವಾಗಿದೆ. ರಾಜ್ಯ ಸರ್ಕಾರ ಹೈಸ್ಕೂಲು, ಶಾಲೆಯಲ್ಲಿ, ಶೌಚಾಲಯ ಕಟ್ಟಿಸಿಕೊಡುತ್ತೇವೆ ಎಂದು ಸುಪ್ರಿಂ ಕೋರ್ಟ್‌ಗೆ ಪ್ರಮಾಣ ಪತ್ರ ಕೊಟ್ಟಿದ್ದರೂ ಅದನ್ನು ಜಾರಿ ಮಾಡಲಿಲ್ಲ. ಶೌಚಾಲಯವಿಲ್ಲದ ಶಾಲಾ, ಕಾಲೇಜುಗಳ ವಿದ್ಯಾರ್ಥಿಯರು ಅಗತ್ಯವಿದ್ದಷ್ಟು ನೀರು ಕುಡಿಯುವುದಿಲ್ಲ.....ಅಷ್ಟು ನೀರು ಕುಡಿದರೆ ಆಗ್ಗಾಗ್ಗೆ ಶೌಚಾಲಯಕ್ಕೆ ಹೋಗಬೇಕಾಗುತ್ತದೆ. ಹೀಗಾಗಿ ಇಂತಹ ಹೆಣ್ಣು ಮಕ್ಕಳು ಅನಾರೋಗ್ಯದ ಸಂಕಟಕ್ಕೆ ಸಿಲುಕಿಕೊಳ್ಳುತ್ತಿದ್ದಾರೆ. ಶಾಲಾ ಕಾಲೇಜುಗಳಿಗೆ ಹಣ ನೀಡದ ಸರ್ಕಾರ ಜಾತಿ ಮಠಗಳಿಗೆ ನೂರಾರು ಕೋಟಿ ಹಣ ನೀಡಿದೆ. 10 ಮಕ್ಕಳಿಲ್ಲದ ಶಾಲೆಯನ್ನು ಬೇರೆ ಶಾಲೆಯೊಂದಿಗೆ ವಿಲೀನ ಮಾಡುತ್ತೇವೆ ಎಂದು ಹೇಳುತ್ತಲೆ ಸಾವಿರಾರು ಸಂಖ್ಯೆಯಲ್ಲಿ ಸರ್ಕಾರ ಶಾಲೆ ಮುಚ್ಚುತ್ತಿದೆ.

ಸಂಸ್ಕೃತಿ ಹೆಸರಿನಲ್ಲಿ ಜನರ ಮನಸ್ಸಿನಲ್ಲಿ ಅಸಮಾನತೆ, ಅನ್ಯಾದ ಮೌಲ್ಯಗಳನ್ನು ಬಿತ್ತಲಾಗುತ್ತಿದೆ. ಗಂಗೆ, ತುಂಗೆ, ಸರಸ್ವತಿಯನ್ನು ಪೂಜೆ ಮಾಡುವ ಸಂಸ್ಕೃತಿ ನಮ್ಮದು.... ಎಂದು ಹೇಳುತ್ತಾರೆ. ರಾಮ ಕಥೆ ನಮ್ಮ ಆದರ್ಶ, ಪರಂಪರೆ ಎನ್ನಲಾಗುತ್ತದೆ. ಯಾರದ್ದೋ ಕೊಂಕು ಮಾತು ಕೇಳಿ ರಾಮ ಕಟ್ಟಿಕೊಂಡ ಹೆಣ್ಣನ್ನು ಆಕೆ ತುಂಬು ಗರ್ಭಿಣಿಯಾಗಿದ್ದಾಗ ಅಡವಿಗೆ ಅಟ್ಟಿದ. ರಾವಣ ಸೀತೆಯನ್ನು ಅಪಹರಿಸಿದರೂ ಸೀತೆಯನ್ನು ಬಲಾತ್ಕರಿಸಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಗಂಡ ಸತ್ತಾಗ ಹೆಣ್ಣಿಗೆ ತಲೆ ಬೋಳಿಸುವುದು..ಭಾರತೀಯ ಸಂಸ್ಕೃತಿ ಎನ್ನಲಾಗುತ್ತದೆ. ಅದು ಸುಳ್ಳು ಅದು ವೈದಿಕ ಸಂಸ್ಕೃತಿ. ಗಂಡ ಸತ್ತ ಮೇಲೆ ಹೆಣ್ಣಿಗೆ ಹಾಗೆಯೇ ಹೆಂಡತಿ ಸತ್ತ ಮೇಲೆ ಗಂಡಿಗೆ 'ಕೂಡಿಕೆ' ಮೂಲಕ ಪುನರ್ ವಿವಾಹದ ಅವಕಾಶ ನಮ್ಮ ಸಂಸ್ಕೃತಿಯಲ್ಲಿತ್ತು. ಲಂಬಾಣಿ ಜನರಲ್ಲಿ ಗಂಡ ಸತ್ತರೆ ನಂತರ ಆಕೆಯ ಮೈದುನಿಗೆ ಮದುವೆ ಆಗಿಲ್ಲದಿದ್ದರೆ ಮತ್ತು ಪರಸ್ಪರ ಒಪ್ಪಿಗೆ ಇದ್ದರೆ ಮದುವೆ ಮಾಡುವ ಸಂಸ್ಕೃತಿ ಇದೆ.

ನಮ್ಮ ದೇಶದ ವೈದಿಕರೆಲ್ಲ ಸೇರಿ ಹತ್ತೊಂಬತ್ತನೆ ಶತಮಾನದಲ್ಲಿ ಬ್ರಿಟಿಷರು ಸತಿ ಪದ್ದತಿಯನ್ನು ನಿಷೇಧಿಸಬಾರದು, ವಿಧವಾ ಪದ್ಧತಿ, ಬಾಲ್ಯ ವಿವಾಹ ಇವೆಲ್ಲಾ ಭಾರತೀಯ ಸಂಸ್ಕೃತಿ ಎಂದು ಒತ್ತಾಯಿಸಿದ್ದರು. ಸೋನಿಯಾ ಗಾಂಧಿ ಪ್ರಧಾನಿಯಾದರೆ ತಲೆ ಬೋಳಿಸಿಕೊಂಡು ಬಿಳಿ ಸೀರೆ ಉಡುತ್ತೇನೆ ಎಂದು ಬಿಜೆಪಿ ನಾಯಕಿ ಶುಷ್ಮಾ ಸ್ವರಾಜ್ ಘೋಷಿಸಿದ್ದರು. ಪ್ರಗತಿ ವಿರೋಧಿಯಾದ ಮೌಲ್ಯಗಳ ಪರವಾಗಿ ಮತ್ತು ಮಹಿಳೆಯರ ವಿರುದ್ದ ಮಹಿಳೆಯರನ್ನೇ ಎತ್ತಿಕಟ್ಟುವ ಪಿತೂರಿ ಬಿಜೆಪಿ ಆರೆಸ್ಸೆಸ್‌ಗಳದ್ದು. ಅದರ ವಿರುದ್ದ ಎಚ್ಚರ ಅಗತ್ಯ ಎಂದ ಕೆ. ನೀಲಾ ಅವರು ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳಲ್ಲಿ ಕೇವಲ 6 ಜನ ಮಾತ್ರ ಮಹಿಳೆಯರು ಗೆದ್ದಿದ್ದಾರೆ. ಜನರ ಹಣೆ ಬರಹ ಬರೆಯುವುದು 'ಶಟಗೆವ್ವ' ಅಲ್ಲ ನಮ್ಮ ಶಾಸನ ಸಭೆಗಳು. ಅಲ್ಲಿ ಮಹಿಳೆಯರಿಗೆ ಸರಿಯಾದ ಪ್ರಾತಿನಿಧ್ಯಕ್ಕಾಗಿ ಹೋರಾಡಬೇಕು ಎಂದು ಹೇಳಿದರು.

'ಐದು ಮಲ್ಲಿಗೆ ತೂಕದ ರಾಜಕುಮಾರಿ'ಯ ಪರಿಕಲ್ಪನೆಯನ್ನು ತೊರೆದು ಹೆಣ್ಣು ಮಕ್ಕಳು ಪೌಷ್ಟಿಕ ಆಹಾರ ತಿಂದು ದಷ್ಟಪುಷ್ಟರಾಗಿ ಆರೋಗ್ಯವಂತರಾಗಿ ಇರಬೇಕು ಎಂದು ಕೆ. ನೀಲಾ ಅವರು ಕರೆ ನೀಡಿದರು. ಹೆಣ್ಣು ಮಕ್ಕಳಿಗೆ ಕಮ್ಮಿ ಕೂಲಿ ನೀಡಿ ವಂಚಿಸಲಾಗುತ್ತಿದೆ. ಗಂಡಿಗೆ ದಿನಕ್ಕೆ 300 ರೂ. ಕೊಡುವ ಕಡೆ– ಹೆಣ್ಣಿಗೆ 125 ರೂ. ಮಾತ್ರ ಕೊಡುವ ಅನ್ಯಾಯ ಹೈದರಾಬಾದ್ ಕರ್ನಾಟಕದಲ್ಲಿ, ಮತ್ತು ರಾಜ್ಯದಲ್ಲಿ ವ್ಯಾಪಕವಾಗಿ ನಡೆಯುತ್ತಿದೆ.

ಕರ್ನಾಟಕದ ಕರಾವಳಿಯ ಕಾಲೇಜುಗಳಲ್ಲಿ ಒಂದು ಗೇಟಿನಿಂದ ಮುಸ್ಲಿಂ ವಿದ್ಯಾರ್ಥಿಗಳು, ಇನ್ನೊಂದು ಗೇಟಿನಿಂದ ಹಿಂದೂ ವಿದ್ಯಾರ್ಥಿಗಳು ಬರಬೇಕು. ಸುಮ್ಮನೆ ಬರಬೇಕು. ಸುಮ್ಮನೆ ಹೋಗಬೇಕು. ಪರಸ್ಪರ ಮಾತನಾಡುವಂತಿಲ್ಲ. ಬೆರೆಯುವಂತಿಲ್ಲ. ಅಂತಹ ಕೋಮುವಾದಿ ವಿಭಜನೆ ತರಲಾಗಿದೆ. ಇಂತಹ ಅಪಾಯಗಳನ್ನು ವಿರೋಧಿಸಿ ಹಿಮ್ಮೆಟ್ಟಿಸಬೇಕು ಎಂದು ನೀಲಾ ಅವರು ಕರೆ ನೀಡಿದರು.

ಕಡಿಮೆ ಬಟ್ಟೆ ಹಾಕಿಕೊಂಡದ್ದಕ್ಕೆ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿವೆ ಎಂಬ ವಾದಗಳಿವೆ. ಐದು ವರ್ಷದ ಮಗುವಿನ ಮೇಲೆ, ಮೂರು ವರ್ಷದ ಮಗುವಿನ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ನಡೆಯುತ್ತಿವೆ. ಈ ಎಳೆ ಕೂಸುಗಳು ಯಾವ ಪ್ರಚೋದನಕಾರಿ ಬಟ್ಟೆ ಹಾಕಿಕೊಂಡಿರಲು ಸಾಧ್ಯ ಎಂದು ನೀಲಾ ಅವರು ಪ್ರಶ್ನಿಸಿದರು. ಹೆಣ್ಣಿನ ಮೇಲಿನ ಶೇ. 64 ದೌರ್ಜನ್ಯಗಳು ಹೆಣ್ಣಿನ ಹತ್ತಿರದ ಬಂಧುಗಳಿಂದ ಆಕೆಯ ಮನೆಯೊಳಗೆ ನಡೆಯುತ್ತಿವೆ ಎಂದು ತಿಳಿಸಿದ ನೀಲಾ ಅವರು ಮಹಿಳೆಯರು, ಕೀಳು ಎಂದು ತುಚ್ಚೀಕರಿಸುವ 'ಮನುಸ್ಮೃತಿ' ಮೌಲ್ಯಗಳನ್ನು ತಿರಸ್ಕರಿಸಿ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಎಸ್‌ಎಫ್‌ಐನ ಅಖಿಲ ಭಾರತ ಉಪಾಧ್ಯಕ್ಷರಾದ ಮಧುಜಾ ಸೇನ್ ರಾಯ್‌ರವರು ಮಾತನಾಡುತ್ತಾ ಸಾಮಾಜಿಕ ತಾರತಮ್ಯ, ಶಿಕ್ಷಣದ ವಂಚನೆ, ಲೈಂಗಿಕ ದೌರ್ಜನ್ಯಗಳು ನಮ್ಮ ಸಮಾಜದಲ್ಲಿ ಅವ್ಯಾಹತವಾಗಿದ್ದು ಇದಕ್ಕೆಲ್ಲ ಮೂಲ ಕಾರಣ ನಮ್ಮ ಸಮಾಜದ ಆರ್ಥಿಕ ಶೋಷಣೆಯಾಗಿದ್ದು ವರ್ಗ ಹೋರಾಟದ ಮೂಲಕ ಈ ಆರ್ಥಿಕ ಮತ್ತು ಸಾಮಾಜಿಕ ಶೋಷಣೆ ಮತ್ತು ಅಸಮಾನತೆ

ಪುಟ 15 ಕ್ಕೆ

* ಕೋಮುವಾದಿ ಬಿಜೆಪಿಯನ್ನು ಸೋಲಿಸಿ ಸೌಹಾರ್ದ ಕರ್ನಾಟಕವನ್ನು ಉಳಿಸಿ
* ಭ್ರಷ್ಟ ಕಾಂಗ್ರೆಸನ್ನು ತಿರಸ್ಕರಿಸಿ ಎಡ ಪರ್ಯಾಯವನ್ನು ಬೆಂಬಲಿಸಿ
* ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ ಜನ ಚಳುವಳಿಗಳನ್ನು ಬಲಪಡಿಸಿ

ಕರ್ನಾಟಕ ವಿಧಾನಸಭಾ ಚುನಾವಣೆ –2013

ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ ಎಡ ಪರ್ಯಾಯವನ್ನು ಬಲಪಡಿಸಿ

ರಾಜ್ಯದ ಜನತೆ ವಿಧಾನ ಸಭೆಯಲ್ಲಿ ಸಿಪಿಐ(ಎಂ) ಪಕ್ಷದ ಮತ್ತು ಎಡಪಕ್ಷಗಳ ಅಭ್ಯರ್ಥಿಗಳನ್ನು ಯಾಕೆ ಗೆಲ್ಲಿಸಬೇಕು. ಸಿಪಿಐ(ಎಂ) ಪಕ್ಷದ ಪ್ರಣಾಳಿಕೆ ಏನು ಹೇಳುತ್ತದೆ ? ಓದಿ ಮತ್ತು ಓದಿಸಿ. ಕ್ರಿಯಾಶೀಲತೆಗೆ ಇದೂ ಒಂದು ಸೂಕ್ತ ಸಮಯ. ಬನ್ನಿ, ನಾಡಿನ ಉಜ್ವಲ ಭವಿಷ್ಯಕ್ಕಾಗಿ ಹೋರಾಡುವವರೊಂದಿಗೆ ಹೆಜ್ಜೆ ಹಾಕಿ.


ನಿತ್ಯಾನಂದ ಸ್ವಾಮಿ



ರಾಜ್ಯ ವಿಧಾನಸಭೆಯ ಚುನಾವಣೆ ಘೋಷಣೆಯಾಗಿದೆ. ಮೇ ತಿಂಗಳ 5 ರಂದು ಮತದಾನ ಮಾಡುವ ಮೂಲಕ ರಾಜ್ಯದ ಸುಮಾರು 4.18 ಕೋಟಿ ಮತದಾರರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲಿದ್ದಾರೆ. ಹೊಸ ಜನಾದೇಶದೊಂದಿಗೆ ಹೊಸ ಸರ್ಕಾರವೊಂದು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲಿದೆ.

ಚುನಾವಣೆಯ ಘೋಷಣೆಯಿಂದಾಗಿ ಕಳೆದ 5 ವರ್ಷಗಳ ದುರಾಡಳಿತಕ್ಕೆ ಕೊನೆಗೂ ತೆರೆಬಿದ್ದಿದೆ. ಜನಹಿತ ಮರೆತ ರಾಜಕಾರಣದಿಂದ ಬೇಸತ್ತ ಜನರಲ್ಲಿ ನಿರಾಳ ಭಾವ ಮೂಡಿದೆ. ಬಿಜೆಪಿಯ ಚೊಚ್ಚಲ ಆಳ್ವಿಕೆಯ ಅವಧಿಯಲ್ಲಿ ರಾಜ್ಯವು ಹಿಂದೆಂದೂ ಇಲ್ಲದಷ್ಟು ಕೆಟ್ಟ ಹೆಸರನ್ನು ಸಂಪಾದಿಸಿತು. ನಿಯಂತ್ರಣಕ್ಕೆ ನಿಲುಕದೆ ಹೋದ ಭ್ರಷ್ಟಾಚಾರವೇ ಇದಕ್ಕೆ ಮುಖ್ಯ ಕಾರಣ. ಒಂದು ದಶಕದ ಹಿಂದೆ ಎಗ್ಗಿಲ್ಲದೆ ಆರಂಭವಾದ ಭ್ರಷ್ಟಾಚಾರದ ಪಿಡುಗು ಕಳೆದ ಐದು ವರ್ಷಗಳ ಬಿಜೆಪಿ ಆಳ್ವಿಕೆಯಲ್ಲಿ ಉತ್ತುಂಗಕ್ಕೆ ಮುಟ್ಟಿತು. ಇಂತಹ ದುರಂತಗಳಿಗೆ ಚುನಾವಣೆಗಳೇ ಅಂತ್ಯಹಾಡುತ್ತವೆ ಮತ್ತು ಹೊಸ ಸಾಧ್ಯತೆಗಳನ್ನು ತೆರೆದಿಡುತ್ತವೆ.

ಚುನಾವಣೆಗಾಗಿ ಕಾಯುತ್ತಾ ಇದ್ದ ಪ್ರಜ್ಞಾವಂತ ಮತದಾರರಿಗೆ ತಮ್ಮ ಪರಮಾಧಿಕಾರವನ್ನು ಚಲಾಯಿಸುವ ಅವಕಾಶ ಮನೆ ಬಾಗಿಲಿಗೆ ಬಂದು ನಿಂತಿದೆ. ಯಾವುದೇ ಆಮಿಷಗಳಿಗೆ ಬಲಿಯಾಗದೆ, ಸ್ವಜಾತಿ, ಸ್ವಧರ್ಮ ಎಂಬ ಮಮಕಾರಕ್ಕೆ ಒಳಗಾಗದೆ, ಬೆದರಿಕೆಗಳಿಗೆ ಜಗ್ಗದೆ, ಅಕ್ರಮಗಳಲ್ಲಿ ಭಾಗಿಯಾಗದೆ ಯೋಗ್ಯ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ನೈತಿಕ ಜವಾಬ್ದಾರಿ ಪ್ರತಿಯೊಬ್ಬ ಮತದಾರನ ಮೇಲೆ ಇದೆ. ಅನೇಕ ಇತಿಮಿತಿಗಳಿರುವ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರು ನಿಜವಾದ ಪ್ರಭುಗಳು ಆಗುವುದು ಚುನಾವಣೆಯ ಸಂದರ್ಭದಲ್ಲಿ ಮಾತ್ರ. ಈ ಅವಕಾಶವನ್ನು ಕಳೆದುಕೊಂಡು ಆನಂತರ ಚುನಾಯಿತ ಪ್ರತಿನಿಧಿಗಳನ್ನು ದೂರುತ್ತಾ ಕೂರುವುದರಲ್ಲಿ ಅರ್ಥವಿಲ್ಲ. ಈಗ ತಮ್ಮ ಮುಂದೆ ಬಂದಿರುವ ಅವಕಾಶವನ್ನು ಸರಿಯಾಗಿ ಬಳಕೆ ಮಾಡಲು ಸಾಧ್ಯವಾಗಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ಮತದಾರರು ಅವರ ಅರ್ಹತೆಗೆ ತಕ್ಕ ಸರ್ಕಾರವನ್ನು ಪಡೆಯುತ್ತಾರೆ' ಎಂಬ ಮಾತನ್ನು ಮರೆಯಬಾರದು.



ಚುನಾವಣಾ ಗೀತೆಗಳ ಧ್ವನಿಸುರುಳಿ ಬಿಡುಗಡೆ-ಯಾಗಿದೆ. ಸಂಪರ್ಕಿಸಿ : ಇ.ಎಂ.ಎಸ್. ಭವನ, ಬೆಂಗಳೂರು

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು ದುಡಿಯುವ ಜನವರ್ಗಗಳ ಪಕ್ಷಪಾತಿಯಾಗಿದೆ. ದುಡಿಯುವ ಜನರ ಹಿತವೇ ಅದರ ಆದ್ಯತೆಯಾಗಿದೆ. ಜನಪರ ಹೋರಾಟಗಳೇ ಅದರ ಉಸಿರಾಗಿದೆ. ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ವಿರುದ್ಧ ನಡೆಸಲಾಗುತ್ತಿರುವ ನಿರಂತರ ಆಂದೋಲನ ಅದಾಗಿದೆ. ಚುನಾವಣೆಗಳನ್ನು ಸಹ ಶೋಷಕ ಮತ್ತು ಶೋಷಿತರ ನಡುವಿನ ಸಂಘರ್ಷದ ಭಾಗವೆಂದೇ ಪರಿಗಣಿಸುವ ಸಿಪಿಐ(ಎಂ) ಜನಾಂದೋಲನವನ್ನು ಬಲಪಡಿಸುವ ಉದ್ದೇಶದಿಂದ ಮಾತ್ರ ಚುನಾವಣೆಗಳಲ್ಲಿ ಪಾಲ್ಗೊಳ್ಳುತ್ತದೆ.

ರಾಜ್ಯದ ರಾಜಕಾರಣದಲ್ಲಿ ಜನಪರ, ಪ್ರಗತಿಪರ ಬದಲಾವಣೆಯನ್ನು ಬಯಸುವವರಿಗೆ ಪ್ರಸಕ್ತ ಚುನಾವಣೆ ಮತ್ತೊಂದು ಅವಕಾಶವನ್ನು ಒದಗಿಸಿದೆ ಎಂದು ಸಿಪಿಐ(ಎಂ) ಭಾವಿಸುತ್ತದೆ. ರಾಜ್ಯದ ದುಡಿಯುವ ಜನವಿಭಾಗಗಳ ಅಂ-ದರೆ ರೈತರ, ಕೃಷಿಕೂಲಿಕಾರರ, ಕಾರ್ಮಿಕರ, ಮಧ್ಯಮ ವರ್ಗದ ನೌಕರರ ಮತ್ತು ಇತರ ಶ್ರಮಜೀವಿಗಳ ಹಿತದೃಷ್ಟಿಯಿಂದ ಈ ಅವಕಾಶದ ಸದ್ಬಳಕೆ ಮಾಡುವ ಕುರಿತು ಈ ಚುನಾವಣಾ ಪ್ರಣಾಳಿಕೆಯ ಮೂಲಕ ಮತದಾರರೊಂದಿಗೆ ಕೆಲವು ಮುಖ್ಯ ವಿಚಾರಗಳನ್ನು ಹಂಚಿಕೊಳ್ಳಲು ಸಿಪಿಐ(ಎಂ) ಬಯಸುತ್ತದೆ.

ದೋರಣೆಗಳ ಪರ್ಯಾಯ ಎಡ ಪಕ್ಷಗಳಿಂದ ಮಾತ್ರ ಸಾಧ್ಯ

ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಬಂಡವಾಳಗಾರ ಮತ್ತು ಜಮಿನ್ದಾರ ವರ್ಗಗಳ ಪಕ್ಷಗಳಾಗಿರುವುದರಿಂದ ಅವುಗಳ ದೋರಣೆಯಲ್ಲಿ ವ್ಯತ್ಯಾಸ ಇಲ್ಲ. ಅವುಗಳು ಪರಸ್ಪರ ಪರ್ಯಾಯವಾಗಲಾರವು. ಬಂಡವಾಳಶಾಹಿ ಭೂಮಾಲಿಕ ವರ್ಗಗಳು ದೇಶದಲ್ಲಿ ಈ ಎರಡು ಪಕ್ಷಗಳು ಅಥವ ಅವುಗಳ ನೇತೃತ್ವದ ಎರಡೇ ರಂಗಗಳು ಇರಬೇಕೆಂದು ಬಯಸುತ್ತವೆ. ಅದು ಅಮೇರಿಕ ಮಾದರಿಯ ಪ್ರಜಾಪ್ರಭುತ್ವವೂ ಆಗಿದೆ. ಜನಗಳಿಗೆ ಕಾಂಗ್ರೆಸ್ ಬೇಡವಾದರೆ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತಾರೆ. ಬಿಜೆಪಿ ಬಗ್ಗೆ ಬೇಸತ್ತಾಗ ಮತ್ತೆ ಕಾಂಗ್ರೆಸನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಎರಡೂ ಪಕ್ಷಗಳು ಉದಾರೀಕರಣದ ದೋರಣೆಗಳನ್ನೇ ಜಾರಿ ಮಾಡುತ್ತವೆ.

ರಾಜ್ಯದ ಜನತೆ ಬಂಡವಾಳಗಾರರ ಮತ್ತು ಜಮಿನ್ದಾರರ ಈ ಸಂಚನ್ನು ಅರ್ಥಮಾಡಿಕೊಂಡು ವ್ಯಕ್ತಿಗಳಲ್ಲಿ, ಪಕ್ಷಗಳ ನಡುವೆ ಪರ್ಯಾಯವನ್ನು ಹುಡುಕದೆ ದೋರಣೆಗಳ ಪರ್ಯಾಯವನ್ನು ಕಂಡುಕೊಳ್ಳಲು ಸಾಧ್ಯವಾಗಬೇಕು. ಸಿ.ಪಿ.ಐ.(ಎಂ) ಒಳಗೊಂಡಂತೆ ಎಡ ಪಕ್ಷಗಳು ಮಾತ್ರ ಕಾಂಗ್ರೆಸ್ಸಿಗೆ ಮತ್ತು ಬಿಜೆಪಿಗೆ ದೋರಣಾತ್ಮಕ ಪರ್ಯಾಯವನ್ನು ನೀಡ ಬಲ್ಲವು. ಅದನ್ನೇ ಎಡ ಪರ್ಯಾಯ ಎಂದು ಕರೆಯಲಾಗುತ್ತದೆ.

ಪಶ್ಚಿಮ ಬಂಗಾಳ ರಾಜ್ಯದಲ್ಲಿ 34 ವರ್ಷಗಳ ಕಾಲ ನಿರಂತರವಾಗಿ, ಕೇರಳದಲ್ಲಿ ಹಲವು ಬಾರಿ ಅಧಿಕಾರಕ್ಕೆ ಬಂದ ಮತ್ತು ತ್ರಿಪುರ ರಾಜ್ಯದಲ್ಲಿ ಈಗಲೂ ಅಧಿಕಾರದಲ್ಲಿರುವ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಈ ಎಡ ದೋರಣಾತ್ಮಕ ಪರ್ಯಾಯವನ್ನು ಇಡೀ ದೇಶದ ಮುಂದೆ ಇಟ್ಟಿವೆ. ಅಲ್ಲಿ ಏನಿದ್ದರೂ ಜನರ ಆಯ್ಕೆ ಎಡರಂಗ ಮತ್ತು ಎಡ-ವಿರೋಧಿ ರಂಗಗಳ ನಡುವೆ. ಬಿಜೆಪಿಗೆ ಅಲ್ಲಿ ಜನ ಅವಕಾಶವನ್ನೇ ಕೊಟ್ಟಿಲ್ಲ. ಅದ್ದರಿಂದ ಅಲ್ಲಿಯ ಜನಗಳಿಗೆ ಆಯ್ಕೆಯ ಗೊಂದಲವಿಲ್ಲ. ಕರ್ನಾಟಕದಲ್ಲಿ ಇರುವಂತೆ ಎರಡು ಬಲ ಪಂಥೀಯ ಗುಂಪುಗಳ ನಡುವೆ ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇಲ್ಲ.

ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳ ಜನತೆ ಕಾಂಗ್ರೆಸಿಗೆ ಈ ಎಡ ಪರ್ಯಾಯವನ್ನು ಧೀರ್ಘ ಕಾಲದ ಹೋರಾಟ, ತ್ಯಾಗ ಬಲಿದಾನಗಳಿಂದ ರೂಪಿಸಿಕೊಂಡಿದ್ದಾರೆ. ದೋರಣೆಗಳ ಪರ್ಯಾಯವು ಪರ್ಯಾಯ ದೋರಣೆಗಳಿಗಾಗಿ ಜನತೆ ನಡೆಸುವ ಹೋರಾಟಗಳ ನಡುವೆಯೇ ಹುಟ್ಟಿಕೊಳ್ಳುತ್ತದೆ ಎನ್ನುವುದಕ್ಕೆ ಈ ಮೂರು ರಾಜ್ಯಗಳ ಅನುಭವವೇ ಸಾಕ್ಷಿಯಾಗಿದೆ.

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ಸಮೀಕ್ಷೆ:

ಜನರ ಕಷ್ಟಗಳಿಗೆ ಒದಗಿದವರ ಕುರಿತು ಒಳ್ಳೆಯ ಮಾತು

ಆರ್. ರಾಮಕೃಷ್ಣ.

ಏಪ್ರಿಲ್ ತಿಂಗಳ ಏರು ಬಿಸಿಲು. ಬರದ ಛಾಯೆ. ಎಲ್ಲೆಲ್ಲೂ ಒಣ ವಾತಾವರಣ . ಸರಿಯಾಗಿ ಮಳೆ ಇಲ್ಲದೆ ಕಳೆದ ವರ್ಷ... ಬಣಬಣ. ಅದು ಬಾಗೇಪಲ್ಲಿಯಿಂದ ಗುಡಿಬಂಡೆಗೆ ಹೋಗುವ ಮಾರ್ಗದಲ್ಲಿ ಸಿಗುವ ಹಳ್ಳಿ. ಹಂಪಸಂದ್ರ ಅಂತ. ಆ ಹಳ್ಳಿಯ ಕೆರೆಯ ಏರಿಯ ಮೇಲೆ ಹೋಗಿ ನಿಂತು ನೋಡಿದರೆ ಕೆರೆಯ ಅಂಚಲ್ಲಿ ನೀರಲ್ಲಿ ಬಟ್ಟೆ ಒಗೆಯುವ ಮಹಿಳೆಯರ ದಂಡು. ಮತ್ತೊಂದು ಕಡೆ ಬಿಸಿಲ ಝಳ ತಾಳದೆ ನೀರಿಗೆ ನೆಗೆದು ಈಜುವ ಹುಡುಗರು. ಕೆರೆಯ ಮತ್ತೊಂದು ಬದಿಯ ಹೊಲದಲ್ಲಿ ದನಗಳಿಗೆ ಒಣ ಮೇವು ಹೊರೆ ಮಾಡಿಕೊಂಡು ಕುಳಿತಿರುವ ರೈತರನ್ನು ಮಾತಿಗೆ ಎಳೆದರೆ...ಸಿಕ್ಕ ಮಾಹಿತಿಗಳು ಇವು.

ಕಳೆದ ವರ್ಷ ಮಳೆ ಸರಿಯಾಗಿ ಆಗಿಲ್ಲ. ಎಷ್ಟೋ ಕಡೆ ಬೋರ್‌ವೆಲ್‌ಗಳಲ್ಲಿ ನೀರಿಲ್ಲ. ಜನರ ಕಷ್ಟ ಹೆಚ್ಚಿದೆ. ಐದು ವರ್ಷದ ಹಿಂದೆ ಗೆದ್ದ ಶಾಸಕರಿಗೆ ಇವೆಲ್ಲ ತಲೆ ಕೆಡಿಸಿಕೊಳ್ಳಬೇಕಾದ ಒಂದು ವಿಷಯವೇ ಅಲ್ಲ. ಅವರು ಯಾವ ಕಷ್ಟಗಳನ್ನು ಲೆಕ್ಕಕ್ಕೆ ತೆಗೆದುಕೊಂಡವರಲ್ಲ. ಬರ ಅಂತ ಜನರಿಗೆ ಏನಾದರೂ ಪರಿಹಾರ ಸಿಕ್ಕಿದೆಯಾ ? ಬಡವರಿಗೆ ಆಶ್ರಯವೋ ಮತ್ತೊಂದೋ ಏನಾದರು ಉಚಿತ ಸೈಟು ಅಂತ ಸಿಕ್ಕಿದೆಯಾ ? ಎಂದರೆ ಉತ್ತರ ಇಲ್ಲ... ಯಾರಿಗೂ ಇಲ್ಲ. ಊರಿನ ಜನರ ದೊಡ್ಡ ಕಷ್ಟ ನೀರಿನದು. ಆದರೆ ಒಂದೇ ಸಮಾಧಾನ. ಈ ಊರಲ್ಲಿ ಕಟ್ಟಿಸಲಾಗಿರುವ ಕೆರೆಯಿಂದಾಗಿ ದನಕರುಗಳ ನೀರಿಗೆ ಮತ್ತೊಂದಕ್ಕೆ ಆಸರೆಯಾಗಿದೆ. ಕೆರೆ ಅಂದ ತತ್‌ಕ್ಷಣ ಅವರು ನೆನಪಿಸಿಕೊಂಡಿದ್ದು ಹಾಲಿ ಶಾಸಕರನ್ನಲ್ಲ. ಹಿಂದಿನ ಶಾಸಕರನ್ನ. ಅಂದರೆ ಸಿಪಿಐ(ಎಂ) ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರನ್ನ.

" ಶ್ರೀರಾಮ ರೆಡ್ಡಿ ಮಾಟ ಬಾಗ ಪೆಟ್‌ಕೊಂಡಿ ಉಂಡಾಡು. ದುಡ್ಡು ಇಚ್ಚೇ ಲೇದು." ಯುವ ರೈತ ಗಂಗಾಧರಯ್ಯ ಅಭಿಮಾನದಿಂದ ಹೇಳಿದಾಗ ಜೊತೆಯಲ್ಲಿ ಕುಳಿತಿದ್ದ ನಾರಾಯಣಸ್ವಾಮಿ ಮತ್ತಿಬ್ಬರು ಹೌದು ಹೌದೆಂದು ತಲೆದೂಗಿದರು. ನನಗೆ ತೆಲುಗು ಪೂರ್ತಿ ಅರ್ಥ ಆಗಲಿಲ್ಲ ಅಂತ ಅವರಿಗೆ ಅನಿಸಿರಬೇಕು. ಅವರೆ ಕನ್ನಡದಲ್ಲೂ ಹೇಳಿದರು. "ಆಯಪ್ಪ ದುಡ್ಡು ಮಾಡಲ್ಲ. ಆದರೆ ಒಳ್ಳೆ ಕೆಲಸ ಮಾಡಿ ಒಳ್ಳೆ ಹೆಸರು ಉಳಿಸಿಕೊಂಡಿದ್ದಾರೆ....ಸ್ಕೂಲು, ಕಾಲೇಜು, ರೋಡು, ಆಸ್ಪತ್ರೆ, ಕೆರೆ, ಡ್ಯಾಮು, ಪವರ್ ಸ್ಟೇಷನ್ ಎಲ್ಲ ಅವರ ಕಾಲದಲ್ಲೆ ಆಗಿದ್ದು. ಆಗ ಚೆನ್ನಾಗಿ ಕೆಲಸ ಆಗಿತ್ತು."

ಇಂಥ ಅಭಿಪ್ರಾಯ ಅಲ್ಲಿ ಒಂದು ಕಡೆ ಮಾತ್ರ ಅಲ್ಲ. ನಾವು ಭೇಟಿ ಮಾಡಿದ ಎಲ್ಲ ಗ್ರಾಮಗಳಲ್ಲಿ ಜನ ಕೊಟ್ಟ ಅಭಿಪ್ರಾಯಗಳಲ್ಲಿ ಎರಡು ವಿಷಯ ಖಾಯಂ ಇರುತ್ತಿತ್ತು. ಮೊದಲನೆಯದು: ಹಾಲಿ ಕಾಂಗ್ರೆಸ್ ಶಾಸಕ ಸಂಪಂಗಿಯವರಿಂದ ಜನರಿಗೆ ಹೆಚ್ಚೇನೂ ಒಳ್ಳೆಯದು ಆಗಿಲ್ಲ. ಎರಡನೆಯದು ಜಿ.ವಿ ಶ್ರೀರಾಮ ರೆಡ್ಡಿಯವರು ಶಾಸಕರಾಗಿದ್ದ ಹಿಂದಿನ ಅವಧಿಯಲ್ಲಿ ಶಾಸಕರಾಗಿ ಅವರ ಪರಿಣಾಮಕಾರಿ ಕೆಲಸಗಳಿಂದ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ.

ಸಾಕ್ಷಿ ಗುರುತುಗಳು

ಜನ ಹೇಳಿದ್ದಕ್ಕೆ ಸಾಕ್ಷಿಗಳು ನಮಗೆ ಮುಂದಿನ ಭೇಟಿಗಳಲ್ಲಿ ಗೋಚರಿಸುತ್ತ ಹೋದವು. ನಾವೀಗ ಬಾಗೇಪಲ್ಲಿ ಕ್ಷೇತ್ರಕ್ಕೇ ಸೇರಿದ ಗುಡಿಬಂಡೆ ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಮುಂದೆ ಇದ್ದೆವು. ಈ ಕಾಲೇಜಿಗೆ ಕಟ್ಟಡ ಶ್ರೀರಾಮರೆಡ್ಡಿಯವರ ಕಾಲದಲ್ಲೇ ಮಂಜೂರಾಗಿತ್ತು. ಆ ಅವಧಿಯಲ್ಲೆ ಮೊದಲ ಅಂತಸ್ತಿನ ಕಟ್ಟಡದ ಕೆಲಸ ಮುಗಿದಿತ್ತು. ಆದರೆ ಕಳೆದ 5 ವರ್ಷಗಳಲ್ಲಿ ಆ ಕಾಲೇಜಿಗೆ ಕಟ್ಟಡ ಪೂರ್ಣವಾಗಲೇ ಇಲ್ಲ. ಅಥವ ಎರಡನೇ ಮಹಡಿಯ ಕೆಲಸ ಶುರುವೇ ಆಆಗಲಿಲ್ಲ ಎಂದರೆ ಹೆಚ್ಚು ಸರಿ. ಗುಡಿಬಂಡೆಯ ಹಾಸ್ಟೆಲ್‌ನಲ್ಲಿ ಕಾಲೇಜು ತರಗತಿಗಳನ್ನು ನಡೆಸುತ್ತಾ ಇರುವುದರಿಂದ ಒದ್ದಾಡುತ್ತಿರುವ ವಿದ್ಯಾರ್ಥಿ ಶಿಕ್ಷಕರ ದುಸ್ಥಿತಿ ತಪ್ಪಲೇ ಇಲ್ಲ. ಯಾವ ಪ್ರತಿಭಟನೆ ಬಗೆಗೂ ತಲೆಕೆಡಿಸಿಕೊಳ್ಳದ ಶಾಸಕರು ಮಾತ್ರ ಈಗ ಚುನಾವಣೆ ಹತ್ತಿರ ಬಂತು ಎಂದು ಅಪೂರ್ಣ ಕಟ್ಟಡಕ್ಕೆ ಸುಣ್ಣಬಣ್ಣ ಬಳಿಸಿದ್ದಾರೆ. ಬಳಕೆಗೆ ಸಿಗದೇ ಹೋದರೂ ಶಾಸ್ತ್ರಕ್ಕೆ ಉದ್ಘಾಟನೆ ಅಂತ ಮಾಡಿ ಮುಗಿಸುವ ಛಾತಿ ಕಾಂಗ್ರೆಸ್ ಶಾಸಕರದ್ದು. 2006 ರಲ್ಲೇ ಮಂಜೂರಾದ ಬಾಗೇಪಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಕತೆ ಇದಕ್ಕಿಂತ ಭಿನ್ನವಲ್ಲ. ಅಲ್ಲಿ ಈಗ ಚುನಾವಣೆಯ ಹೊತ್ತಿಗೆ ಕಟ್ಟಡದ ಕೆಲಸ ಆರಂಭವಾಗಿದೆ. ಶ್ರೀರಾಮರೆಡ್ಡಿಯವರ ಅವಧಿಯಲ್ಲೇ ಹಿಂದೆ ಗುಡಿಬಂಡೆಗೆ ಹೊಸ ಬಸ್ ನಿಲ್ದಾಣ ಮಂಜೂರಾಗಿ ಕಾಮಗಾರಿಯೂ ಮುಗಿಯಿತು. ಬಸ್ ನಿಲ್ದಾಣದ ಒಳಗೆ ಕಾಂಕ್ರೀಟೀಕರಣ ಒಂದು ಮಾತ್ರ ಬಾಕಿ ಇತ್ತು. ಕಳೆದ ಐದು ವರ್ಷದಲ್ಲಿ ಆ ನಿಟ್ಟಿನಲ್ಲಿ ಒಂದಿಂಚೂ ಏನೂ ಮುಂದೆ ಹೋಗಿಲ್ಲ. ಬಸ್ ನಿಲ್ದಾಣದೊಳಗೆ ಬಸ್‌ಗಳು ಓಡಾಡಿದರೆ ದೂಳು ಏಳುತ್ತದೆ. ಜಲ್ಲಿ-ಮಣ್ಣು ಹಾಸಿನ ನೆಲ ಹಾಗೇ ಇದೆ.



ಮನೆ ನಿವೇಶನ ಹೋರಾಟ ಬಾಗೇಪಲ್ಲಿಯಲ್ಲಿ...

ನೀರು, ಅಣೆಕಟ್ಟೆ, ಕೆರೆ

ಕರ್ನಾಟಕ ರಾಜ್ಯದ ಅಂಚಿನ ಆಂಧ್ರ ಪ್ರದೇಶದ ಗಡಿಯಲ್ಲಿರುವ ಕ್ಷೇತ್ರ ಬಾಗೆಪಲ್ಲಿ. ಗುಡಿಬಂಡೆ ತಾಲ್ಲೂಕು ಸಹ ಸೇರಿದಂತೆ 342 ಹಳ್ಳಿಗಳ ಸುಮಾರು 1,68,000 ದಷ್ಟು ಜನ ಮತದಾರರು ಕೇತ್ರದಲ್ಲಿದ್ದಾರೆ. ಡಾ. ನಂಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲುಕುಗಳ ಪಟ್ಟಿಯಲ್ಲಿ ಬರುವ ಪ್ರದೇಶವಿದು. ಹೀಗಾಗಿ ಜನ ಪ್ರತಿನಿಧಿಗಳಾದವರು ಈ ಕ್ಷೇತ್ರದ ಸಮಸ್ಯೆಗಳನ್ನು ಅಗತ್ಯಗಳನ್ನು ಸರಿಯಾಗಿ ಅರಿತು ಜನಪರ ದೃಷ್ಟಿಕೋನದಲ್ಲಿ ಕೆಲಸ ಮಾಡಬೇಕು. ಈಗಂತೂ ಕ್ಷೇತ್ರದಲ್ಲಿ ನೀರಿಗೆ ಹಾಹಾಕಾರ ಎದ್ದಿದೆ. ಗಂಭೀರ ನೀರಿನ ವಿಷಯದಲ್ಲಿ ಗಂಭೀರ ಸಮಸ್ಯೆಯನ್ನು ಮನಗಂಡೇ ಸಿಪಿಐ(ಎಂ) ಪಕ್ಷ ಚಿತ್ರಾವತಿ ನದಿಗೆ ಪರಗೋಡು, ವಂಡಮಾನ ಡ್ಯಾಮ್‌ಗಳ ನಿರ್ಮಾಣಕ್ಕೆ ಹೋರಾಟ ನಡೆಸಿತ್ತು. ಹಿಂದೆ ಶ್ರೀರಾಮ ರೆಡ್ಡಿಯವರ ಅವಧಿಯಲ್ಲೆ 17 ಕೋಟಿ ವೆಚ್ಚದ ಪರಗೋಡು ಅಣೆಕಟ್ಟೆ ಪೂರ್ಣಗೊಂಡಿತು. ಆದರೆ ನಂತರ ಹಳ್ಳಿಗಳಿಗೆ ನೀರು ಪೂರೈಸುವ ಸಂಬಂಧದ ಕಾಮಗಾರಿಗಳಲ್ಲಿ ಕಳಪೆ ಕೆಲಸ, ಹಣದ ದುರುಪಯೋಗ ಆಗಿದೆ ಎನ್ನುತ್ತಾರೆ ಜನರು. ನೀರಿನ ಹರಿವಿಗೆ ಒತ್ತಡ ತುಂಬಲು ಸಿಸ್ಟನ್ ಅಳವಡಿಸಿ, ಪ್ಲಾಟ್ ಫಾರಂ ಕಟ್ಟಿದ್ದರೂ ಪೈಪ್ ಲೈನ್, ಪಂಪ್‌ಹೌಸ್ ಮುಂತಾದ ಎಲ್ಲ ಕೆಲಸಗಳಲ್ಲಿ ಕಳಪೆ ಕಾಮಗಾರಿ ಆಗಿ ಎಷ್ಟೋ ಹಳ್ಳಿಗಳಿಗೆ ನೀರು ತಲುಪಲೇ ಇಲ್ಲ ಎಂದು ನೊಂದು ದೂರುತ್ತಾರೆ. ಚುನಾವಣೆ ಬಂತು. ವಂಡಮಾನ್ ಅಣೆಯ ಕೆಲಸ ಮುಗಿದಿರಲಿಲ್ಲ. ನಂತರ ಚುನಾಯಿತರಾದ ಶಾಸಕರು ಅದನ್ನು ಪೂರ್ಣಗೊಳಿಸಲು ಗಮನವನ್ನೇ ನೀಡಲಿಲ್ಲ. ಈ ವರ್ಷ ಮಳೆ ಕೊರತೆಯಿಂದ ಪರಗೋಡು ಕಟ್ಟೆಯಲ್ಲಿ ಸಹ ನೀರಿಲ್ಲ. ಆದರೆ ಕಳೆದ ಎರಡು ಮೂರು ವರ್ಷ ಪರವಾಗಿರಲಿಲ್ಲ.

ಹಳ್ಳಿಗಳಲ್ಲಿನ ಕೊಳವೆ ಬಾವಿಗಳಲ್ಲಿ ನೀರು ಇಂಗಿ ಬೋರ್‌ವೆಲ್‌ಗಳು ಸ್ಥಗಿತವಾಗುತ್ತಾ ಹೋಗುತ್ತಿವೆ. ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಮುಖಂಡರಿಗೆ ಈ ದೂರನ್ನು ಹೊತ್ತು ತಂದು ಆಡಳಿತದ ಮೇಲೆ ಒತ್ತಡ ಹೇರುವುದೇ ಕೆಲಸವಾಗಿದೆ. ತೀರಾ ಒತ್ತಡ ಹಾಕದ ಕಡೆ ಆರು ತಿಂಗಳಾದರೂ ಕೆಟ್ಟ ಬೋರ್‌ವೇಲ್ ರಿಪೇರಿಯಾಗಿಲ್ಲ. ಅಥವಾ ಹೊಸ ಕೊಳವೆ ಬಾವಿ ವ್ಯವಸ್ಥೆಯಾಗಿಲ್ಲ. ಯಾಕೆಂದರೆ ಜನ ಪ್ರತಿನಿಧಿಯ ಕಾಳಜಿ ಒತ್ತಡ. ಇಲ್ಲದೇ ಆಡಳಿತ ಜಡ್ಡು ಗಟ್ಟಿದೆ. ಕೆಲವೆಡೆ ಸ್ವಲ್ಪ ಸ್ವಂತ ನೀರಿನ ಮೂಲದ ಅನುಕೂಲ ಇರುವ ಖಾಸಗಿ ವ್ಯಕ್ತಿಗಳು ಬಿಂದಿಗೆ ನೀರಿಗೆ 25 ರೂಪಾಯಿಯಂತೆ ಮಾರಿಕೊಳ್ಳುತ್ತಾರಂತೆ. ಆಡಳಿತಕ್ಕೆ ಇವೆಲ್ಲಾ ಕಾಣುತ್ತಿಲ್ಲ. ವಾಸ್ತವವಾಗಿ ಕ್ಷೇತ್ರದಲ್ಲಿ ಜನರ ಸಮಸ್ಯೆಗಳ ಬಗೆಗೆ ಗಮನ ಕೊಡಲು ಅವಶ್ಯಕವಾದಷ್ಟು ಅಧಿಕಾರಿಗಳು ಮತ್ತು ಇಂಜನಿಯರುಗಳು ಇಲ್ಲ. ಹುದ್ದೆಗಳು ಖಾಲಿ ಬಿದ್ದಿವೆ. ಎಂಟು ಜನ ಇಂಜನೀಯರುಗಳು ಇರಬೇಕಾದ ಕಡೆ 2 ವರ್ಷದಿಂದ ಇಬ್ಬರು ಮಾತ್ರವೇ ಇದ್ದಾರೆ. ಅವರು ಎಷ್ಟು ಕಡೆ ಜಾಗ ನೋಡಿ ಅಂದಾಜು ಮಾಡಿ ಕೊಳವೆ ಬಾವಿ ತೆಗೆಯುವ ಬಗೆಗೆ ಕ್ರಮ ವಹಿಸಬಹುದು ? ಗುಡಿಬಂಡೆಯ ತಾಲ್ಲುಕು ಪಂಚಾಯಿತಿ ಇ.ಓ. ಅವರಿಗೆ ಬಾಗೇಪಲ್ಲಿ ತಾಲ್ಲೂಕು

ಪುಟ 11 ಕ್ಕೆ

ಬಾಗೇಪಲ್ಲಿ: ಸಮೀಕ್ಷೆ...

ಪುಟ 9 ರಿಂದ

ಪಂಚಾಯ್ತಿಯ ಹೊಣೆಯನ್ನು ಕೂಡ ಹೆಚ್ಚಿನ ಜವಾಬ್ದಾರಿಯಾಗಿ ನೀಡಲಾಗಿದೆ. ಇಂತಹ ಉದಾಹರಣೆಗಳು ಹಲವು. ಬಾಗೇಪಲ್ಲಿ ತಾಲ್ಲೂಕಿನಲ್ಲಿ 300 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಬಗ್ಗೆ ಶಾಸಕರು ದಿವ್ಯ ನಿರ್ಲಕ್ಷ್ಯ ವಹಿಸಿದ್ದಾರೆಂದು ಜನರು ದೂರುತ್ತಾರೆ. ತಾಲ್ಲೂಕು ಪಂಚಾಯಿತಿ ಹೋಗಲಿ ತಹಸೀಲ್ದಾರರ ಕಛೇರಿಯಲ್ಲಿಯೂ ಇದೇ ಪರಿಸ್ಥಿತಿ. ಪಹಣಿ ಪಡೆದುಕೊಳ್ಳುವುದರಿಂದ ಹಿಡಿದು ಸಾಗುವಳಿ ಚೀಟಿ ಪಡೆದುಕೊಳ್ಳುವ ವಿಚಾರದಲ್ಲಿ ಎಲ್ಲ ಕೆಲಸಗಳಲ್ಲಿ ಜನಕ್ಕೆ ಪರದಾಟ. ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ 8 ಜನ ವೈದ್ಯರಿರಬೇಕಾದ ಕಡೆ 3 ಮಾತ್ರ ಇದ್ದಾರೆ. ಅವರಲ್ಲೂ ಒಬ್ಬರು ಮಾತ್ರವೇ ಖಾಯಂ ವೈದ್ಯರು. ಇನ್ನು ಉಳಿದ ಇಬ್ಬರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವರು. ಇಲ್ಲಿ ಔಷಧಿಗಳ ತೀವ್ರ ಕೊರತೆ. " ಆಸ್ಪತ್ರೆಯಲ್ಲಿ ಹೆರಿಗೆಯಾದ ಬಾಣಂತಿಯನ್ನು ತಂದು ನೆಲದ ಮೇಲೆ ಮಲಗಿಸ್ತಾರೆ ಸೋಮಿ..." ಅಂತ ಆ ಮಹಿಳೆಯರು ಅಂದಾಗ ಅವರ ದನಿಯಲ್ಲಿ ಎಷ್ಟೋ ನೋವಿತ್ತು. ಅಂತಹ ಎಷ್ಟೋ ಪ್ರಸಂಗಗಳಲ್ಲಿ ಜನರ ನೆರವಿಗೆ ಬಂದಿರುವುದು ಸಿಪಿಐ(ಎಂ) ಮಾಜಿ ಶಾಸಕರೇ ಹೊರತು, ಹಾಲಿ ಶಾಸಕರಲ್ಲ. ರಾಜ್ಯ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಜನರ ಸ್ಥಿತಿಗತಿ ಏನು ಎಂಬುದಕ್ಕೆ ಸಹ ಇವೆಲ್ಲಾ ಉದಾಹರಣೆಗಳಾಗಿವೆ. ಆದರೆ ಕ್ಷೇತ್ರದ ಶಾಸಕರು ಮುತುವರ್ಜಿ ವಹಿಸಿ ಗಮನ ನೀಡಿದರೆ ಇರುವ ಮಿತಿಯಲ್ಲೂ ಜನರ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಹುಡುಕಬಹುದಾಗಿತ್ತು. ಕಾಳಜಿ ಬೇಕಷ್ಟೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮೂರು ತಿಂಗಳು, ಆರು ತಿಂಗಳಾದರೂ ಜನರಿಗೆ ಕೂಲಿ ಸಿಕ್ಕಿಲ್ಲ. ಕ್ಷೇತ್ರದಲ್ಲಿ 'ಬಸವ ಇಂದಿರಾ' ವಸತಿ ಯೋಜನೆಯಲ್ಲಿ ಸುಮಾರು 3,000 ಮನೆ ಮಂಜೂರಾಗಿದ್ದರೂ 500 ಮನೆಗಳಷ್ಟನ್ನೂ ಜನರಿಗೆ ಹಂಚಿಲ್ಲ. ಮತ್ತು ಮಾಡಿರುವ ಹಂಚಿಕೆಯಲ್ಲಿ ವ್ಯಾಪಕ ಅಕ್ರಮಗಳಾಗಿವೆ ಎಂದು ಜನ ದೂರುತ್ತಾರೆ. ಒಂದು ಹಳ್ಳಿಯಲ್ಲಂತೂ ವಯಸ್ಸಾದ ಹಿರಿಯರೊಬ್ಬರು ಕಾಂಗ್ರೆಸ್ ಶಾಸಕರ ಹೆಸರು ಕೇಳಿದ ಕೂಡಲೇ ಚೇಳು ಕಡಿದವರಂತೆ ಸಿಟ್ಟಿಗೆದ್ದರು. ಸೈಟು, ಮನೆ ಯಾವುದೂ ಜನಗಳಿಗೆ ಸಿಗುವುದಿಲ್ಲ. 'ಮೇಲಿನವರು ಮತ್ತು ಅವರ ಕಡೆಯವರಿಗೇ ಅದು ಸಾಲುವುದಿಲ್ಲ' ಎಂದು ಸಿಡಿಮಿಡಿಗೊಂಡರು. ಶ್ರೀರಾಮರೆಡ್ಡಿಯವರ ಅವಧಿಯಲ್ಲಿ ಬಾಗೇಪಲ್ಲಿ ಟೌನ್‌ನಲ್ಲಿ ರಾಜೀವ ಗಾಂಧಿ ಹೌಸಿಂಗ್ ಬೋರ್ಡ್ ಮೂಲಕ 350 ಮನೆ ನಿವೇಶನಗಳ ಹಂಚಿಕೆಯಾಗಿತ್ತು. ಆದರೆ ಸಂಪಂಗಿಯವರ ಅವಧಿಯಲ್ಲಿ ಒಂದೇ ಒಂದು ಮನೆ ನಿವೇಶನ ಕೂಡ ಕೊಟ್ಟಿಲ್ಲ ಎಂಬುದು ಪರಿಸ್ಥಿತಿ ಎಷ್ಟು ಕೆಟ್ಟಿದೆ ಅನ್ನುವುದನ್ನು ತೋರಿಸುತ್ತದೆ.

ಹುಸಿಯಾದ ಭರವಸೆ

ಜನ ಏನೇ ಸಿಟ್ಟಿಗೆದ್ದರೂ ಶಾಸಕರು ಹೇಳಿಕೊಂಡು ಓಡಾಡುವುದೇ ಬೇರೆ. ಕ್ಷೇತ್ರದಲ್ಲಿ 500 ಕೋಟಿ ರೂಪಾಯಿಗಳ ಕೆಲಸ ಮಾಡಿಸಿದ್ದೇನೆ ಎಂದು ಅವರು ಜಂಭ ಕೊಚ್ಚಿಕೊಳ್ಳುತ್ತಾರಂತೆ. ಸಿಪಿಐ(ಎಂ) ಶಾಸಕರ ಅವಧಿಯಲ್ಲಿ ಮಂಜೂರಾದ ಯೋಜನೆಗಳನ್ನು ಅವರು ತಮ್ಮದೆಂದು ಹೇಳಿಕೊಳ್ಳಲು ಹಿಂಜರಿಯುವುದಿಲ್ಲ ಎನ್ನುತ್ತಾರೆ ಜನ. ಉದಾಹರಣೆಗೆ ಬಾಗೇಪಲ್ಲಿ–ಚೇಳೂರು ರಸ್ತೆ ವಿಸ್ತರಣೆಯ 1.5 ಕೋಟಿ ರೂ. ಯೋಜನೆ ಮಂಜೂರಾಗಿದ್ದು, ಪ್ರವಾಸೋದ್ಯಮ ಇಲಾಖೆಯಿಂದ 4.5 ಕೋಟಿ ರೂ.ಗಳ ನಗರ್ಲು–ಗುಮ್ಮನಾಯಕನ ಪಾಳ್ಯ ರಸ್ತೆ ಮಂಜೂರಾಗಿದ್ದು ಹಿಂದೆ ಶ್ರೀರಾಮರೆಡ್ಡಿಯವರ ಮುತುವರ್ಜಿಯಿಂದ ಮತ್ತು ಅವರ ಕಾಲದಲ್ಲಿ. ಕಾಂಗ್ರೆಸ್ ಶಾಸಕರು ಅದನ್ನು ತಮ್ಮ ಖಾತೆಗೆ ಸೇರಿಸಿಕೊಂಡು ಬಿಟ್ಟಿದ್ದಾರೆ.

ಕ್ಷೇತ್ರದಲ್ಲಿ ಇಸ್ಪೀಟು ದಂಧೆ, ಮಟ್ಕಾ ದಂಧೆ ತಲೆ ಎತ್ತಿದೆ. ಬೇರೆ ಏನಕ್ಕೊ ಅನುಮತಿ ಪಡೆದು ನಡೆಯುತ್ತಿರುವ 15 ಕ್ಲಬ್‌ಗಳು ಬಾಗೇಪಲ್ಲಿಯಲ್ಲಿ ಇವೆ ಎಂದೂ ದೂರುಗಳು ಕೇಳಿ ಬರುತ್ತಿವೆ. ಇಂತಹ ದಂಧೆಗಳು ನಡೆಯುತ್ತಿರುವಾಗ ಶಾಸಕರು ಏನು ಮಾಡುತ್ತಿದ್ದಾರೆ. ಅವರು ಹೆಚ್ಚಾಗಿ ಚಿಕ್ಕಬಳ್ಳಾಪುರ ಲೋಕಸಭಾ ಸದಸ್ಯ ಮತ್ತು ಕೇಂದ್ರ ಮಂತ್ರಿ ವೀರಪ್ಪ ಮೊಯಿಲಿಯವರ ಜೊತೆ ತಿರುಗುತ್ತಾರೆ. ಬೆಂಗಳೂರಿನಲ್ಲಿ ಕಾಲ ಕಳೆಯುತ್ತಾರೆ. ಕ್ಷೇತ್ರದ ಜನರಿಗೆ ಸುಲಭದಲ್ಲಿ ಸಿಗುವುದಿಲ್ಲ ಎನ್ನುತ್ತಾರೆ ಜನ. ಶ್ರೀರಾಮರೆಡ್ಡಿಯವರ ಅವಧಿಯಲ್ಲಿ 3.5 ಸಾವಿರ ಎಕರೆ ಬಗರ್ ಹುಕುಂ ಹಾಗೂ ದರಕಾಸ್ತು ಜಮೀನು ಬಡರೈತರಿಗೆ ದಕ್ಕಿದ್ದರೆ ಕಾಂಗ್ರೆಸ್ ಶಾಸಕರ ಅವಧಿಯಲ್ಲಿ ಒಂದು ಗುಂಟೆ ಜಮೀನು ಸಹ ಈ ಲೆಕ್ಕದಲ್ಲಿ ರೈತರಿಗೆ ದಕ್ಕಿಲ್ಲ. ಜನರಿಗೆ ಭೂಮಿ ಕೊಡಿಸುವ ಉಸಾಬಾರಿ ಯಾರಿಗೆ ಬೇಕು ? 1999 ರಿಂದಲೂ ಸಂಪಂಗಿಯವರು ಕ್ಷೇತ್ರಕ್ಕೆ 5 ಸಾವಿರ ಜನರಿಗೆ ಕೆಲಸ ನೀಡುವ ಕಾರ್ಖಾನೆ ತರುತ್ತೇನೆ ಎಂದು ಭರವಸೆ ಕೊಟ್ಟಿದ್ದು ಇಂದಿಗೂ ಭರವಸೆಯಾಗಿಯೇ ಉಳಿದಿದೆ. ಸಂಪಂಗಿಯವರು ಅದನ್ನು ಈಗ ಮರೆತಿರಬಹುದು ಆದರೆ ಜನ ಮರೆತಿಲ್ಲ.

ಅಭಿವೃದ್ದಿ ಯೋಜನೆಗಳ ಸರ್ಕಾರದ ಅನುದಾನದಲ್ಲಿ ದಲಿತರ ಪಾಲನ್ನು ಪ್ರತ್ಯೇಕವಾಗಿ ನಿಶ್ಚಿತವಾಗಿ ನಿಗದಿ ಮಾಡಿ ಪ್ರತ್ಯೇಕ ಉಪಯೋಜನೆಯ ಮೂಲಕ ಅದನ್ನು ದಲಿತರ ಅಭಿವೃದ್ದಿಗಾಗಿಯೇ ಖರ್ಚು ಮಾಡಬೇಕೆಂಬ ಷರತ್ತುಗಳೆಲ್ಲ ಈಗ ಇರುವುದರಿಂದ ಈ ಶಾಸಕರ ಅವಧಿಯಲ್ಲಿ ದಲಿತರ ಕಾಲೋನಿಗಳ ಓಣಿಯ ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟೀಕರಣ ಮಾಡಲಾಗಿದೆ. ಆಗಬೇಕಿದ್ದ ಕೆಲಸ, ಒಪ್ಪಬೇಕಾದದ್ದೇ. ಕಳೆದ ಐದು ವರ್ಷದ ಅವಧಿಯಲ್ಲಿ ಕ್ಷೇತ್ರಕ್ಕೆ ಒಂದೇ ಒಂದು ಸರ್ಕಾರಿ ಆಸ್ಪತ್ರೆ, ಪಶು ವೈದ್ಯಕೀಯ ಆಸ್ಪತ್ರೆ, ಪ್ರಾಥಮಿಕ ಶಾಲೆ ಯಾವುದೂ ಮಂಜೂರಾಗಿಲ್ಲ. ಶ್ರೀರಾಮರೆಡ್ಡಿಯವರ ಅವಧಿಯಲ್ಲಿ 2 ಆಸ್ಪತ್ರೆಗಳು, 3 ಪಶು ವೈದ್ಯಕೀಯ ಆಸ್ಪತ್ರೆಗಳು, 9 ಸರ್ಕಾರಿ ಪ್ರೌಢಶಾಲೆಗಳೆಲ್ಲ ಮಂಜೂರಾಗಿದ್ದವು ಎಂಬುದನ್ನು ಜನ ನೆನೆಸಿಕೊಳ್ಳುತ್ತಿದ್ದಾರೆ.

ಜನವಿರೋಧಿ ನೀತಿಗಳ ವಿರುದ್ದ ಚಕಾರವಿಲ್ಲ

ಜನರಿಂದ ರೇಷನ್ ಕಾರ್ಡು ಕಸಿದುಕೊಳ್ಳುವ ಬಿಜೆಪಿ ಸರ್ಕಾರದ ಯೋಜನೆಯ ಫಲವಾಗಿ ಕ್ಷೇತ್ರದ ಜನತೆಗೆ ಏನೇನೋ ಸಲ್ಲದ ಕುಂಟು ನೆಪ ಹೇಳಿ 14 ಸಾವಿರ ರೇಷನ್ ಕಾರ್ಡುಗಳನ್ನು ಕಿತ್ತುಕೊಳ್ಳಲಾಯಿತು. ಈ ಹೊತ್ತಿನಲ್ಲಿ ಇದರ ವಿರುದ್ಧ ದನಿ ಎತ್ತಿದ್ದು ಸಿಪಿಐ(ಎಂ) ಪಕ್ಷ. ಕೇಂದ್ರ ಯುಪಿಎ ಸರ್ಕಾರದ ನೀತಿಯನ್ನು ಬಿಜೆಪಿ ಸರ್ಕಾರ ಶಿರಸಾವಹಿಸಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಜಾರಿ ಮಾಡುತ್ತಿರುವಾಗ ತಾನಾದರೂ ಯಾಕೆ ವಿರೋಧಿಸಬೇಕು ಎಂದುಕೊಂಡೋ ಏನೋ ಇಲ್ಲಿಯ ಕಾಂಗ್ರೆಸ್ ಶಾಸಕರು ಈ ಬಗ್ಗೆ ಸೊಲ್ಲೆ ಎತ್ತಲಿಲ್ಲ. ತಿಮ್ಮಂಪಲ್ಲಿಯಲ್ಲಿ ಪವರ್ ಸ್ಟೇಷನ್ ಶ್ರೀರಾಮರೆಡ್ಡಿಯವರ ಅವಧಿಯಲ್ಲೇ ಜಾರಿಯಾಯಿತು. ಆದರೆ ಪಾತಪಾಳ್ಯದ ಪವರ್ ಸ್ಟೇಷನ್‌ಗೆಂದು ಸೋಮೇನಹಳ್ಳಿಯಲ್ಲಿ ಆಗಲೇ ಜಮೀನು ಮಂಜೂರಾಗಿದ್ದರೂ ಪವರ್ ಸ್ಟೇಷನ್ ಮಾತ್ರ ಬರಲೇ ಇಲ್ಲ. ಹೀಗಾಗಿ ಗ್ರಾಮೀಣ ಭಾಗದ ಜನರ ವಿದ್ಯುತ್ ತೊಂದರೆಗೆ ಕೊಂಚವಾದರೂ ಪರಿಹಾರ ಸಿಗಬಹುದಾಗಿದ್ದದ್ದು ಸಿಗಲಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಸೂಕ್ತ ಸಾರಿಗೆ, ರಸ್ತೆ ಸೌಕರ್ಯಗಳಿಲ್ಲದೇ ಜನ ಒದ್ದಾಡುತ್ತಾರೆ. ಕ್ಷೇತ್ರದ ಅಭಿವೃದ್ದಿಗೆ ಏನೊಂದನ್ನೂ ಮಾಡದ ಕಾಂಗ್ರೆಸ್ ಶಾಸಕರು ಬಾಗೇಪಲ್ಲಿ ಟೌನ್ ಪಕ್ಕದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಯೋಜನೆಯೂ ಸಹ ತಮ್ಮಿಂದಲೇ ಆಗಿದ್ದು ಎಂದು ಹೇಳಿಕೊಳ್ಳುತ್ತಾರಂತೆ. ಹೀಗಂತ ಜನ ತಮಾಷೆ ಮಾಡುತ್ತಾರೆ. ಅದು ನಿಜವೂ ಇರಬಹುದು. ಏಕೆಂದರೆ ಗುಡಿಬಂಡೆಯಲ್ಲಿ ಕಟ್ಟಿಸಿಯೇ ಇಲ್ಲದ –ಇನ್ನು ಮುಂದೆ ಕಟ್ಟಿಸಬೇಕೆಂದಿರುವ ಸಮುದಾಯ ಭವನಕ್ಕೆ 10 ಲಕ್ಷ ವೆಚ್ಚ ತೋರಿಸಿ ಕೆಲಸ ಆಗೇ ಹೋಗಿದೆ ಅಂತ ಪ್ರಚಾರ ಮಾಡಿಕೊಳ್ಳುತ್ತಿದ್ದಾರಂತೆ ಶಾಸಕರು. ಆದರೆ ಕಾಮಗಾರಿಗಳು ಯಾಕೆ ಕಳಪೆಯಾಗುತ್ತವೆ, ಶಾಸಕರು ಪಿ.ಡಿ.ಒ. ಅಧಿಕಾರಿಗಳ, ಮತ್ತಿತರೆ ಅಧಿಕಾರಿಗಳ ಸಭೆ ಸೇರಿಸಿ ಏನು ಕೇಳುತ್ತಾರೆಂಬ ಬಗ್ಗೆ ತಮ್ಮ ಅನುಭವಗಳ ಆಧಾರದಲ್ಲಿ ಜನ ಏನೇನೋ ಹೇಳುತ್ತಾರೆ. ಜನರ ಅನುಭವ ದೊಡ್ಡದು. ಸಾಮಾನ್ಯವಾಗಿ ಜನ ಇಲ್ಲ ಸಲ್ಲದ್ದು ಮಾತನಾಡುವುದಿಲ್ಲ. ಅದೇ ಪ್ರಜಾಪ್ರಭುತ್ವದ ಒಂದು ವಿಶಿಷ್ಟ ಶಕ್ತಿ.

ಮರು ಭರವಸೆಯ ಯತ್ನ

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ನಾನು ಮಂತ್ರಿ ಆಗುತ್ತೇನೆ. ಅಭಿವೃದ್ದಿ ಕೆಲಸ ಮಾಡಿಸುತ್ತೇನೆ. ನನಗೆ ಓಟು ಕೊಡಿ ಅಂತ ಈಗ ಶಾಸಕರು ಜನರನ್ನು ಒಲೈಸಲು ಪ್ರಯತ್ನ ಪಡುತ್ತಿದ್ದಾರೆ. ತಾವು ಶಾಸಕರಾಗಿಲ್ಲ ಎಂಬ ಕಾರಣಕ್ಕೆ ಶ್ರೀರಾಮರೆಡ್ಡಿಯವರ ಅವಧಿಯಲ್ಲಿ 350 ಮನೆಗಳನ್ನು ಜನರಿಗೆ ಹಂಚಿಕೆ ಮಾಡುವುದಕ್ಕೆ ಅಡ್ಡಿ ಮಾಡಿ ತಡೆಯಲು ಯತ್ನಿಸಿದ್ದ ವ್ಯಕ್ತಿ, ಐದು ವರ್ಷ ಶಾಸಕರಾಗಿ ಜನತೆಗಾಗಿ ಸರಿಯಾಗಿ ಏನನ್ನೂ ಮಾಡದ ವ್ಯಕ್ತಿ ಮಂತ್ರಿಯಾಗಿ ಜನರಿಗೆ ಏನು ಮಾಡಬಹುದು ? ಎಂದು ಜನರು ಕೂಡ ಲೆಕ್ಕ ಹಾಕುತ್ತಿದ್ದಾರೆ.

ಸಾಮೂಹಿಕ ವಿವಾಹಗಳ 'ಸೇವೆ'

ಚುನಾವಣೆಯ ಸನ್ನಿವೇಶದಲ್ಲಿ ಸ್ವಲ್ಪ ಹೆ ಚರ್ಚೆಗೆ ಬಂದಿರುವ ಮತ್ತೊಂದು ಹೆಸ ಎಸ್.ಎನ್. ಸುಬ್ಬಾರೆಡ್ಡಿಯವರದ್ದು. ಕಾಂಗ್ರೆ ಟಿಕೇಟಿಗೆ ಪ್ರಯತ್ನಿಸಿದ್ದಾರೆ. ಸಿಕ್ಕಿಲ್ಲ. ಹಾಗಾ ಬಂಡಾಯ ಅಭ್ಯರ್ಥಿ. ಕ್ಷೇತ್ರದಲ್ಲಿ ಆಗಾ ಸಾಮೂಹಿಕ ವಿವಾಹಗಳನ್ನು ಸಂಘಟಿಸುತ್ತ ಬಂದಿದ್ದಾರೆ. ಮದುವೆಯಾಗುವವರಿ ಉಚಿತ ಬಟ್ಟೆ ತಾಳಿ ಇತ್ಯಾದಿ ನೀ ಬಂದವರಿಗೆ ಊಟ ಹಾಕಿಸುತ್ತಾರೆ. ಸೀರೆ ಪಂಚೆ ನೀಡುವವರು ಎಷ್ಟು ದಿ ನೀಡುತ್ತಾರೆ ? ಊಟ ಹಾಕಿಸುವವರು ಎಷ ದಿನ ಊಟ ಹಾಕಿಸುತ್ತಾರೆ.? ಇವೆಲ್ಲಾ ಸ್ವ ಜಾಗೃತರಾದವರು ಕೇಳುವ ಪ್ರಶ್ನೆ. ಆದ ಈ ಮಟ್ಟದ ತಿಳುವಳಿಕೆ ಇಲ್ಲದವರು ಅದ ಒಂದು ಮಹತ್ಕಾರ್ಯ ಎಂದು ಭಾವಿಸುವುದ ಸಾಧ್ಯವಿದೆ. ನಾವು ಭೇಟಿ ಮಾಡಿದ ಕೆಲವರ ಅಂತಹ ಭಾವನೆ ಕಂಡು ಬಂತು. ಇದ ಜನರ ಜೀವನ ಪರಿಸ್ಥಿತಿ ದಿನೇ ದಿನೇ ಎಷ ದುರ್ಬರವಾಗುತ್ತಾ ಹೋಗುತ್ತಿದೆ ಎಂಬುದ ಸಾಕ್ಷಿ ಅಷ್ಟೆ. ಪೌರಾಣಿಕ ನಾಟಕಗಳನ್ನು ಆ ಎಂದು ಧಾರಾಳವಾಗಿ ಹಣ ನೀಡುವವರ ಯಾಕೆ ಆ ರೀತಿ ಹಣ ನೀಡುತ್ತಾರೆ, ಹಣವನ್ನು ಅವರು ಎಲ್ಲಿಂದ ತರುತ್ತಾರೆ... ಎಷ್ಟೋ ಜನರಿಗೆ ಇವು ಉತ್ತರ ಬೇಕಿಲ್ಲದ ಅಪ್ರಿಯ ಪ್ರಶ್ನೆಗಳು.

ರಿಯಲ್ ಎಸ್ಟೇಟ್ ಉದ್ಯಮಿ

ಕ್ಷೇತ್ರದ ಜೆಡಿ(ಎಸ್) ಪಕ್ಷದ ಅಭ್ಯರ್ಥಿ ಹರಿನಾಥ ರೆಡ್ಡಿ ಚೇಳೂರು ಕ್ಷೇತ್ರದ ಹಾಲಿ ಜಿಲ್ಲಾ ಪಂಚಾಯ್ತಿ ಸದಸ್ಯರು. ಅದಕ್ಕಿಂತ ಮುಖ್ಯವಾಗಿ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ಉದ್ಯಮಿ. ಚೆಕ್ ಬೌನ್ಸ್ ಪ್ರಕರಣದಲ್ಲಿ ಜೈಲುವಾಸ ಕಂಡ ಇವರ ಅನುಭವದಿಂದ ಜನತೆಗೆ ಏನು ಲಾಭವಿದ ಎಂದು ಜನರು ಯೋಚಿಸಬೇಕಿದೆ.

ಹೋರಾಟದ ದಾರಿ

ಸಿಪಿಐ(ಎಂ) ಪಕ್ಷ ಜನರಲ್ಲಿ ರಾಜಕೀಯ ಜಾಗೃತಿ ಮೂಡಿಸಿ ಜನರನ್ನು ಸಂಘಟಿಸಿ ಅವರು ತಮ್ಮ ನ್ಯಾಯಬದ್ದ ಹಕ್ಕುಗಳಿಗಾಗಿ ಹೋರಾಡುವ ವಿಷಯದಲ್ಲಿ ಅವರ ಜೊತೆಗೆ ನಿಲ್ಲಬೇಕೆಂಬ ನಿಲುವು ಹೊಂದಿರುವ ಪಕ್ಷ ಜನ ಪ್ರತಿನಿಧಿಯಾಗಿ ಚುನಾಯಿತರಾಗಿದ್ದ ಸಿಪಿಐ(ಎಂ) ಶಾಸಕರು ಜನರ ಅಗತ್ಯಗಳನ್ನು ಪೂರೈಸಲು, ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾದ ಮಿತಿಯಲ್ಲಿ ಗರಿಷ್ಟ ಪ್ರಯತ್ನ ಮಾಡಿದ್ದಾರೆ ಎಂಬುದನ್ನು ಜನರೂ ಒಪ್ಪುತ್ತಾರೆ. ಚುನಾವಣೆಯಲ್ಲಿ ಸೋಲಾಯಿತೆಂದು ಪಕ್ಷ, ಮುಖಂಡರು ಸುಮ್ಮನೆ ಕೂರಲಿಲ್ಲ. ಕಳೆದ ಐದು ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಜನರ ಪ್ರಶ್ನೆಗಳ ಆಧಾರದಲ್ಲಿ ಪಕ್ಷ ಹೋರಾಟ ನಡೆಸುತ್ತ ಬಂದಿದೆ. ರೇಷನ್ ಕಾರ್ಡು ನೀಡಿಕೆಗಾಗಿ ಹೋರಾಟ, ಮನೆ ನಿವೇಶನಕ್ಕಾಗಿ 30 ಸಾವಿರ ಅರ್ಜಿಗಳನ್ನು ಸಲ್ಲಿಸಿ ನಡೆಸಲಾಗಿರುವ ವಸತಿ ರಹಿತರ ಹೋರಾಟ, ಕುಡಿಯುವ ನೀರಿನ ಸಮಸ್ಯೆಗಳ ವಿರುದ್ದದ ಹೋರಾಟ, ಕೆರೆ ಅಣೆಕಟ್ಟೆಗಳ ಹೂಳು ತೆಗೆಯಲು ಒತ್ತಾಯಿಸಿ ಹೋರಾಟ, ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕಾಗಿ, ದಲಿತ ಹಕ್ಕುಗಳಿಗಾಗಿ, ದಲಿತರ ಪಾಲಿನ ಅಭಿ

→

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಟ್ಟಡ ಕಾರ್ಮಿಕರ 2ನೇ ರಾಜ್ಯ ಸಮ್ಮೇಳನ

– ವೆಂಕಟೇಶ್ ಕೋಣಿ.

ಸಿಐಟಿಯು ಸಂಯೋಜಿತ ಭಾರತ ಕಟ್ಟಡ ಕಾರ್ಮಿಕರ ಒಕ್ಕೂಟ (ಸಿಡಬ್ಲ್ಯೂಎಫ್ಐ)ದ ಕರ್ನಾಟಕ ರಾಜ್ಯ ಘಟಕದ 2ನೇ ಸಮ್ಮೇಳನವು 2013 ಮಾರ್ಚ್ 16 ಮತ್ತು 17 ರಂದು ಮಂಡ್ಯ ನಗರದಲ್ಲಿ ಯಶಸ್ವಿಯಾಗಿ ನಡೆಯಿತು.

ಪ್ರತಿನಿಧಿಗಳ ಅಧಿವೇಶನದ ಪೂರ್ವದಲ್ಲಿ ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಕಟ್ಟಡ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾದ ಬಿ. ಮಾಧವ ವಹಿಸಿದ್ದರು. ಸಂಘಟನೆಯ ಅಖಿಲ ಭಾರತ ಅಧ್ಯಕ್ಷರಾದ ಆರ್.ಸಿಂಗಾರವೇಲು, ಪ್ರಧಾನ




ಕಾರ್ಯದರ್ಶಿ ದೇಬಾಂಜನ್ ಚಕ್ರವರ್ತಿ, ಆಂಧ್ರ ಪ್ರದೇಶ ರಾಜ್ಯ ಸಮಿತಿಯಅಧ್ಯಕ್ಷರಾದ ಆರ್. ಕೊಟ್ಟಂರಾಜು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಪಾಧ್ಯಕ್ಷ ಎಂ. ಪುಟ್ಟಮಾದು, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ. ರಾಮಕೃಷ್ಣ, ಸಿಐಟಿಯು ಜಿಲ್ಲಾ ಖಜಾಂಚಿ ಸಿ.ಕುಮಾರಿ, ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಪರಮೇಶ ಕರೆಗೋಡು ಉಪಸ್ಥಿತರಿದ್ದರು.

ರಾಜ್ಯದ ಒಟ್ಟು 15 ಜಿಲ್ಲೆಗಳಿಂದ 140 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರ ಪೈಕಿ 8 ಮಂದಿ ಮಹಿಳಾ ಪ್ರತಿನಿಧಿಗಳಾಗಿದ್ದರು. ಎನ್. ವೀರಸ್ವಾಮಿ ಪ್ರಧಾನ ಕಾರ್ಯದರ್ಶಿ ವರದಿಯನ್ನು ಮಂಡಿಸಿದರು. ಪ್ರತಿನಿಧಿಗಳು ಜಿಲ್ಲಾವಾರು ಗುಂಪು ಚರ್ಚೆ ನಡೆಸಿ, ಅನಂತರ ಒಟ್ಟು 28 ಮಂದಿ ಪ್ರತಿನಿಧಿಗಳು ಕರಡು ವರದಿಯ ಮೇಲೆ ವಿಮರ್ಶಾತ್ಮಕ ಚರ್ಚೆ ನಡೆಸಿದರು. ಚರ್ಚೆಯ ಬಳಿಕ ರಾಜ್ಯ ಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿಗಳು ಉತ್ತರ ನೀಡಿದ ನಂತರ ವರದಿಯನ್ನು ಅಂಗೀಕರಿಸಲಾಯಿತು.

ಸಿಐಟಿಯು ರಾಜ್ಯ ಸಮಿತಿಯ ಕಾರ್ಯದರ್ಶಿ ಕೆ. ಮಹಾಂತೇಶ್ ಗುತ್ತಿಗೆ ಕಾರ್ಮಿಕ ಸಂಘ, ಹಮಾಲಿ ಕಾರ್ಮಿಕರ ಸಂಘ ಹಾಗೂ 'ಸಿಐಟಿಯು ಸಂದೇಶ' ಪರವಾಗಿ ಸಮ್ಮೇಳನಕ್ಕೆ ಶುಭಕೋರಿದರು.

ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ ಅಖಿಲ ಭಾರತ ಪ್ರಧಾನ



ಕಾರ್ಯದರ್ಶಿ ದೇಬಾಂಜನ್ ಚಕ್ರವರ್ತಿ, ಪ್ರತಿನಿಧಿಗಳಿಗೆ ಕಟ್ಟಡ ನಿರ್ಮಾಣ ಕೈಗಾರಿ–ಕೆಯ ಮಹತ್ವವನ್ನು ವಿವರಿಸಿದರು. ಕಟ್ಟಡ ನಿರ್ಮಾಣ ಕೈಗಾರಿಕೆಗೂ ಸಿಮೆಂಟ್, ಉಕ್ಕು, ಕಟ್ಟಡ ನಿರ್ಮಾಣ ಸಾಮಗ್ರಿಗಳು ಮೊದಲಾದ ಅನೇಕ ಕೈಗಾರಿಕೆಗಳೊಂದಿಗೆ ಸಂಬಂಧವಿದೆ. ಈ ಕೈಗಾರಿಕೆಗಳಲ್ಲಿ ಸುಮಾರು 15 ರಿಂದ 20 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಕಟ್ಟಡ ನಿರ್ಮಾಣ ಕೈಗಾರಿಕೆ ಸಮೃದ್ಧವಾದರೆ ಸಂಬಂಧಪಟ್ಟ ಇತರ ಎಲ್ಲಾ ಕೈಗಾರಿಕೆಗಳೂ ಸಮೃದ್ಧವಾಗುತ್ತವೆ. ಕಟ್ಟಡ ನಿರ್ಮಾಣ ಕೈಗಾರಿಕೆ ಕುಸಿದರೆ ಅದರ ಪರಿಣಾಮ ಇತರ ಕೈಗಾರಿಕೆಗಳ ಮೇಲೆಯೂ ಆಗುತ್ತದೆ. ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರ ಕೇಂದ್ರೀಯ ಶಾಸನ ಮತ್ತು ಕಲ್ಯಾಣ ಯೋಜನೆ ಸಮರ್ಪಕವಾಗಿ ಜಾರಿಯಾಗುವಂತೆ ನಮ್ಮ ಸಂಘಟನೆ ಶ್ರಮಿಸಬೇಕು ಎಂದು ಹೇಳಿದ ಅವರು ಸಂಘದ ಸದಸ್ಯತ್ವವನ್ನು ಹೆಚ್ಚಿಸಲು ಹೆಚ್ಚಿನ ಗಮನ ನೀಡಬೇಕು ಎಂದರು.

ಅಖಿಲ ಭಾರತ ಅಧ್ಯಕ್ಷರಾದ ಆರ್. ಸಿಂಗಾರವೇಲು ಮಾತನಾಡಿ ತಮಿಳುನಾಡಿನಲ್ಲಿ ಕಟ್ಟಡ ಕಾರ್ಮಿಕರಿಗೆ ಸಿಗುತ್ತಿರುವ ಸೌಕರ್ಯಗಳನ್ನು ಕುರಿತು ವಿವರಿಸಿದರು. ಕೊಟ್ಟಂರಾಜು ಆಂಧ್ರ ಪ್ರದೇಶದಲ್ಲಿ ಸಂಘಟನೆಯ ಸಾಧನೆಗಳನ್ನು ಹಾಗೂ ಕಲ್ಯಾಣ ನಿಧಿ ಅಡಿಯಲ್ಲಿ ದೊರಕುತ್ತಿರುವ ಸೌಲಭ್ಯಗಳ ಕುರಿತು ಮಾತನಾಡಿದರು.

ಸಂಘದ ಸದಸ್ಯರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸಲು, ಸಂಘದ ಸದಸ್ಯತ್ವವನ್ನು ಮುಂದಿನ ಮೂರು ವರ್ಷಗಳಲ್ಲಿ 25 ಸಾವಿರ ದಿಂದ 1 ಲಕ್ಷಕ್ಕೆ ಹೆಚ್ಚಿಸಲು, ಸಂಘದ ಕೆಲಸಕ್ಕಾಗಿ ಹೆಚ್ಚು ಪೂರ್ಣಾವಧಿ ಕಾರ್ಯಕರ್ತರನ್ನು ನೇಮಿಸಿಕೊಳ್ಳಲು ಸಮ್ಮೇಳನ ತೀರ್ಮಾನಿಸಿತು. 52 ಮಂದಿ ಸದಸ್ಯರುಳ್ಳ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಎನ್. ವೀರಸ್ವಾಮಿ (ಬೆಂಗಳೂರು), ಪ್ರಧಾನ ಕಾರ್ಯದರ್ಶಿಯಾಗಿ ಬಿ. ಉಮೇಶ್ (ತುಮಕೂರು), ಉಪಾಧ್ಯಕ್ಷರುಗಳಾಗಿ ಬಾಲಕೃಷ್ಣ ಶೆಟ್ಟಿ (ಉಡುಪಿ), ಬಿ.ಎಂ.ಭಟ್ (ಬೆಳ್ತಂಗಡಿ), ತಿಲಕಗೌಡ (ಉ.ಕನ್ನಡ), ಯಲ್ಲಪ್ಪ (ಕೋಲಾರ), ಶೀಧರ (ತುಮಕೂರು), ಜಂಟಿ ಕಾರ್ಯದರ್ಶಿಗಳಾಗಿ ವಸಂತ ಆಚಾರಿ (ದ.ಕನ್ನಡ), ರಾಮಕೃಷ್ಣ (ಬೆಂಗಳೂರು), ಮಹಾತೇಶ್ (ಬೆಂಗಳೂರು), ರಮೇಶ್ (ಮಂಡ್ಯ), ಹರೀಶ ನಾಯ್ಕ (ಉ.ಕನ್ನಡ) ಮತ್ತು ಖಜಾಂಚಿಯಾಗಿ ಲಕ್ಷ್ಮಣ ಕುಮಾರ್ (ಬೆಂಗಳೂರು) ಆಯ್ಕೆಯಾದರು.

ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರೂ ಸಾಹಿತಿ– ಚಿಂತಕರೂ ಆಗಿರುವ ಎಚ್.ಎಲ್.ಕೇಶವ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪ ಸಮಾರಂಭದೊಂದಿಗೆ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯವಾಯಿತು. ಇದೇ ಸಂದರ್ಭದಲ್ಲಿ ಹಿಂದಿನ ಅಧ್ಯಕ್ಷ ರಾಗಿದ್ದ ಬಿ.ಮಾಧವ ಅವರ ಸೇವೆಯನ್ನು ಸ್ಮರಿಸಿ, ಅಭಿನಂದಿಸಿ ಹಾರ್ದಿಕವಾಗಿ ಬೀಳ್ಕೊಡಲಾಯಿತು.

ಯೋಜನೆಗಳ ಸಮರ್ಪಕ ಜಾರಿಗಾಗಿ, ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಹೋರಾಟ. ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಹೋರಾಟ. ಬಿಸಿಯೂಟ, ಅಂಗನವಾಡಿ, ಪಂಚಾಯ್ತಿ ನೌಕರರ ಹೋರಾಟಗಳಿಗೆ ಬೆಂಬಲ...ಹೀಗೆ ಬಿಡುವಿಲ್ಲದೆ ನ್ಯಾಯಕ್ಕಾಗಿ ಕೆಂಬಾವುಟ ಎತ್ತುತ್ತಾ ಬರಲಾಗಿದೆ. ಜನರ ಜೊತೆಗೆ, ಜನರ ಪರವಾಗಿ ನಿಂತ ಇಂತಹ ಹೋರಾಟವೇ ಕ್ಷೇತ್ರದ ಚುನಾವಣೆಯಲ್ಲಿಯೂ ಗೆಲುವನ್ನು ತಂದು ಕೊಡುತ್ತದೆ ಎಂಬ ದೃಢ ವಿಶ್ವಾಸ ಪಕ್ಷದ್ದು.

ಸಿಪಿಐ(ಎಂ) ಪಕ್ಷದ ಶಾಸಕರು ಎಂದ–ರೆ ತಮ್ಮ ಕ್ಷೇತ್ರದ ಜನತೆಗೆ ನ್ಯಾಯ ಒದಗಿಸಲು ಶ್ರಮಿಸುತ್ತಾರೆ. ಮಾತ್ರವಲ್ಲ ರಾಜ್ಯದ ಮತ್ತು ದೇಶದ ಆಗು ಹೋಗುಗಳ ಅರಿವನ್ನು ಇಟ್ಟುಕೊಂಡು ಒಟ್ಟಾ–ರೆ ಜನಪರವಾದ ದೃಷ್ಟಿಕೋನದಿಂದ ಕೆಲಸ ಮಾಡುತ್ತಾರೆ ಎಂಬುದು ಈಗಾಗಲೇ ನಮ್ಮ ನಾಡಿನ ಜನ ಗಮನಿಸಿರುವ ವಿಚಾರ. ಗಣಿಲೂಟಿಕೋರತನದ ಪ್ರಶ್ನೆಯೇ ಇರಲಿ, ಪುಂಡಗಳತನ–ಹಗರಣಗಳ ಪ್ರಶ್ನೆಯೇ ಇರಲಿ, ಅದು ದಲಿತರ ಮೇಲಿನ ದೌರ್ಜನ್ಯ ಜಾತಿ ದಮನದ ಪ್ರಶ್ನೆಯೇ ಇರಲಿ, ಕೋಮುವಾದ–ಅಲ್ಪ ಸಂಖ್ಯಾತರ ಮೇಲಿನ ದಾಳಿಯ ಪ್ರಶ್ನೆಯೇ ಇರಲಿ. ಜಾಗತೀಕರಣ ನೀತಿಗಳ ಮೂರ್ತ ರೂಪವಾಗಿ ಎದ್ದು ಬರುತ್ತಿರುವ ಪ್ರಶ್ನೆಗಳಿರಲಿ ಸಿಪಿಐ(ಎಂ) ಶಾಸಕರು ವಿಧಾನ ಸಭೆಯಲ್ಲಿ ಯಾವ ರೀತಿ ಸಮರ್ಥವಾಗಿ ಮಧ್ಯ ಪ್ರವೇಶಿಸಿದರು, ಯಾವ ರೀತಿ ಪರಿಣಾಮಕಾರಿಯಾಗಿ ಕೆಲಸ ಮಾಡಿದರು ಎಂಬುದು ಈಗಾಗಲೆ ರಾಜ್ಯದ ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ವಿಚಾರ.

ಡಾ. ಪರಮಶಿವಯ್ಯ ವರದಿಯು ಪ್ರತಿಪಾದಿಸಿರುವ ನೇತ್ರಾವತಿ ಮಳೆನೀರು ತಿರುವು ಯೋಜನೆಯ ವಿಷಯವನ್ನು ಸಾರ್ವಜನಿಕ ಚರ್ಚೆಯ ಮುಂಚೂಣಿಗೆ ತಂದು ನಿಲ್ಲಿಸಿರುವುದರಲ್ಲಿ ಸಿಪಿಐ(ಎಂ) ಪಕ್ಷದ ಪರಿಶ್ರಮ ಮತ್ತು ಸಿಪಿಐ(ಎಂ) ಮುಖಂಡರಾಗಿ ಜಿ.ವಿ.ಶ್ರೀರಾಮರೆಡ್ಡಿಯವರ ಪರಿಶ್ರಮ ಏನು ಎನ್ನುವುದು ಸಹ ರಾಜ್ಯದ ಜನರ ಗಮನಕ್ಕೆ ಬಂದಿರುವ ವಿಷಯವೇ. ಡಾ. ಪರಮಶಿವಯ್ಯ ವರದಿಯಿಂದ ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಮಾತ್ರವಲ್ಲ ರಾಜ್ಯದಲ್ಲಿ ಪದೇ ಪದೇ ಭೀಕರ ಬರದ ದಾಳಿಗೆ ಸಿಲುಕುತ್ತಿರುವ ಮಧ್ಯ ಕರ್ನಾಟಕದ ಹತ್ತಾರು ಜಿಲ್ಲೆಗಳಿಗೆ ಕೂಡ ಪ್ರಯೋಜನವಿದೆ. ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ತೋರುತ್ತಿರುವ ಒಂದು ಯೋಜನೆ ಇದು. ಕರಾವಳಿ ಜನರ ಕುಡಿಯುವ ನೀರಿಗೂ ಉಪಯೋಗಕಾರಿಯಾಗಿ ಒದಗುವ ಯೋಜನೆ. ಇಂತಹ ಮಹತ್ವದ ಯೋಜನೆಗಳ ಸಾಕಾರದ ದೃಷ್ಟಿಯಿಂದ –ಬಾಗೇಪಲ್ಲಿ ಕ್ಷೇತ್ರದ ಜನಪರ ಅಭಿವೃದ್ಧಿಗಾಗಿ, ರಾಜ್ಯದ ವಿಧಾನ ಸಭೆಯಲ್ಲಿ ಜನಪರವಾದ, ದುಡಿಯುವ ಜನರ ದನಿಯನ್ನು ಮೊಳಗಿಸುವ ಸಲುವಾಗಿ, ರಾಜ್ಯದ ಶಾಸನ ಸಭೆಯ ಚರ್ಚೆ ಕಾರ್ಯ ನಿರ್ವಹಣೆಯ ಗುಣಮಟ್ಟವನ್ನು ಉತ್ತಮ ಪಡಿಸುವುದಕ್ಕಾಗಿ ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಜಿ.ವಿ.ಶ್ರೀರಾಮರೆಡ್ಡಿಯವರು ಗೆಲ್ಲುವುದು ಅಗತ್ಯವಿದೆ. ಬಾಗೇಪಲ್ಲಿ ಕ್ಷೇತ್ರದ ಜನ ಅಂತಹ ಒಂದು ಉತ್ತಮ ತೀರ್ಮಾನ ಮಾಡುತ್ತಾರೆಂಬ ವಿಶ್ವಾಸ ಸಿಪಿಐ(ಎಂ) ಪಕ್ಷದ್ದು.

ಎಡ ಪರ್ಯಾಯ....

ಪುಟ 8 ರಿಂದ

ಈ ರಾಜ್ಯಗಳಲ್ಲಿ ಚುನಾವಣೆಗಳು ಬಂದಾಗ ಮತದಾರರಿಗೆ ಎಡ ಪಕ್ಷಗಳು ಹಣ, ಹೆಂಡ, ಸೀರೆ ಇತ್ಯಾದಿಗಳನ್ನು ಹಂಚಬೇಕಾಗಿಲ್ಲ. ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಹಣ ಬಲ, ಜಾತಿ ಬಲ, ತೋಳ್ಬಲ ಇದ್ದವರನ್ನು ಹುಡುಕಬೇಕಾಗಿಲ್ಲ. ಟಿಕೆಟ್‌ಗಾಗಿ ಪಕ್ಷದೊಳಗೆ ಕಚ್ಚಾಟ, ಕಿತ್ತಾಟ ಇರುವುದಿಲ್ಲ. ಇಲ್ಲಿ ಸಾಮಾನ್ಯ ಜನ ಚುನಾವಣೆಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗುತ್ತಾರೆ. ಚುನಾವಣೆಯಲ್ಲಿ ಗೆದ್ದು ಶಾಸಕರೋ, ಸಚಿವರೋ ಆದ ಬಳಿಕವೂ ಅವರು ಸಾಮಾನ್ಯರ ನಡುವೆ ಸಾಮಾನ್ಯರಾಗಿ ಇರುತ್ತಾರೆ. ಎಡರಂಗದ ಮಂತ್ರಿಗಳ ವಿರುದ್ಧ ಅಥವ ಶಾಸಕರ ವಿರುದ್ಧ ಯಾರಿಂದಲೂ, ಅವರ ವಿರೋಧಿಗಳಿಂದಲೂ ಭ್ರಷ್ಟಾಚಾರದ ಸಣ್ಣ ಆರೋಪವೂ ಕೇಳಿ ಬರುವುದಿಲ್ಲ.

ಪ್ರಗತಿಪರವಾದ ಭೂಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಶ್ರೀಮಂತ ಜಮಿನ್ದಾರರ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿ ಭೂಹೀನ ದಲಿತರಿಗೆ ಮತ್ತು ಇತರ ಬಡವರಿಗೆ ವಿತರಣೆ ಮಾಡಲಾಗಿದೆ. ಇದರಿಂದಾಗಿ ಕೃಷಿಯಲ್ಲಿ ಗಮನಾರ್ಹ ಪ್ರಗತಿಯಾಗಿದೆ ಮತ್ತು ಕೈಗಾರೀಕರಣ-ಕ್ಕೆ ಅನುಕೂಲ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಇಲ್ಲಿ ಎಡರಂಗ ಸರ್ಕಾರಗಳು ಅಧಿಕಾರದಲ್ಲಿ ಇದ್ದಷ್ಟು ಕಾಲ ರೈತರ ಆತ್ಮಹತ್ಯೆಗಳು ನಡೆಯಲಿಲ್ಲ. ಕೂಲಿಕಾರರ ಹಸಿವಿನ ಸಾವುಗಳು ಸಂಭವಿಸಲಿಲ್ಲ. ಈ ಮೂರು ರಾಜ್ಯಗಳಲ್ಲಿ ಎಡರಂಗ ಸರ್ಕಾರಗಳು 3 ಹಂತಗಳ ಪಂಚಾಯತ್ ಪದ್ಧತಿಯ ಮೂಲಕ ಅಧಿಕಾರ ವಿಕೇಂದ್ರೀಕರಣವನ್ನು ಯಶಸ್ವಿಯಾಗಿ ಜಾರಿಗೊಳಿಸಿವೆ. ಎಡರಂಗ ಸರ್ಕಾರಗಳು ಜನಪರ ಹೋರಾಟಗಳನ್ನು ದಮನ ಮಾಡುವ ಪೋಲಿಸ್ ನೀತಿಯನ್ನು ಅನುಸರಿಸುತ್ತಿರಲಿಲ್ಲ. ಕೋಮು ದಂಗೆಗಳನ್ನು ತಡೆಗಟ್ಟಲು ದೃಢವಾದ ಕ್ರಮಗಳನ್ನು ಅನುಸರಿಸಲಾಗುತ್ತಿತ್ತು. ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನು ಬಲಪಡಿಸಲು ವಿಶೇಷ ಗಮನ ನೀಡಲಾಗುತ್ತಿತ್ತು. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಇಲ್ಲಿ ಎಡರಂಗ ಸರ್ಕಾರಗಳ ಅಧಿಕಾರಾವಧಿಯಲ್ಲಿ ಮಹಿಳೆಯರ ಮೇಲೆ, ದಲಿತರ ಮೇಲೆ ದೌರ್ಜನ್ಯಗಳು ನಡೆದಿದ್ದು ತೀರಾ ವಿರಳ.

ಕರ್ನಾಟಕದಲ್ಲಿ ಎಡಪರ್ಯಾಯ ರೂಪಿಸುವಲ್ಲಿ ಸಿಪಿಐ(ಎಂ) ಪಾತ್ರ:

ಕರ್ನಾಟಕದಲ್ಲಿ ಎಡ ರಾಜಕೀಯ ಪರ್ಯಾಯವನ್ನು ಜನರ ಮುಂದಿಡಲು ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಎಡ ಪಕ್ಷಗಳೊಂದಿಗೆ ಇರಬೇಕಾದ ರಾಜ್ಯದ ದುಡಿಯುವ ಜನರ ಬಹುದೊಡ್ಡ ಭಾಗ ಬೇರೆ ಬೇರೆ ಬಂಡವಾಳಶಾಹಿ-ಜಮೀನ್ದಾರಿ ಪಕ್ಷಗಳನ್ನು ಹಿಂಬಾಲಿಸುತ್ತಿರುವುದು ಖೇದದ ಸಂಗತಿ. ಅದು ಅವರ ತಪ್ಪಲ್ಲ, ಅವರ ಪ್ರಜ್ಞೆಯನ್ನು ಎತ್ತರಿಸುವ ಅವರ ತಿಳುವಳಿಕೆಯನ್ನು ಸುಸಂಬದ್ಧಗೊಳಿಸುವ ಕೆಲಸವನ್ನು ಎಡಪಕ್ಷಗಳು ಇನ್ನೂ ಹೆಚ್ಚು-ಮುತುವರ್ಜಿಯಿಂದ ಮಾಡಬೇಕಾಗಿದೆ.

ರಾಜ್ಯದ ದುಡಿಯುವ ಜನರ ವರ್ಗ ಪ್ರಜ್ಞೆಯನ್ನು ಹೆಚ್ಚಿಸಲು ಸಿಪಿಐ(ಎಂ) ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿದೆ.

1. ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಸಂಘಪರಿವಾರದ ಶಕ್ತಿಗಳು ದಾಳಿಗಳನ್ನು ಮಾಡುವ ಮೂಲಕ ದುಡಿಯುವ ಜನರ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುವುದನ್ನು ಸಿಪಿಐ(ಎಂ) ದೃಢವಾಗಿ ವಿರೋಧಿಸಿದೆ. 2008ರಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಹಾಗೂ ಇತರ ಕೆಲವು ಕಡೆಗಳಲ್ಲಿ ಕ್ರೈಸ್ತರ ಚರ್ಚುಗಳ ಮೇಲೆ ಹಿಂದುತ್ವ ಸಂಘಟನೆಗಳು ದಾಳಿ ಮಾಡಿದಾಗ ಪಕ್ಷ ಮಧ್ಯಪ್ರವೇಶ ಮಾಡ್ತಿದೆ. ಕರ್ನಾಟಕ ರಾಜ್ಯೋತ್ಸವವನ್ನು "ಸೌಹಾರ್ದ ಕರ್ನಾಟಕ ರಾಜ್ಯೋತ್ಸವ"ವಾಗಿ ಆಚರಿಸಲಾಗಿದೆ. ರಾಜ್ಯದ ನಾಲ್ಕು ಕಡೆಗಳಿಂದ 4 ವಾಹನ ಜಾಥಗಳನ್ನು ಹೊರಡಿಸಿ, ದಾರಿಯುದ್ದಕ್ಕೂ ನೂರಾರು ಸಭೆಗಳನ್ನು ನಡೆಸಿ ಕೋಮು ಸೌಹಾರ್ದತೆಯ ಸಂದೇಶವನ್ನು ಪಸರಿಸಲಾಗಿದೆ. ಭಯೋತ್ಪಾದನೆಯನ್ನು ಖಂಡಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೂ ಮತ್ತು ಮುಸ್ಲಿಂ ಯುವಕ ಯುವತಿಯರು ಪರಸ್ಪರ ಮಾತನಾಡುವುದನ್ನು ವಿರೋಧಿಸುವ, ಪಬ್ ಒಂದರಲ್ಲಿ ಮಹಿಳೆಯರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಿರುವ 'ನೈತಿಕ ಪೋಲಿಸ್‌ಗಿರಿ'ಯನ್ನು ಪ್ರತಿಭಟಿಸಲಾಗಿದೆ. ಇತ್ತೀಚೆಗೆ ಹೋಂಸ್ಟೇ ಒಂದರ ಮೇಲೆ ದಾಳಿ ಮಾಡಿ ಅಲ್ಲಿ ಹುಟ್ಟುಹಬ್ಬ ಆಚರಿಸುತ್ತಿದ್ದ ಯುವಕ ಯುವತಿಯರನ್ನು ಥಳಿಸಿದ ಪ್ರಕರಣದ ವಿರುದ್ಧ ಪ್ರತಿಭಟನೆಯನ್ನು ಸಂಘಟಿಸಲಾಗಿದೆ.

ಹಿಂದುತ್ವ ಶಕ್ತಿಗಳ ಪುಂಡಾಟವನ್ನು ವಿರೋಧಿಸುತ್ತಿರುವಾಗಲೇ ಮುಸ್ಲಿಂ ಅಲ್ಪಸಂಖ್ಯಾತರ ನಡುವೆ ಬೆಳೆಯುತ್ತಿರುವ ಕೆ.ಎಫ್.ಡಿ, ಎಸ್.ಡಿ.ಪಿ.ಐ, ಮುಂತಾದ ಸಂಘಟನೆಗಳ ಅಪಾಯಕಾರಿ ಉದ್ದೇಶವನ್ನು ಬಯಲಿಗೆಳೆಯಲಾಗಿದೆ. ಗೋಹತ್ಯೆ ನಿಷೇದ ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿಗಳನ್ನು ತರುವ ಬಿಜೆಪಿ ಪ್ರಯತ್ನವನ್ನು ವಿರೋಧಿಸಲಾಗಿದೆ. ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಕೇಂದ್ರಿಯ ವಿಶ್ವವಿದ್ಯಾಲಯಕ್ಕೆ ಟಿಪ್ಪುಸುಲ್ತಾನರ ಹೆಸರು ಇಡುವುದನ್ನು ವಿರೋಧಿಸುವುದನ್ನು ಖಂಡಿಸಲಾಗಿದೆ.

2. ಅಸಂಘಟಿತ ವಲಯದ ಕಾರ್ಮಿಕರಿಗೆ 10,000 ರೂ. ಮಾಸಿಕ ಕನಿಷ್ಠ ವೇತನ ನಿಗದಿಪಡಿಸಬೇಕು ಮತ್ತು ಇತರ ಬೇಡಿಕೆಗಳಿಗಾಗಿ 2009ರಲ್ಲಿ ರಾಜ್ಯ ಸಿಐಟಿಯು ನಡೆಸಿದ ಸಮರಶೀಲ ಹೋರಾಟಕ್ಕೆ ಸಿಪಿಐ(ಎಂ) ಸಂಪೂರ್ಣ ಬೆಂಬಲ ನೀಡಿತ್ತು. ವಿವಿಧ ಹಂತಗಳಲ್ಲಿ ನಡೆಸಲಾದ ಈ ಚಳುವಳಿಯ ಅಂತಿಮ ಹಂತದ ಹೋರಾಟದ ಅಂಗವಾಗಿ ಜಿಲ್ಲಾಧಿಕಾರಿಗಳ ಕಛೇರಿಗಳಿಗೆ ಮುತ್ತಿಗೆ ಹಾಕಲಾಯಿತು. ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಒಂದನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಈ ಹೋರಾಟ ನಡೆಯಿತು. ಒಟ್ಟು ಸುಮಾರು 75ಸಾವಿರ ಕಾರ್ಮಿಕರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ಮಹಿಳಾ ಕಾರ್ಮಿಕರ ಭಾಗವಹಿಸುವಿಕೆ ಪ್ರಧಾನವಾಗಿತ್ತು. ಗುಲ್ಬರ್ಗಾ, ರಾಯಚೂರು ಮತ್ತು ಹಾಸನ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾಕಾರರು ಪೋಲಿಸರ ತೀವ್ರ ದೌರ್ಜನ್ಯವನ್ನು ಎದುರಿಸಿದರು.

3. ಬೆಲೆಏರಿಕೆ ವಿರುದ್ಧ ಹಾಗೂ ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಲು ಆಗ್ರಹಿಸಿ ಪಕ್ಷ ರಾಜ್ಯದಲ್ಲಿ ನಿರಂತರ ಹೋರಾಟಗಳನ್ನು ನಡೆಸಿದೆ. ಎಡಪಕ್ಷಗಳು ಜಂಟಿಯಾಗಿ ರಾಜ್ಯಮಟ್ಟದ ಸಮಾವೇಶವನ್ನು ನಡೆಸಿದ ಬಳಿಕ 2009 ನವೆಂಬರ್ 25ರಂದು ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ರ್‍ಯಾಲಿಯಲ್ಲಿ 40 ಸಾವಿರ ಜನ ಪಾಲ್ಗೊಂಡಿದ್ದರು.

ಚಳುವಳಿಯನ್ನು ಸ್ವತಂತ್ರವಾಗಿ ಮುನ್ನಡೆಸುವ ಅಂಗವಾಗಿ 2010ರ ಜನವರಿಯಲ್ಲಿ ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಯಿತು. ಎಪ್ರಿಲ್ 8ರಂದು ಎಡಪಕ್ಷಗಳು ಜಂಟಿಯಾಗಿ ನಡೆಸಿದ ಪಿಕೆ-ಟಿಂಗ್ ಚಳುವಳಿಯಲ್ಲಿ ರಾಜ್ಯದ ವಿವಿಧೆಡೆ 10ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿ ಬಂಧನಕ್ಕೆ ಒಳಗಾದರು.

ಪೆಟ್ರೋಲ್, ಡಿಸೇಲ್ ಮತ್ತು ರಸಗೊಬ್ಬರಗಳ ಬೆಲೆಗಳನ್ನು ಏರಿಸಿ ಜನರ ಮೇಲೆ ಹೊರೆಹೇರಿದ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ 2010 ಎಪ್ರಿಲ್ 27ರಂದು ಅಖಿಲ ಭಾರತ ಬಂದ್ ಆಚರಿಸಲಾಯಿತು. ರಾಜ್ಯದ ಬಹುತೇಕ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಬಂದ್ ಯಶಸ್ವಿಯಾಗಿತ್ತು. ಮತ್ತೆ ಎರಡನೇ ಬಾರಿ ಕೇಂದ್ರ ಕಾಂಗ್ರೆಸ್ ಸರ್ಕಾರ ಪೆಟ್ರೋಲ್, ಡಿಸೇಲ್, ಅಡುಗೆ ಅನಿಲ ಮತ್ತು ಸೀಮೆಎಣ್ಣೆ ಬೆಲೆಗಳನ್ನು ಏರಿಸಿದಾಗ ಜುಲೈ 5ರಂದು ದೇಶವ್ಯಾಪಿ ಹರತಾಳ ಆಚರಿಸಲು ಎಡಪಕ್ಷಗಳು ನೀಡಿದ ಕರೆಯನ್ನು ರಾಜ್ಯದಲ್ಲಿ ಯಶಸ್ವಿಗೊಳಿಸಲು ಶ್ರಮಿಸಲಾಯಿತು.

4. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಆಗ್ರಹಿಸಿ ಪಕ್ಷದ ಸಮಿತಿಗಳು ಸ್ಥಳೀಯ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ನಿರಂತರ ಹೋರಾಟಗಳನ್ನು ಮಾಡುತ್ತಾ ಬಂದಿವೆ. ರಾಜ್ಯಮಟ್ಟದ ಕಾರ್ಯಾಗಾರಗಳನ್ನು ನಡೆಸಿ ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ. 2011ರಲ್ಲಿ ರಾಜ್ಯ ಮಟ್ಟದ ಒಂದು ರ್‍ಯಾಲಿಯನ್ನು ನಡೆಸಲಾಗಿದೆ. ರೈತ ಸಂಘ, ಕೃಷಿ ಕೂಲಿಕಾರರ ಸಂಘ. ಮಹಿಳಾ ಸಂಘಗಳು ಯೋಜನೆಯ ಜಾರಿಗಾಗಿ ನಡೆಸುತ್ತಾ ಬಂದಿರುವ ಚಟುವಟಿಕೆಗಳಿಗೆ ಪಕ್ಷ ಎಲ್ಲಾ ರೀತಿಯ ಬೆಂಬಲ ನೀಡುತ್ತಾ ಬಂದಿದೆ.

5. ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ರೈತ ಹಾಗೂ ಕೃಷಿ ಕೂಲಿಕಾರರ ಸಂಘಟನೆಗಳು ರೂಪಿಸಿದ ವಿವಿಧ ಹಂತಗಳ ಹೋರಾಟವನ್ನು ಸಿಪಿಐ(ಎಂ) ಯಶಸ್ವಿಗೊಳಿಸಲು ಶ್ರಮಿಸಿದೆ. 2010 ರಿಂದ 2012ರವರೆಗಿನ ಅವಧಿಯಲ್ಲಿ ವಿವಿಧ ಹಂತಗಳಲ್ಲಿ ನಡೆಸಲಾದ ಈ ಚಳುವಳಿಯಲ್ಲಿ ಮನೆ ನಿವೇಶನಗಳಿಗಾಗಿ, ಹಕ್ಕು ಪತ್ರಗಳಿಗಾಗಿ, ಬಗರ್‌ಹುಕುಂ ಸಾಗುವಳಿ ಸಕ್ರಮಕ್ಕಾಗಿ ಸುಮಾರು 2ಲಕ್ಷ ಅರ್ಜಿಗಳನ್ನು ಹಾಕಿಸಲಾಯಿತು. 2012ರ ಮೇ 21ರಂದು ಬೆಂಗಳೂರಿನಲ್ಲಿ 'ಮಹಾಧರಣಿ'ಯನ್ನು ನಡೆಸಲಾಗಿದೆ. 15 ಸಾವಿರಕ್ಕೂ ಹೆಚ್ಚು ಅರ್ಜಿದಾರರು ಧರಣಿಯಲ್ಲಿ ಭಾಗವಹಿಸಿದ್ದಾರೆ. ನಂತರ ಒಮ್ಮೆ ಮುಖ್ಯಮಂತ್ರಿ ಸದಾನಂದಗೌಡ ಮತ್ತೊಮ್ಮೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಕರೆದ ಜಂಟಿ ಸಭೆಗಳಲ್ಲಿ ಕೆಲವು ಪರಿಹಾರಗಳನ ಪಡೆಯಲು ಸಾಧ್ಯವಾಗಿದೆ.

6. ರಾಜ್ಯದಲ್ಲಿ ಜಾತಿ ಅಸ್ಪೃಶ್ಯತೆಂ ವಿರುದ್ಧ ಮತ್ತು ದಲಿತರ ಹಕ್ಕುಗಳಿಗಾ ಪಕ್ಷದ ಮಧ್ಯಪ್ರವೇಶ ಹೆಚ್ಚಾಗಿದೆ. 2008ರಿಂ ಪ್ರತಿ ವರ್ಷ ರಾಜ್ಯ ಮಟ್ಟದ ರ್‍ಯಾಲಿ ಹಾಗ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುತ್ತಿ ದಲಿತರ ಮೇಲೆ ದೌರ್ಜನ್ಯಗಳು ನಡೆದಾ ಕೂಡಲೇ ಮಧ್ಯಪ್ರವೇಶ ಮಾಡುವುದನ ರೂಢಿಸಿಕೊಳ್ಳಲಾಗಿದೆ. ಪರಿಶಿಷ್ಟ ಜಾತಿಗ 'ವಿಶೇಷ ಘಟಕ ಯೋಜನೆ'ಗೆ ಮತ್ತು ಪರಿಶಿ ಪಂಗಡಗಳ "ಉಪಯೋಜನೆ"ಗೆ ಅವ ಜನಸಂಖ್ಯೆಗೆ ಅನುಗುಣವಾಗಿ ಅನುದಾ ನೀಡುವಂತೆ ಮತ್ತು ಆ ಅನುದಾನವನ ಬೇರೆ ಉದ್ದೇಶಗಳಿಗೆ ಬಳಕೆ ಮಾಡುವುದನ್ ತಡೆಯಲು ಒತ್ತಾಯಿಸುತ್ತಾ ಬರಲಾಗಿದ ಅದೇ ಸಮಯದಲ್ಲಿ ಖಾಸಗಿ ರಂಗದಲ್ಲಿಯೂ ದಲಿತರಿಗೆ ಮೀಸಲಾತಿ ನೀಡಬೇಕೆಂದ ಒತ್ತಾಯಿಸಲಾಗುತ್ತಿದೆ.

7. ಆದಿವಾಸಿ ಗಿರಿಜನರ ನಡುವೆ ಪ ತನ್ನ ಚಟುವಟಿಕೆಗಳನ್ನು ಆರಂಭಿಸಿದೆ. ರಾಜ ಮಟ್ಟದ ಸಮಾವೇಶವೊಂದನ್ನು 2010ರ ಮೈಸೂರಿನಲ್ಲಿ ನಡೆಸಲಾಗಿದೆ. ಒಂದು ರಾಜ ಮಟ್ಟದ ಸಮಿತಿಯನ್ನು ರಚಿಸಲಾಗಿದೆ ಬೆಳ್ತಂಗಡಿಯ ಗಿರಿಜನರ ಸಮುದಾಯಕ್ ಸೇರಿದ ವಿಠಲ ಮಲೆಕುಡಿಯ ಎಂಬ ಯುವಕನಿಗೆ ಮಾವೋವಾದಿ ನಕ್ಸಲಿಯರ ಜೊತೆ ಸಂಪರ್ಕವಿದೆ ಎಂದು ಸುಳ್ ಆರೋಪ ಹೊರಿಸಿ ಆತನನ್ನು ಬಂಧಿಸಿ ಜೈಲಿಗೆ ಹಾಕಿದ ಸಂದರ್ಭದಲ್ಲಿ ಆತನನ್ನು ಬಿಡುಗಡೆ ಮಾಡಿಸಲು ಪಕ್ಷ ಅಗತ್ ಕ್ರಮಗಳನ್ನು ಕೈಗೊಂಡಿತ್ತು.

8. ರಾಜ್ಯ ಮಟ್ಟದ 'ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಸಮಿತಿ"ಯನ್ನು ರಚಿಸಿ ಸಾಚಾರ್ ಸಮಿತಿಯ ಶಿಫಾರಸ್ಸುಗಳನ್ನು ಹಾಗೂ ರಂಗನಾಥ್ ಮಿಶ್ರಾ ಆಯೋಗದ ಶಿಫಾರಸ್ಸುಗಳನ್ನು ಪ್ರಚಾರಮಾಡುವ, ಅವುಗಳ ಜಾರಿಗಾಗಿ ಒತ್ತಾಯಿಸುವ ಚಟುವಟಿಕೆಗಳನ್ನು ಆರಂಭಿಸಲಾಗಿದೆ.

9. 2009ರಲ್ಲಿ ಉತ್ತರ ಕರ್ನಾಟಕದಲ್ಲಿ ತಲೆದೋರಿದ ಭೀಕರ ನೆರೆಹಾವಳಿ ತುತ್ತಾಗಿ ಲಕ್ಷಾಂತರ ಜನ ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾದಾಗ ಪಕ್ಷದ ಜಿಲ್ಲಾ ಸಮಿತಿಗಳು ಆಯಾ ಪ್ರದೇಶಗಳಿಗೆ ಬೇಟಿ ನೀಡಿ, ಸರ್ಕಾರ ಸಂತ್ರಸ್ತರ ನೆರವಿಗೆ ಧಾವಿಸುವಂತೆ ಒತ್ತಾಯಿಸಿವೆ. ಹಣ ಮತ್ತು ವಸ್ತು ರೂಪದಲ್ಲಿ ನೆರವು ಸಂಗ್ರಹಿಸಿ ವಿತರಿಸಲಾಗಿದೆ. ಬೆಂಗಳೂರಿನಲ್ಲಿ ಪಕ್ಷದ ವತಿಯಿಂದ ಸಂತ್ರಸ್ಥರ ರ್‍ಯಾಲಿಯೊಂದನ್ನು ಏರ್ಪಡಿಸಲಾಗಿದೆ.

10. ಬಳ್ಳಾರಿ ಗಣಿ ಮಾಫಿಯಾ ವಿರುದ್ಧ ಮೊಟ್ಟ ಮೊದಲು ಧ್ವನಿ ಎತ್ತಿದ ಕೀರ್ತಿ ಸಿಪಿಐ(ಎಂ)ಗೆ ಸಲ್ಲುತ್ತದೆ. ಅಕ್ರಮ ಗಣಿಗಾರಿ-ಕೆ ನಡೆಯುತ್ತಿದ್ದ ಪ್ರದೇಶಗಳಿಗೆ ಬೇಟಿಕೊಟ್ಟು ಅದರ ವಿವರಗಳನ್ನು ರಾಜ್ಯದ ಗಮನಕ್ಕೆ ತರಲಾಯಿತು. 2010ರ ಆಗಸ್ಟ್ ತಿಂಗಳಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಜಂಟಿಯಾಗಿ ಬಳ್ಳಾರಿಯಲ್ಲಿ ಒಂದು ರ್‍ಯಾಲಿ ಮತ್ತು ಬಹಿರಂಗ ಸಭೆ ನಡೆಸಿ ಗಣಿಗಳ್ಳರನ್ನು ಬಂಧಿಸುವ ಮತ್ತು ಅವರ ಆಸ್ತಿಯನ್ನು ಮುಟ್ಟುಗೋಲು

ಜನಶಕ್ತಿ
ಕನ್ನಡ ವಾರಪತ್ರಿಕೆ

ಹಾಕುವಂತೆ ಒತ್ತಾಯಿಸಲಾಗಿದೆ. ಸಿಪಿಐ(ಎಂ) ಸಂಸದೀಯ ನಿಯೋಗವೊಂದು ಬಳ್ಳಾರಿಗೆ ಆಗಮಿಸಿ ಪರಿಶೀಲಿಸಿದೆ. ಬಿಜೆಪಿ ರಾಷ್ಟ್ರೀಯ ಮುಖಂಡ ಎಲ್.ಕೆ. ಆಡ್ವಾಣಿ ಭ್ರಷ್ಟಾಚಾರದ ವಿರುದ್ಧ ರಥಯಾತ್ರೆ ಆರಂಭಿಸಿದ ಹಿನ್ನೆಲೆಯಲ್ಲಿ ಅದರ ಹಿಂದಿನ ಬೂಟಾಟಿಕೆಯನ್ನು ಬಯಲಿಗೆಳೆಯಲು ಬಳ್ಳಾರಿಯಲ್ಲಿ ಸಿಪಿಐ(ಎಂ) ಸ್ವತಂತ್ರವಾಗಿ ರಾಜ್ಯಮಟ್ಟದ ರ್‍ಯಾಲಿಯನ್ನು ನಡೆಸಿತು. ಲೋಕಾಯುಕ್ತ ವರದಿಯಲ್ಲಿ ಹೆಸರಿಸಲಾದ ಆರೋಪಿಗಳ ವಿರುದ್ಧ ಕ್ರಮ ಜರುಗಿಸಲು ಒತ್ತಾಯಿಸಲಾಯಿತು.

11. ಮಂಗಳೂರು ಮಹಾನಗರ ಪಾಲಿಕೆ ಕುಡಿಯುವ ನೀರಿನ ದರಗಳನ್ನು ಅಗಾಧ ಪ್ರಮಾಣದಲ್ಲಿ ಏರಿಸಿದುದನ್ನು ವಿರೋಧಿಸಿ ಮಹಾನಗರ ಪಾಲಿಕೆಯ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಯಿತು. ಬಿಜೆಪಿ ಕುಮ್ಮಕ್ಕಿನಿಂದ ಪೋಲಿಸರು ಪ್ರತಿಭಟನಾಕಾರರ ಮೇಲೆ ಕ್ರೂರವಾಗಿ ಲಾಠಿ ಪ್ರಹಾರ ಮಾಡಿ 45 ಕಾರ್ಯಕರ್ತರನ್ನು ಬಂಧಿಸಿ ಜೈಲಿಗೆ ಹಾಕಿದರು. ಆದರೆ ಈ ಹೋರಾಟದಿಂದಾಗಿ ನೀರಿನ ದರವನ್ನು ಕಡಿತ ಮಾಡುವುದು ಮಹಾನಗರ ಪಾಲಿಕೆಗೆ ಅನಿವಾರ್ಯವಾಯಿತು.

12. ಮುಚ್ಚಿದ ಕರ್ನಾಟಕದ ಹೆಮ್ಮೆಯ ಕೋಲಾರ ಚಿನ್ನದ ಗಣಿಯನ್ನು ತೆರೆಯಲು ಒತ್ತಾಯಿಸಿ ಪಕ್ಷವು ನಿರಂತರ ಹೋರಾಟ ಮಾಡುತ್ತಾ ಬಂದಿದೆ. ಆ ಅವಧಿಯಲ್ಲಿಯೂ ಸಮಾವೇಶ, ಸಹಿ ಸಂಗ್ರಹ ಚಳುವಳಿಯನ್ನು ನಡೆಸಲಾಗಿದೆ.

13. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ರಸ್ತೆಯ ಮೂಲ ಒಪ್ಪಂದದಂತೆ ನೈಸ್ ಕಂಪೆನಿಗೆ ನೀಡಬೇಕಾಗಿದ್ದ ಭೂಮಿಗಿಂತ ಹೆಚ್ಚು ಭೂಮಿಯನ್ನು ಈಗಾಗಲೇ ಹಿಂದಿನ ಸರ್ಕಾರಗಳು ನೀಡಿದ್ದು, ಯಡಿಯೂರಪ್ಪ ಸರ್ಕಾರದಿಂದ ಮತ್ತಷ್ಟು ಭೂಮಿಯನ್ನು ಪಡೆಯಲು ನೈಸ್ ಕಂಪೆನಿ ಮಾಲೀಕ ಪ್ರಯತ್ನ ಪಡುತ್ತಿರುವುದನ್ನು ವಿರೋಧಿಸಿ 'ಹೋರಾಟ ಸಮಿತಿ'ಯ ಭಾಗವಾಗಿ ಹೋರಾಟಗಳಲ್ಲಿ ಭಾಗವಹಿಸಲಾಗಿದೆ ಮತ್ತು ಪೋಲಿಸರಿಂದ ಲಾಠಿ ಪ್ರಹಾರ ಹಾಗು ಕೇಸು-ಜೈಲು ಅನುಭವಿಸಲಾಗಿದೆ.

14. ಬೆಂಗಳೂರು ದಕ್ಷಿಣ ಮತ್ತು ಉತ್ತರ ತಾಲ್ಲೂಕಿನ ನಡುವಿನ ಸುಮಾರು 14 ಗ್ರಾಮಗಳಿಗೆ ಸೇರಿದ 5000 ಎಕರೆ ಭೂಮಿಯನ್ನು ಕೆಂಪೇಗೌಡ ಬಡಾವಣೆಗಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಮಾಡಿ ವಿಧಾನಸೌಧ ಚಲೋ ಮೊದಲಾದ ಹೋರಾಟಗಳನ್ನು ನಡೆಸಿ ರೈತರಿಗೆ ಪ್ರತಿ ಎಕರೆಗೆ ರೂ.80 ಲಕ್ಷ ಗರಿಷ್ಠ ಪರಿಹಾರ ಮತ್ತು 40*60ರ ಒಂದು ನಿವೇಶನವನ್ನು ಕೊಡಿಸಲು ಸಾಧ್ಯವಾಗಿದೆ.

15. ಆನೇಕಲ್ ತಾಲ್ಲೂಕಿನ ಯಡವನಹಳ್ಳಿ, ಜಿಗಳಿ ಹಾಗೂ ಆದಿಗೊಂಡನಹಳ್ಳಿಗಳಿಗೆ ಸೇರಿದ 750 ಎಕರೆ ಭೂಮಿಯನ್ನು ಗೃಹ ಮಂಡಳಿಯವರು ಸ್ವಾಧೀನ ಪಡಿಸಿಕೊಳ್ಳಲು ಮುಂದಾದಾಗ ಮಧ್ಯಪ್ರವೇಶಮಾಡಿ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ದೊರಕಿಸಲು ಪ್ರಯತ್ನಿಸಲಾಯಿತು.

16. ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಭೂಮಿ ಕಳೆದುಕೊಂಡಿರುವ ರೈತರಿಗೆ ಗರಿಷ್ಠ ಪರಿಹಾರ ದೊರಕಿಸಲು ರೈತರ ಹೋರಾಟಗಳನ್ನು ನಡೆಸಲಾಗಿದೆ.

17. ದೊಡ್ಡಬಳ್ಳಾಪುರ ಅಪ್ಪೆರಲ್ ಪಾರ್ಕ್ ಕೈಗಾರಿಕಾ ಪ್ರದೇಶದ ವಿಸ್ತರಣೆಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿಬಿ ಮುಂದಾದಾಗ ರೈತರ ಹೋರಾಟ ಸಮಿತಿ ರಚಿಸಿಕೊಂಡು ರೈತರಿಗೆ ಗರಿಷ್ಠ ಪರಿಹಾರ ಸಿಗುವಂತೆ ಮಾಡಲು ಪ್ರಯತ್ನಿಸಲಾಗಿದೆ.

18. ವಿಮಾನ ನಿಲ್ದಾಣಕ್ಕಾಗಿ ಬಳ್ಳಾರಿ ಸಿರಿವಾರ ಮತ್ತು ಚಾಗನೂರು ಗ್ರಾಮಗಳ ಫಲವತ್ತಾದ ನೀರಾವರಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾದಾಗ ಬೆಂಗಳೂರಿಗೆ ರೈತರ ಪಾದಯಾತ್ರೆಯೂ ಸೇರಿದಂತೆ ಹಲವು ರೀತಿಯ ಹೋರಾಟಗಳನ್ನು ನಡೆಸಿ ರೈತರ ಹಿತವನ್ನು ಕಾಪಾಡಲು ಪ್ರಯತ್ನಿಸಲಾಗಿದೆ.

19. ಬಳ್ಳಾರಿ ಜಿಲ್ಲೆಯಲ್ಲಿ ಜನಾರ್ಧನರೆಡ್ಡಿ ಮಾಲೀಕತ್ವದ ಬ್ರಾಹ್ಮಿಣಿ ಸ್ಟೀಲ್ಸ್ ಮತ್ತು ಇತರ ಕಂಪೆನಿಗಳಿಗಾಗಿ 40 ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಹೊರಟ್ಟಿದ್ದನ್ನು ಬಳ್ಳಾರಿಗೆ ಪಾದಯಾತ್ರೆ, ಬೆಂಗಳೂರಿಗೆ 14 ದಿನಗಳ ಪಾದಯಾತ್ರೆ ಮೊದಲಾದ ಹೋರಾಟಗಳ ಮೂಲಕ ಪರಿಣಾಮಕಾರಿಯಾಗಿ ವಿರೋಧಿಸಲು ಸಾಧ್ಯವಾಗಿದೆ.

20. ಕಚ್ಚಾ ರೇಷ್ಮೆಯನ್ನು ಸುಂಕರಹಿತವಾಗಿ ಆಮದು ಮಾಡಿಕೊಳ್ಳುವ ಕೇಂದ್ರ ಸರ್ಕಾರದ ದೋರಣೆಯಿಂದಾಗಿ ರಾಜ್ಯದಲ್ಲಿ ರೇಷ್ಮೆ ಮತ್ತು ರೇಷ್ಮೆಗೂಡಿನ ದರಗಳಲ್ಲಿ ಬಾರೀ ಕುಸಿತ ಉಂಟಾಗಿ ರೈತರು ನಷ್ಟ ಅನುಭವಿಸಿದಾಗ, ಪ್ರಾಂತ ರೈತ ಸಂಘವು 'ಹೋರಾಟ ಸಮಿತಿ' ರಚಿಸಿಕೊಂಡು ನಡೆಸಿದ ವಿವಿಧ ಹಂತಗಳ ಹೋರಾಟವನ್ನು ಪಕ್ಷ ಸಂಪೂರ್ಣವಾಗಿ ಬೆಂಬಲಿಸಿದೆ.

21. ಕೃಷಿ ಕ್ಷೇತ್ರಕ್ಕೆ ಕಾರ್ಪೊರೇಟ್ ಕಂಪೆನಿಗಳನ್ನು ಸ್ವಾಗತಿಸಿ ನಾಡಿನ ರೈತರನ್ನು ಕೃಷಿ ಕ್ಷೇತ್ರದಿಂದ ಹೊರದಬ್ಬುವ ಗುರಿಯಿಟ್ಟುಕೊಂಡು ಸರ್ಕಾರ ನಡೆಸಿದ ವಿಶ್ವ ಕೃಷಿ ಹೂಡಿಕೆದಾರರ ಸಮಾವೇಶವನ್ನು ವಿರೋಧಿಸಿ ರೈತ ಹಾಗೂ ಕೃಷಿ ಕೂಲಿಕಾರರ ಸಂಘಗಳು ಜಂಟಿಯಾಗಿ ನಡೆಸಿದ ಪ್ರತಿಭಟನೆಯನ್ನು ಸಿಪಿಐ(ಎಂ) ಬೆಂಬಲಿಸಿ ಯಶಸ್ವಿಗೊಳಿಸಲು ಶ್ರಮಿಸಿದೆ.

22. ಹೈದ್ರಾಬಾದ್ ಕರ್ನಾಟಕದ ಗುಲ್ಬರ್ಗಾ ಮತ್ತು ಇತರ ಜಿಲ್ಲೆಗಳ ಪ್ರಮುಖ ಬೆಳೆಯಾದ ತೊಗರಿಯ ಬೆಲೆ, ತೊಗರಿ ಬೇಳೆ ಆಮದು ಮಾಡುವ ಹಿನ್ನೆಲೆಯಲ್ಲಿ, ತೀವ್ರವಾಗಿ ಕುಸಿದಾಗ ಪ್ರಾಂತ ರೈತ ಸಂಘ 'ಹೋರಾಟ ಸಮಿತಿ' ರಚಿಸಿಕೊಂಡು ನಡೆಸಿದ ಹೋರಾಟಗಳಿಗೆ ಮತ್ತು ಗುಲ್ಬರ್ಗಾ ಬಂದ್‌ಗೆ ಪಕ್ಷದ ಬೆಂಬಲ ನೀಡಲಾಗಿದೆ.

23. ಉಡುಪಿ ಶ್ರೀಕೃಷ್ಣ ಮಠದಲ್ಲಿ ನಡೆಯುತ್ತಿರುವ ಪಂಕ್ತಿಬೇದದ ವಿರುದ್ಧ ಹಾಗೂ ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ನಡೆಯುತ್ತಿರುವ ಮಡೆಸ್ನಾನ ಪದ್ಧತಿಗಳನ್ನು ನಿಷೇಧಿಸಬೇಕೆಂದು ಒತ್ತಾಯಿಸಿ 2012ರ ಡಿಸೆಂಬರ್ ತಿಂಗಳಲ್ಲಿ ಜನಜಾಗೃತಿಗಾಗಿ ಕುಕ್ಕೆ ಸುಬ್ರಮಣ್ಯದಿಂದ ವಾಹನ ಜಾಥಾ ಹಾಗೂ ಉಡುಪಿಗೆ ಮಂಗಳೂರು ಮತ್ತು ಕುಂದಾಪುರದಿಂದ ಎರಡು ಪಾದಯಾತ್ರೆಗಳನ್ನು ನಡೆಸಿ ಉಡುಪಿಯಲ್ಲಿ ಬೃಹತ್ ಪ್ರತಿಭಟನಾ ಸಭೆ ಮತ್ತು ಶ್ರೀಕೃಷ್ಣ ಮಠದ ಹತ್ತಿರದಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲಾಗಿದೆ. ಇದಕ್ಕೂ ಮೊದಲು ಜನವರಿ ತಿಂಗಳಲ್ಲಿ ಮೊದಲೊಮ್ಮೆ ಉಡುಪಿಯಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಆದರೆ ಈ ಸಲ ಪೋಲಿಸರು ಅನಗತ್ಯವಾಗಿ ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರ ಮಾಡಿ ನೂರಾರು ಕಾರ್ಯಕರ್ತರನ್ನು ಬಂಧಿಸಿ ಪ್ರಕರಣ ದಾಖಲು ಮಾಡಿದರು. ಹತ್ತಾರು ಜನ ಕಾರ್ಯಕರ್ತರು ತೀವ್ರವಾಗಿ ಗಾಯಗೊಂಡರು. ಜಾತಿತಾರತಮ್ಯ ಹಾಗೂ ಮೂಢನಂಬಿಕೆ ವಿರುದ್ಧ ಸಿಪಿಐ(ಎಂ) ನಡೆಸುತ್ತಾ ಬಂದಿರುವ ಹೋರಾಟವನ್ನು ಸಾರ್ವಜನಿಕರು ಸ್ವಾಗತಿಸಿದ್ದಾರೆ.

24. ಸಿಐಟಿಯು ಮತ್ತು ಇತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನೀಡಿದ ಹೋರಾಟದ ಕರೆಗಳನ್ನು ರಾಜ್ಯದಲ್ಲಿ ಯಶಸ್ವಿಗೊಳಿಸಲು ಸಿಪಿಐ(ಎಂ) ಸಂಪೂರ್ಣ ಸಹಕಾರ ನೀಡಿದೆ. 2010 ಸೆಪ್ಟೆಂಬರ್ 7 ಸಾರ್ವತ್ರಿಕ ಮುಷ್ಕರ, 2011 ಫೆಬ್ರವರಿ 23ರ ಪಾರ್ಲಿಮೆಂಟ್ ಚಲೋ ಚಳುವಳಿ, ನವೆಂಬರ್ 8ರ ಜೈಲ್‌ಭರೋ ಚಳುವಳಿ, 2012 ಫೆಬ್ರವರಿ 28ರ ದೇಶವ್ಯಾಪಿ ಮುಷ್ಕರ ಮತ್ತು 2013 ಫೆಬ್ರವರಿ 20 ಮತ್ತು 21ರ 2ದಿನಗಳ ಮುಷ್ಕರವನ್ನು ಯಶಸ್ವಿಗೊಳಿಸಲು, ಕರ್ನಾಟಕದಲ್ಲಿ ಮುಷ್ಕರಗಳನ್ನು ಬಂದ್‌ಗಳಾಗಿ ಪರಿವರ್ತಿಸಲು ಸಿಪಿಐ(ಎಂ) ವಿಶೇಷ ಮುತುವರ್ಜಿವಹಿಸಿದೆ.

25. ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ತಲೆದೋರುತ್ತಿರುವ ಬರಗಾಲದ ಸಂದರ್ಭದಲ್ಲಿ ಪಕ್ಷ ಬರಗಾಲ ಪೀಡಿತ ಪ್ರದೇಶಗಳ ರೈತರು, ಕೃಷಿ ಕೂಲಿಕಾರರ ಪ್ರಶ್ನೆಗಳನ್ನು ಎತ್ತಿಕೊಂಡು ಹೋರಾಟಗಳನ್ನು ಮಾಡುತ್ತಾ ಬಂದಿದೆ. ಸತತವಾಗಿ ಬರಗಾಲಕ್ಕೆ ತುತ್ತಾಗಿ ಕುಡಿಯುವ ನೀರಿಗೂ ಪರದಾಡುತ್ತಿರುವ ಬಯಲು ಸೀಮೆಯ 7 ಜಿಲ್ಲೆಗಳಿಗೆ ಪರಮಶಿವಯ್ಯ ವರದಿ ಆಧಾರದಲ್ಲಿ ಶಾಶ್ವತ ನೀರಾವರಿ ಯೋಜನೆಯನ್ನು ಜಾರಿಗೊಳಿಸಲು ಆಗ್ರಹಿಸಿ ವಿಶಾಲವಾದ ಹೋರಾಟ ಸಮಿತಿಯನ್ನು ರಚಿಸಿ ಸಿಪಿಐ(ಎಂ) ಹೋರಾಟವನ್ನು ನಡೆಸುತ್ತಾ ಬಂದಿದೆ.

26. ಗ್ರಾಮ ಪಂಚಾಯತ್ ನೌಕರರು, ಬೀಡಿ ಕಾರ್ಮಿಕರು, ಅಂಗನವಾಡಿ ನೌಕರರು, ಬಿಸಿಯೂಟ ನೌಕರರು, ಕಟ್ಟಡ ನಿರ್ಮಾಣ ಕಾರ್ಮಿಕರು, ಹಮಾಲಿ ಕಾರ್ಮಿಕರು, ಆಟೋ ಚಾಲಕರು, ಗುತ್ತಿಗೆ ಕಾರ್ಮಿಕರು, ರೈಲ್ವೇ ಕಾರ್ಮಿಕರು, ರಸ್ತೆ ಸಾರಿಗೆ ನೌಕರರು, ಆಶಾ ಕಾರ್ಯಕರ್ತೆಯರು, ಪೌರ ಕಾರ್ಮಿಕರು, ತೋಟ ಕಾರ್ಮಿಕರು, ಕೃಷಿ ಕಾರ್ಮಿಕರು, ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸಮಾಡುವ ಕೂಲಿಕಾರರು, ಸರ್ಕಾರಿ ಹಾಸ್ಟೇಲ್ ನೌಕರರು, ಅಂಗವಿಕಲರು, ದೇವದಾಸಿ ಮಹಿಳೆಯರು ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಸಿದ ಎಲ್ಲಾ ಹೋರಾಟಗಳಿಗೆ ಸಿಪಿಐ(ಎಂ) ತಪ್ಪದೆ ಬೆಂಬಲ ನೀಡುತ್ತಾ ಬಂದಿದೆ.

27. ಶಿಕ್ಷಣ ರಂಗದಲ್ಲಿ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಇತ್ಯರ್ಥಕ್ಕಾಗಿ ವಿದ್ಯಾರ್ಥಿಗಳು ನಡೆಸುತ್ತಾ ಬಂದಿರುವ ಎಲ್ಲ ನ್ಯಾಯಸಮ್ಮತ ಹೋರಾಟಗಳಿಗೆ ಸಿಪಿಐ(ಎಂ) ಬೆಂಬಲ ನೀಡಿದೆ. ಅದೇ ಸಂದರ್ಭದಲ್ಲಿ ನಿರುದ್ಯೋಗಿ ಯುವಕರ ಉದ್ಯೋಗದ ಹಕ್ಕಿಗಾಗಿ, ನಿರುದ್ಯೋಗ ಭತ್ಯೆಗಾಗಿ, ಖಾಸಗಿ ರಂಗದಲ್ಲಿ ಮೀಸಲಾತಿಗಾಗಿ ಒತ್ತಾಯಿಸಿ ಯುವ ಜನರು ನಡೆಸುವ ಹೋರಾಟವನ್ನು ಪಕ್ಷ ಬೆಂಬಲಿಸುತ್ತದೆ.

28. ರಾಜ್ಯದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ಬಗ್ಗೆ ಸಿಪಿಐ(ಎಂ) ಆತಂಕ ವ್ಯಕ್ತಪಡಿಸುತ್ತಾ ಬಂದಿದೆ. ದೌರ್ಜನ್ಯದ ಪ್ರಕರಣಗಳು ನಡೆದಾಗ ಮಧ್ಯಪ್ರವೇಶ ಮಾಡಿದೆ. ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಡುತ್ತಿರುವ ಮಹಿಳಾ ಸಂಘಟನೆಗಳ ಹೋರಾಟಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾ ಬಂದಿದೆ.

29. ಕನ್ನಡ ಭಾಷೆ, ಕನ್ನಡ ಶಾಲೆಗಳು ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ, ಕನ್ನಡದಲ್ಲಿ ಆಡಳಿತಕ್ಕಾಗಿ ಸಿಪಿಐ(ಎಂ) ಧ್ವನಿ ಎತ್ತುತ್ತಾ ಬಂದಿದೆ. ಜನ ಸಂಸ್ಕೃತಿಯ ಉಳಿವು ಹಾಗೂ ಬೆಳವಣಿಗೆಗಾಗಿ ಮತ್ತು ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿಯೂ ಸಿಪಿಐ(ಎಂ) ಶ್ರಮಿಸುತ್ತಾ ಬಂದಿದೆ.

ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ

ರಾಜ್ಯದ ವಿವಿಧ ಜನ ಸಮೂಹಗಳ ತುರ್ತುಸಮಸ್ಯೆಗಳ ಹಾಗೂ ರಾಜ್ಯದ ಒಟ್ಟಾರೆ ಜನತೆಯ ಪ್ರಜಾಸತ್ತಾತ್ಮಕ ಬೇಡಿಕೆಗಳಿಗಾಗಿ ಸಿಪಿಐ(ಎಂ) ನಡೆಸುತ್ತಾ ಬಂದಿರುವ ಹೋರಾಟಗಳ ಬಗ್ಗೆ ಪಕ್ಷಕ್ಕೆ ತೃಪ್ತಿ ಇಲ್ಲ. ಮಾಡಬೇಕಾದದ್ದು ತುಂಬಾ ಬಾಕಿ ಇದೆ. ಆರಂಭಿಸಿದ ಹೋರಾಟಗಳನ್ನು ಮುಂದುವರೆಸಬೇಕಾಗಿದೆ.

ಜನರ ಹೋರಾಟಗಳು ಶಾಸನ ಸಭೆಯೊಳಗೂ ಪ್ರತಿಧ್ವನಿಸುವುದು ಅಗತ್ಯವಾಗಿದೆ. ಚಳುವಳಿಗಳು ಶಾಸನ ಮಾಡುವವರ ಮೇಲೆ ಪ್ರಭಾವ ಬೀರಬೇಕು. ಶಾಸನ ಸಭೆಗಳ ಚರ್ಚೆಗಳಲ್ಲಿ ಜನಪರ ಹೋರಾಟಗಳನ್ನು ಪ್ರಸ್ತಾಪಿಸುವಂತಹ, ಹೋರಾಡುವ ಜನ ಸಮೂಹಗಳ ನ್ಯಾಯ ಸಮ್ಮತ ಬೇಡಿಕೆಗಳನ್ನು ಬೆಂಬಲಿಸುವಂತಹ ಜನಪ್ರತಿನಿಧಿಗಳು ಆಯ್ಕೆಯಾಗಬೇಕು. 2004ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಜಯಗಳಿಸಿದ್ದ ಸಿಪಿಐ(ಎಂ) ಅಭ್ಯರ್ಥಿ ಸಂಗಾತಿ ಜಿ.ವಿ. ಶ್ರೀರಾಮರೆಡ್ಡಿ ರಾಜ್ಯ ವಿಧಾನಸಭೆಯಲ್ಲಿ ದುಡಿಯುವ ಜನರ ಏಕೈಕ ಪ್ರತಿನಿಧಿಯಾಗಿ ಅತ್ಯಂತ ಸಮರ್ಥವಾಗಿ ಕೆಲಸ ಮಾಡಿದ್ದನ್ನು ರಾಜ್ಯದ ಜನತೆ ಈಗಲೂ ಸ್ಮರಿಸುತ್ತಾರೆ. ಆದರೆ ಕಳೆದ ಬಾರಿ ರಾಜ್ಯ ವಿಧಾನಸಭೆಯಲ್ಲಿ ದುಡಿಯುವ ವರ್ಗದ ಒಬ್ಬ ಪ್ರತಿನಿಧಿಯೂ ಇರಲಿಲ್ಲ.

ಈ ನ್ಯೂನತೆಯನ್ನು ನೀಗಿಸಲು ಈ ಸಲ ಸಿಪಿಐ(ಎಂ) ಮತ್ತು ಎಡಪಕ್ಷಗಳ ಅಭ್ಯರ್ಥಿಗಳನ್ನು ಚುನಾಯಿಸಬೇಕೆಂದು ಸಿಪಿಐ(ಎಂ) ಮನವಿ ಮಾಡುತ್ತದೆ.

ಜಗದಗಲ

ಶರತ್‌ಚಂದ್ರ

ರಶ್ಯನ್ ಕಮ್ಯುನಿಸ್ಟ್ ಪಕ್ಷದ 15ನೇ ಮಹಾಧಿವೇಶನ

ಇತ್ತೀಚೆಗೆ (ಫೆ. 23–24 ರಂದು) ರಶ್ಯದಲ್ಲಿ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಆರ್.ಎಫ್.) 15ನೇ ಮಹಾಧಿವೇಶನವನ್ನು ನಡೆಸಲಾಯಿತು. 91 ಮಿತ್ರಪಕ್ಷಗಳ 135 ಪ್ರತಿನಿಧಿಗಳು ಭಾಗವಹಿಸಿದ್ದರು. ಸಿಪಿಐ(ಎಂ)ನ ಸೀತಾರಾಮ ಯೆಚ್ಚುರಿ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ರಶ್ಯನ್ ಕಮ್ಯುನಿಸ್ಟ್ ಪಕ್ಷ ಸೋವಿಯೆಟ್ ಪತನದ ಎರಡು ದಶಕಗಳಲ್ಲಿ ಹಲವು ಏಳು–ಬೀಳುಗಳನ್ನು ಕಂಡಿದೆ. ಹೆಚ್ಚು ಕಡಿಮೆ ಭೂಗತವಾಗಿರಬೇಕಾಗಿದ್ದ ದಿನಗಳನ್ನು ಕಂಡಿದೆ. ಕೆಲವು ಪೂರ್ವ ಯುರೋಪಿನ ದೇಶಗಳಲ್ಲಿ ಆದಂತೆ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಸಹಚರ ಸಂಘಟನೆಗಳನ್ನು ಕಾನೂನು ಪ್ರಕಾರ ನಿಷೇಧಿಸುವ ಪ್ರಯತ್ನವೂ ನಡೆಯಿತು. ಆದರೂ ಎಲ್ಲಾ ಸನ್ನಿವೇಶಗಳಲ್ಲೂ, ರಶ್ಯದ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಜನತೆಯ ಹಿತಾಸಕ್ತಿಗಳಿಗಾಗಿ ತನ್ನ ಹೋರಾಟ ಮುಂದುವರೆಸಿದೆ.

ಪ್ರಾರಂಭದಲ್ಲಿ ಜನತೆಯ ಅಪನಂಬಿಕೆ ಎದುರಿಸಿದ್ದ ಪಕ್ಷ ಸತತ ಹೋರಾಟದ ನಂತರ ಜನರ ನಂಬಿಕೆಗಳಿಸಿದೆ. ಕಳೆದ ಚುನಾವಣೆಯಲ್ಲಿ ಎರಡನೇ ಅತಿ ದೊಡ್ಡ ಪಕ್ಷ ಮತ್ತು ಅಧಿಕೃತ ವಿರೋಧ ಪಕ್ಷವಾಗಿ ಹೊಮ್ಮಿದೆ. ದೇಶದ ಹಲವು ಜನವಿಭಾಗಗಳನ್ನು (ಅದರಲ್ಲೂ ಯುವಜನತೆಯನ್ನು) ಆಕರ್ಷಿಸಲು ಅದಕ್ಕೆ ಸಾಧ್ಯವಾಗಿದೆ. ಇಂದಿನ ಸನ್ನಿವೇಶದಲ್ಲಿ ಸ್ಟಾಲಿನ್ ಬಗ್ಗೆ ಅಭಿಮಾನ ದೇಶಪ್ರೇಮದ ಪ್ರತೀಕ ಎನ್ನುವ ಪರಿಸ್ಥಿತಿ ಉಂಟಾಗಿದೆ. ಅದೇ ರೀತಿ ಕಮ್ಯುನಿಸ್ಟರು ಒಂದು ದೇಶಪ್ರೇಮಿ ಜನಪರ ಪ್ರಗತಿಪರ ಶಕ್ತಿ ಎಂಬ ಭಾವನೆ ಜನರಲ್ಲಿ ಮೂಡಿದೆ. ದೇಶದ ಭವಿಷ್ಯದ ದಾರಿ ಬಗ್ಗೆ ನಡೆಯುತ್ತಿರುವ ರಾಷ್ಟ್ರೀಯ ಚರ್ಚೆಯಲ್ಲಿ ಪಕ್ಷ ಮಹತ್ವದ ಮಧ್ಯಪ್ರವೇಶ ಮಾಡಿದೆ ಮತ್ತು ಪಾತ್ರ ವಹಿಸಿದೆ. ಹಲವು ವರ್ಷಗಳ ನಂತರ ಮೊದಲ ಬಾರಿ ಮಹಾಧಿವೇಶನದ ಮೊದಲು ಎಲ್ಲಾ ಘಟಕಗಳಲ್ಲಿ ರಾಜಕೀಯ ನಿರ್ಣಯ ಮತ್ತಿತರ ಕರಡುಗಳ ಬಗ್ಗೆ ವ್ಯಾಪಕ ಚರ್ಚೆ ನಡೆಸುವ ವಾತಾವರಣ ಇದೆ. ಈ ಆತ್ಮವಿಶ್ವಾಸ ಮತ್ತು ವ್ಯಾಪಕ ಜನಬೆಂಬಲದ ನೆಲೆ 15ನೇ ಮಹಾಧಿವೇಶನದಲ್ಲಿ ಕಂಡು ಬರುತ್ತಿತ್ತು ಎಂದಿದ್ದಾರೆ ಯೆಚ್ಚುರಿ.



ಪ್ರತಿನಿಧಿಗಳಲ್ಲಿ ಮಾತ್ರವಲ್ಲ ಮಹಾಧಿವೇಶನದಲ್ಲಿ ಆಯ್ಕೆಯಾದ ಕೇಂದ್ರ ಸಮಿತಿಯಲ್ಲಿ ಸಹ ಯುವಜನತೆಯ ಹೆಚ್ಚಳ ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಪಕ್ಷದ ಅಧ್ಯಕ್ಷ ಗೆನ್ನಾಡಿ ಝುಗನೊವ್ ಮಂಡಿಸಿದ ದೀರ್ಘ ನಿರ್ಣಯವನ್ನು ಮಹಾಧಿವೇಶನ ಆಳವಾದ ಚರ್ಚೆಯ ನಂತರ ಅಂಗೀಕರಿಸಿತು. 'ರಶ್ಯ ಬದಲಾವಣೆಗೆ ಒತ್ತಾಯಿಸುತ್ತಿದೆ' ಎಂಬ ನಿರ್ಣಯವನ್ನೂ ಅಂಗೀಕರಿಸಿ ದೇಶದಲ್ಲಿ ವ್ಯಾಪಕ ಚರ್ಚೆ, ಪ್ರಚಾರಕ್ಕೆ ಬಿಡಲಾಯಿತು.

ಇದರಲ್ಲಿ ರಶ್ಯ ಪುನಃ ಕೈಗಾರಿಕಾ ಶಕ್ತಿ
ಆಗಲು ತೆಗೆದುಕೊಳ್ಳಬೇಕಾದ ಕ್ರಮ
ಬಗ್ಗೆ ವಿವರವಾಗಿ ವಿಶ್ಲೇಷಿಸಲಾಗಿದೆ. ಪ
ಪಾರ್ಲಿಮೆಂಟ್ ಸದಸ್ಯರು ಪಾರ್ಲಿಮೆಂ
ಸಮಿತಿಗಳಲ್ಲೂ ಇಂತಹ ಪ್ರಸ್ತಾವಗಳ
ಮಾಡುವ ಮೂಲಕ ದೇಶದ ಗ
ಸೆಳೆದಿದ್ದಾರೆ. ಕಳೆದ ಎರಡು ದಶಕ
'ಬಂಡವಾಳಶಾಹಿ ಆಳ್ವಿಕೆಯಲ್ಲಿ ಒಂ
ಮೆಗಾವಾಟ್ ವಿದ್ಯುತ್ ಉತ್ಪಾದ
ಶಕ್ತಿಯನ್ನೂ ಸಹ ಸೇರಿಸಲಾಗಿಲ್ಲ.
ಹೆಚ್ಚು ಕಡಿಮೆ ಎಲ್ಲಾ ಮೂಲ ಸೌಕರ್ಯ
ಬಗ್ಗೆ ಸಹ ನಿಜ ಎಂದು ಹೇಳಲಾಗಿದೆ.
ರಶ್ಯವನ್ನು ಆಳುತ್ತಿರುವ ಮಾಫಿಯಾದಂ
ಆಲಿಗಾರ್ಕಿ ಬಂಡವಾಳಶಾಹಿ ಗುಂಪು
ಇವನ್ನು ಖಂಡಿತ ಮಾಡುವುದಿ
ಬಂಡವಾಳಶಾಹಿ ಪದ್ಧತಿಯನ್ನು ಕಿತ್ತೆ
ಯದೆ ಇದು ಸಾಧ್ಯವಿಲ್ಲ. "ಬಂಡವಾಳ
ಅಪಾಯಕಾರಿಯಾದುದು. ಮನುಕ
ಬಂಡವಾಳಶಾಹಿ ವ್ಯವಸ್ಥೆಯ
ತೊಲಗಿಸಬೇಕಾದ್ದು ಎಂದಿಗಿಂತಲೂ ಇಂ
ತುರ್ತಿನ ಅಗತ್ಯವಾಗಿದೆ. 'ಸಮಾಜವಾ
ಅಥವಾ ಬರ್ಬರತೆ' ನಡುವೆ ಆ
ಮಾಡಿಕೊಳ್ಳಬೇಕಾದ್ದು ಎಂದಿಗಿಂತಲ
ಇಂದು ತುರ್ತಿನದಾಗಿದೆ. ನಾವು ಕಮ್ಯುನಿಸ್ಟ
ಈ ಸಮರದಲ್ಲಿ ಸೋಲುವ ಪ್ರಶ್ನೆಯೆ
ಇಲ್ಲ. ನಮ್ಮ ನೀತಿ ಬಹುಸಂಖ್ಯಾತರ
ಅನುಕೂಲವಾದ ನೀತಿ. ನಮ್ಮ ಉದ್ದೇ
ಸಮಾಜವಾದ" ಎಂದು ಸಿ.ಪಿ.ಆರ್.ಎ
ಹೇಳಿದೆ.

ನೈಜ ಪ್ರಜಾಪ್ರಭುತ್ವಕ್ಕಾಗಿ ಚುನಾವಣೆಯಲ್ಲಿ ಯುವಜನ.....

ಪುಟ 5 ರಿಂದ

ನಮ್ಮನ್ನು ಆಳುತ್ತಿರುವ ಬಿಜೆಪಿ–ಕಾಂಗ್ರೆಸ್ ಪಕ್ಷಗಳೇ. ಇಂತಹ ಪಕ್ಷಗಳನ್ನು ಮತ್ತೊಮ್ಮೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬೆಂಬಲಿಸಿದರೆ ನಮ್ಮ ಭವಿಷ್ಯವನ್ನು ನಾವೇ ಹಾಳುಗೆಡವಿಕೊಂಡಂತೆ.

ಹೀಗಾಗಿ ಯುವಜನರ ಆಶೋತ್ತರಗಳಿಗೆ ಸ್ಪಂದಿಸುವ, ದೇಶದ ಐಕ್ಯತೆ. ಸಮಗ್ರತೆಗಾಗಿ ತ್ಯಾಗಮಯ ಹೋರಾಟಗಳನ್ನು ಜನಾಂದೋಲನಗಳನ್ನು ರೂಪಿಸಿಕೊಂಡು ಬರುತ್ತಿರುವ ಎಡಪಕ್ಷಗಳನ್ನು ಬೆಂಬಲಿಸಬೇಕಾ? ಅಥವಾ ಯುವಜನರ ಮರಣ ಶಾಸನಗಳನ್ನು ಜಾರಿಗೆ ತರುವ ಬಿಜೆಪಿ–ಕಾಂಗ್ರೆಸ್ ಮತ್ತು ಸ್ವಾರ್ಥ ಹಾಗೂ 'ಪ್ರಾದೇಶಿಕ' ಎಂಬ ಹಣೆಪಟ್ಟಿಯ ಭ್ರಷ್ಟ ಪಕ್ಷಗಳನ್ನು ವಿಧಾನಸಭಾ ಚುನಾವಣೆಯಲ್ಲಿ ಬೆಂಬಲಿಸಬೇಕಾ? ಎಂಬುದರ ಬಗ್ಗೆ ಬಹಳ ಗಂಭೀರವಾಗಿ ರಾಜ್ಯ ಯುವಜನತೆ ಯೋಚಿಸಬೇಕಿದೆ.

ಕಾಂಗ್ರೆಸ್‌ನ ಕೇಂದ್ರ ಸರ್ಕಾರದ ಬ್ರಹ್ಮಾಂಡ ಮತ್ತು ಬಿಜೆಪಿ ಮತ್ತು ಪ್ರಾದೇಶಿಕ ಪಕ್ಷಗಳ ವಿರಾಟ ಸ್ವರೂಪದ ಭ್ರಷ್ಟಾಚಾರಗಳ ವಿರುದ್ಧ ಜನಾಂದೋಲವನ್ನು ರೂಪಿಸಿ, ಇಂತಹ ಭ್ರಷ್ಟಾಚಾರಕ್ಕೆ ಕಾರಣವಾಗಿರುವ ಜಾಗತೀಕರಣದ ನೀತಿಗಳನ್ನು ಬಯಲಿಗೆ ತಂದದ್ದು. ಉದ್ಯೋಗ ನಾಶ ಮಾಡುವ ಸಾರ್ವಜನಿಕ ಕ್ಷೇತ್ರಕ್ಕೆ ವಿದೇಶಿ ಬಂಡವಾಳ ಬೇಡ. ಸ್ವಯಂ ಉದ್ಯೋಗ ನಾಶ ಮಾಡುವ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಬೇಡ. ವಿದೇಶಿ ಬಂಡವಾಳದಿಂದ ಶಿಕ್ಷಣ–ಆರೋಗ್ಯ ವ್ಯಾಪಾರೀಕರಣ ಬೇಡ. ಉದ್ಯೋಗ ಸೃಷ್ಟಿಸುವಂತಹ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಬೇಕು. ಉದ್ಯೋಗ ನೇಮಕಾತಿ ನಿರ್ಬಂಧ ತೆಗೆದು ಹಾಕಬೇಕು. ಹೊರಗುತ್ತಿಗೆ–ಕಾಂಟ್ರಾಕ್ಟ್ ಪದ್ಧತಿ ರದ್ದಾಗಬೇಕು. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರಿಗೆ ಕನಿಷ್ಟ ವೇತನ ನಿಗದಿಯಾಗಬೇಕು. ಭೂಹೀನರಿಗೆ ಭೂಹಂಚಿಕೆಯಾಗಬೇಕು. ನೂರಾರು ವರ್ಷಗಳಿಂದ ಕೃಷಿ ಮಾಡಿಕೊಂಡು ಬರುತ್ತಿರುವ ಬಗರ್ ಹುಕುಂ ಸಾಗುವಳಿದಾರಿಂದ ಭೂಮಿಯನ್ನು ಸರ್ಕಾರ ಕಿತ್ತುಕೊಳ್ಳಬಾರದು. ರೈತರಿಗೆ ಉತ್ತಮ ಗುಣ ಮಟ್ಟದ ಬಿತ್ತನೆ ಬೀಜ ಮತ್ತು ಬೆಳೆದ ಬೆಳೆಗಳಿಗೆ ವೈಜ್ಞಾನಿಕವಾಗಿ ಬೆಲೆ ನಿಗದಿ ಮುಂತಾದ ಪ್ರೋತ್ಸಾಹ ದೊರೆಯಬೇಕು.

ಸಾಮಾಜಿಕ ಅನಿಷ್ಟವಾದ ಜಾತಿ ತಾರತಮ್ಯ, ಪಂಕ್ತಿ ಬೇಧ ಹೋಗಲಾಡಿಸಬೇಕೆಂದು ಪ್ರಜಾಸತ್ತಾತ್ಮಕವಾಗಿ ಚಳುವಳಿ ರೂಪಿಸುವ ಸಿ.ಪಿ.ಐ(ಎಂ) ನಂತಹ ಎಡ ಪಕ್ಷಗಳಿಗೆ ಬೆಂಬಲಿಸಬೇಕಾ?. ಅಥವಾ ಇಂತಹ ಮೂಲಭೂತ ಸಮಸ್ಯೆಗಳನ್ನು ಪೋಷಿಸುವ ಕಾಂಗ್ರೆಸ್– ಬಿಜೆಪಿಗಳನ್ನು ಬೆಂಬಲಿಸಬೇಕಾ? ಸಿಪಿಐ(ಎಂ) ಎಡ ಪಕ್ಷಗಳು ಅಧಿಕಾರದಲ್ಲಿರುವ ಕಡೆ ಭ್ರಷ್ಟಾಚಾರದ ಸಮಸ್ಯೆ ಇಲ್ಲ. ಸ್ವಚ್ಛ ಆಡಳಿತ. ಅಭಿವೃದ್ಧಿ ಪರ ಆಡಳಿತ. ಶಾಂತಿ ಸಹಬಾಳ್ವೆಯ ಆಡಳಿತ. ಹೀಗಾಗಿಯೇ ಮತ್ತೊಮ್ಮೆ ತ್ರಿಪುರದಲ್ಲಿ ಇತ್ತೀಚೆಗೆ ಅಭೂತ ಪೂರ್ವ ಗೆಲುವು ವಿಧಾನ ಸಭಾ ಚುನಾವಣೆಯಲ್ಲಿ ಸಿಪಿಐ(ಎಂ)ಗೆ ಸಂದಿದೆ.

ಈ ಎಲ್ಲಾ ಅಂಶಗ
ಗಮನದಲ್ಲಿಟ್ಟುಕೊಂಡು ಯುವಜನರು ನ
ಮುಂದಿರುವ ವಿಧಾನ ಸಭಾ ಚುನಾವಣೆಯ
ಗುರುತರವಾಗಿ ನಿರ್ಣಾಯಕ ಪಾ
ವಹಿಸಬೇಕು. ನಮ್ಮ ಜೀವನದ ಭವಿ
ಹೇಗಿರಬೇಕೆಂದು ರಾಜಕೀಯ-–ಆರ್ಥಿ
ವ್ಯವಸ್ಥೆಯೇ ನಿರ್ಧರಿಸುವಾಗ ಎಂತ
ರಾಜಕೀಯ–ಆರ್ಥಿಕ ವ್ಯವಸ್ಥೆ ಇರಬೇಕೆಂದ
ನಾವೇ ನಿರ್ಧರಿಸಬೇಕು. ಹೀಗಾ
ಮುಂದಿನ ವಿಧಾನ ಸಭೆಯಲ್ಲಿ ರಾಜ್ಯ
ಯುವಜನತೆಯೂ, ಯುವಜನ ವಿರೋ
ಬಿಜೆಪಿ–ಕಾಂಗ್ರೆಸ್ ಪಕ್ಷಗಳನ್ನು ಸೋಲಿ
ಸ್ವಾರ್ಥ ಮತ್ತು ಭ್ರಷ್ಟತೆ ತುಂಬಿದ ಪ್ರಾದೇಶಿಕ
ಹೆಸರಿನ ವ್ಯಕ್ತಿಕೇಂದ್ರಿತ ಪಕ್ಷಗಳನ್ನು ಧಿಕ್ಕರಿ
ಯುವಜನರ ಆಶೋತ್ತರಗಳಿಗೆ ಸ್ಪಂದಿಸು
ಸಿಪಿಐ(ಎಂ) ಮತ್ತು ಎಡ ಪಕ್ಷಗಳನ
ಬೆಂಬಲಿಸಲು ಡಿ.ವೈ.ಎಫ್.ಐ.ನ ರಾಜಕೀಯ
ಸಮಾವೇಶದಲ್ಲಿ ಯುವಜನರಿಗೆ ಕ
ನೀಡಿದೆ.

ಮನುಸ್ಮೃತಿ'ಯ ಮೌಲ್ಯಗಳನ್ನು....

ಟ 7 ರಿಂದ

ಡೆದು ಹಾಕುವುದೊಂದೇ ಈ ಸಮಸ್ಯೆಗೆ ಜವಾದ ಪರಿಹಾರ ಎಂದರು.

ಆಶಯ ನುಡಿ ನುಡಿದ ಕರ್ನಾಟಕ ವಿ.ವಿ. ಂಡಿಕೇಟ್ ಸದಸ್ಯರಾದ ಮಾಧುರಿ ದೇವಧರ ವರು ಮಾತನಾ[illegible]ತ್ತ ಪ್ರಕೃತಿಯಲ್ಲಿ ಮಹಿಳೆ ರುಷ ಸಮಾನರು. ಆದರೆ ಜಗತ್ತಿನಲ್ಲಿ 60 ಲಿಯನ್ ಹೆಣ್ಣು ಮಕ್ಕಳು, 48 ಮಿಲಿಯ ಂಡು ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಗತ್ತಿನ ಒಟ್ಟು ದುಡಿಮೆಯಲ್ಲಿ ಮೂರರಲ್ಲಿ ರಡು ಪಾಲು ದುಡಿಮೆ ಮಹಿಳೆಯರದ್ದು. ದರೆ ಜಗತ್ತಿನಲ್ಲಿ 60 ಮಿಲಿಯನ್ ಹೆಣ್ಣು ಕ್ಕಳು, 48 ಮಿಲಿಯ ಗಂಡು ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಜಗತ್ತಿನ ಒಟ್ಟು ದುಡಿಮೆಯಲ್ಲಿ ಮೂರರಲ್ಲಿ ಎರಡು ಪಾಲು ದುಡಿಮೆ ಮಹಿಳೆಯರದ್ದು. ಆದರೆ ಜಗತ್ತಿನ ಒಟ್ಟು ಆದಾಯದ ಹತ್ತರಲ್ಲಿ ಒಂದು ಫಾಲು ಮಾತ್ರ ಮಹಿಳೆಯರದು ಎಂದ ಮಾಧುರಿ ವಿದ್ಯೆ ಅನೇಕ ಬಾಗಿಲುಗಳನ್ನು ತೆಗೆಯುವ ಚಾವಿ. ತಮಿಳು ನಾಡಿನ ಹಳ್ಳಿಯೊಂದರಲ್ಲಿ ಕಳೆ ಕೀಳಲು ಹೋದ ಹೆಂಗಸು ಕೆಲಸದ ಮಧ್ಯೆ ಮಗುವಿಗೆ ಹಾಲು ಕುಡಿಸಿದ್ದಕ್ಕೆ ಹೊಲದ ಮಾಲೀಕ ಚಾಟಿ ಏಟು ಕೊಟ್ಟದ್ದನ್ನು ಅವಳ ಜೊತೆಯಿದ್ದ [illegible] ಮಹಿಳೆಯರು ಒಪ್ಪಲಿಲ್ಲ. ಒರಿದಾಗಿ ಪ್ರತಿಭಟಿಸಿದರು. ಕೊನೆಗೆ ಆಕೆಯ ಮನೆ ಓಣಿಯಲ್ಲಿ ಎಲ್ಲ ಸೇರಿ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಮಾಲಿಕ ಮಹಿಳೆಯ ಕಾಲುಮುಟ್ಟಿ ತಪ್ಪಾಯ್ತು ಎಂದ. ಬ್ಯಾಂಕ್‌ಗಳು ಸ್ಥಾಪನೆಯಾಗಿ 700 ವರ್ಷ ದಾಟಿದೆ. ಮಹಿಳೆ ಸಾಲ ವಾಪಸ್ಸಾತಿಯನ್ನು ಕರಾರುವಕ್ಕಾಗಿ ಮಾಡುತ್ತಾಳೆ ಎಂಬ ಸತ್ಯ ಬಹಳ ತಡವಾಗಿ ಈಗ ಗೊತ್ತಾಗುತ್ತಿದೆ. ಅಮೆರಿಕದಲ್ಲಿ 60 ವರ್ಷ ಹೋರಾಡಿದ ನಂತರ ಹೆಣ್ಣಿಗೆ ಮತದಾನದ ಹಕ್ಕು ಸಿಕ್ಕಿದೆ. ಆದ್ದರಿಂದ ವಿದ್ಯಾ[illegible]ು ಹಾಗೂ ಮಹಿಳೆಯರು [illegible]ೋಭಾವ ಬೆಳೆಸಿಕೊಳ್ಳಬೇಕ[illegible]ೀಡಿದರು. ಎಸ್.ಎಫ್.ಐ. [illegible] ಕಾರ್ಯದರ್ಶಿ ಹುಳ್ಳಿ ಉಮೇಶ್‌ರವರು ಪ್ರಸ್ತಾವಿಕವಾಗಿ ಮಾತನಾಡಿದರು. ಸ್ವಾಗತವನ್ನು ಹಾವೇರಿ ಜಿಲ್ಲಾ ಕಾರ್ಯದರ್ಶಿ ರೇಣುಕಾ ಕಹಾರ್ ನೆರವೇರಿಸಿದರು. ಪ್ರಗತಿಪರ ಸಾಹಿತಿ ಸತೀಶ್ ಕುಲಕರ್ಣಿ ಅವರು ಸಮಾವೇಶಕ್ಕೆ ಶುಭಕೋರಿ ಮಾತನಾಡಿದರು. ವೇದಿಕೆಯಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಪ್ರಕಾಶ್ ಜೈನ್, ಗೌರವ ಸಲಹೆಗಾರರಾದ ಬಿ. ಬಸವರಾಜ್, ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷರಾದ ನಾರಾಯಣ ಕಾಳೆ, ಜಿಲ್ಲಾ ಅಧ್ಯಕ್ಷರಾದ ಬಸವರಾಜ ಪೂಜಾರ ಮುಂತಾದವರು ಹಾಜರಿದ್ದರು. ವಿದ್ಯಾರ್ಥಿನಿಯರ ಉಪ ಸಮಿತಿಯ ಜ್ಯೋತಿ ಪುಟ್ಟರೆಡ್ಡರ್ ವಂದಿಸಿದರು. ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅನಂತನಾಯ್ಕ ಅಧ್ಯಕ್ಷತೆ ವಹಿಸಿದ್ದರು.

[illegible]ತರದಲ್ಲಿ ಲಿಂಗಸಮಾನತೆಗೆ ಸಂಬಂಧಿಸಿದ ಮೂರು ಗೋಷ್ಠಿಗಳು ಹಾಗೂ ಸಂಘಟನೆಯ ಕುರಿತು ಒಂದು ತರಗತಿ ನಡೆದವು. ರೇಣುಕಾ ಕಹಾರ್ ಅವರನ್ನು ರಾಜ್ಯ ಸಂಚಾಲಕರನ್ನಾಗಿ ಉಳ್ಳ ವಿದ್ಯಾರ್ಥಿನಿಯರ ಉಪ ಸಮಿತಿಯನ್ನು ಸಮಾವೇಶ ಆಯ್ಕೆ ಮಾಡಿತು.

ನಾರೋಗ್ಯವೋ, ಆರೋಗ್ಯದ...

ಟ 2 ರಿಂದ

ತೀರ್ಮಾನಕ್ಕೆ ಬಂದಿದ್ದಾರೆ.

ಡಾ। ಶುಭಾಷ್ ಸಾಲುಂಕೇ ಪೂರ್ವ ರೋಗ್ಯ ಸೇವೆಗಳ ನಿರ್ದೇಶಕರು (ಗೋವಾ). ವರು ಹೇಳುತ್ತಾರೆ "ಖಾಸಗಿ ಆರೋಗ್ಯ ಕ್ಷೇತ್ರ ಲ್ಲಾಪಿಲ್ಲಿಯಾಗಿದೆ ಹಾಗೂ ನಿಯಂತ್ರಣ ಹಿತವಾಗಿದೆ ಹಾಗೂ ಇಲ್ಲಿ ಅನೇಕ ತಪ್ಪು ಕಿತ್ಸೆಗಳೂ ಮುಂದುವರೆಯುತ್ತಿವೆ."

ಸರಕಾರ ಆರೋಗ್ಯ ಕ್ಷೇತ್ರದ ಬಗ್ಗೆ ಸಾಕಷ್ಟು ಂಡನೆ ಎದುರಿಸುತ್ತಿದೆ. ಅದಕ್ಕೆ ಉತ್ತರವಾಗಿ ಚ್ಚು ವೈದ್ಯರನ್ನು ಹಾಗೂ ದಾದಿಯರನ್ನು ರಬೇತಿಗೊಳಿಸಲು ಆರು ದೆಹಲಿಯ ಏಮ್ಸ್ ಾದರಿಯ ಆಸ್ಪತ್ರೆಗಳನ್ನು ತೆರೆಯಲು ಯತ್ನಿಸುತ್ತಿದೆ. ಇದು ಸ್ವಾಗತಾರ್ಹ. ಆದರೆ ವುಗಳಲ್ಲಿ ಒಂದು ಸೋನಿಯಾ ಗಾಂಧಿಯ ಲ್ಲಿ (ರಾಯ್ ಬರೇಲಿ) ಎಂಬುದು ಾಜಕೀಯವಲ್ಲವೇ? ಜನಾರೋಗ್ಯ ಾಧನೆಯಲ್ಲಿ ರಾಜಕೀಯ ಅತ್ಯಗತ್ಯ. ಆದರೆ ಮಗೆ ಬೇಕು ಪ್ರಜಾಪ್ರಭುತ್ವ ಎತ್ತಿ ಹಿಡಿಯುವ ಾಜಕೀಯ.!

ವೈದ್ಯಕ್ಷೇತ್ರದ ದುರುಪಯೋಗ!

ಸರಕಾರದ ಕೆಲಸ ಸಿಕ್ಕರೂ, ಆ ಸರ್ಕಾರಿ ವೈದ್ಯರು ಸರ್ಕಾರಿ ಕೇಂದ್ರಗಳಿಗೆ (ಗ್ರಾಮೀಣ) ಹೋಗಿ ಕೆಲಸ ಮಾಡಲು ಹಿಂಜರಿಯುತ್ತಾ-. ಕೆಲವರು ಪಟ್ಟಣಗಳಲ್ಲಿಯೇ ಉಳಿದು ಗ್ರಾಮಗಳಿಗೆ ಸ್ವಲ್ಪಸಮಯ ಹೋಗಿ ಚಿಕಿತ್ಸೆ ನೀಡಿದರೆ, ಇನ್ನು ಕೆಲವರು ರಜೆಹಾಕಿ ಅಥವ ಬೇರೆ ದೇಶಗಳಿಗೆ ಹೋಗಿ ದೂರವಿರುತ್ತಾರೆ. ವೈದ್ಯರ ಕೆಲವು ಸಮಸ್ಯೆಗಳಿಗೆ ಸರಕಾರ ಸ್ಪಂದಿಸದೇ ಇರುವುದೂ ಇದಕ್ಕೆ ಕಾರಣ. ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ 1400 ವೈದ್ಯರನ್ನು ಸರಕಾರ ನೇಮಕ ಮಾಡಿ [illegible]ಕ್ಕೆ ಕರೆದರೂ ಕೇವಲ 900 ವೈದ್ಯರು (64.2%) ಕೆಲಸಕ್ಕೆ ಹಾಜರಾದ ವಿಷಯ [illegible] ಈ ಕಾರಣದಿಂದ ರಾಷ್ಟ್ರೀಯ ಗ್ರಾಮೀಣ ಆರ[illegible]ಯಾನ ಇತ್ತೀಚೆಗೆ (ಆಯುರ್ವೇದ[illegible] ಸಿದ್ದ ಹಾಗೂ ಹೋಮಿಯೋಪತಿ ವೈದ್ಯರನ್ನು ಸರಕಾರಿ ಕೆಲಸಕ್ಕೆ ತೆಗೆದುಕೊಳ್ಳಲು ಪ್ರಾರಂಭಿಸಿವೆ. ಇದು ಸರ್ಕಾರವೆ ಪ್ರೋತ್ಸಾಹಿಸುತ್ತಿರುವ ವೈದ್ಯಕೀಯ ಕ್ಷೇತ್ರದ ದುರುಪಯೋಗ!

ವೈದ್ಯಕೀಯ ನಿರ್ಲಕ್ಷ್ಯದ ಕೆಲವು ಉದಾಹರಣೆಗಳು:

ವೈದ್ಯಕೀಯ ಕ್ಷೇತ್ರದ ನಿರ್ಲಕ್ಷ್ಯಗೆ ಕಾರಣ ಸರಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಇಲ್ಲದಿರುವುದು. ಜಾಗತೀಕರಣ ನೀತಿ ಆರೋಗ್ಯ ಸವಲತ್ತುಗಳನ್ನು ಕೊಂಡುಕೊಳ್ಳುವ ವಸ್ತುವನ್ನಾಗಿ ಪರಿವರ್ತಿಸುತ್ತಿವೆ. ಜನಸಾಮಾನ್ಯರ ಆರೋಗ್ಯ ನೀತಿ ಜಾ-ರಿಯಾಗದೇ ಜನ ಸಾಮಾನ್ಯರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ವೈದ್ಯಕೀಯ ನಿರ್ಲಕ್ಷ್ಯಗೆ ಹಲವ[illegible] ಜನಸಾಮಾನ್ಯರು ನೇರ[illegible] ವೈದ್ಯಕೀಯ ಕ್ಷೇತ್ರದ [illegible]ಕ್ಷ್ಯದ ಕೆಲವು ಉದಾಹರಣೆಗಳನ್ನು ನೋಡೋಣ.

ಆಂಧ್ರ ಪ್ರದೇಶಲ್ಲಿ ಕಾಂಗ್ರೆಸ್ ಸರಕಾರ ರಾಜೀವ ಆರೋಗ್ಯ ಶ್ರೀ ವಿಮಾಯೋಜನೆಯನ್ನು 2006 ರಲ್ಲಿಯೇ ಜಾರಿಗೆ ತಂದಿತು. ಬಿಪಿಎಲ್ ಕುಟುಂಬಗಳಿಗೆ 2ಲಕ್ಷದ ವರೆಗೆ ವೈದ್ಯಕೀಯ ವೆಚ್ಚಕ್ಕೆ ವಿಮೆ ನೀಡುವುದಾಗಿ ಘೋಷಿಸಲಾಗಿತ್ತು. ಈ ಯೋಜನೆಯನ್ನು ಸಾಂಸ್ಥಿಕ ಆಸ್ಪತ್ರೆಗಳು ಜಾರಿಗೆ ತರುವಂತೆ ವ್ಯವಸ್ಥೆ ಮಾಡಲಾಗಿತ್ತು. ಈ ಯೋಜನೆಯನ್ನು ಗಮನಿಸಿದ ಒಬ್ಬ ಹೃದಯ ರೋಗ ಶಸ್ತ್ರ ಚಿಕಿತ್ಸಕ "ಈ ಯೋಜನೆಯನ್ನು ಶ್ರೀಮಂತರೇ ಬಳಸುತ್ತಿದ್ದಾರೆ. ಈ ಯೋಜನೆ ಜನ ಸಾಮಾನ್ಯರಿಗೆ, ಬಡವರಿಗೆ ಪ್ರಯೋಜನವಾಗುತ್ತಿಲ್ಲ. ಅದರ ಬಗ್ಗೆ ಯಾರೂ ಕಾಳಜಿ ವಹಿಸುತ್ತಿಲ್ಲ".

ಲ್ಯಾಟಿನ್ ಅಮೇರಿಕಾ, ಯುರೋಪ್‌ನಲ್ಲಿ ಸರ[illegible]ರೋಗ್ಯ ಪಾಲನೆ ಮಾಡ[illegible]ಒಳ್ಳೆಯ ಸಾಧನೆ ಮಾಡಿವೆ. ಅದಲ್ಲದೇ ಶ್ರೀಲಂಕಾ, ಥೈಲ್ಯಾಂಡಿನಲ್ಲೂ ಆರೋಗ್ಯ ವ್ಯವಸ್ಥೆ ಸುಧಾರಿಸಿದೆ. ಆದ-ರೆ ಭಾರತವನ್ನು ಮಾರುಕಟ್ಟೆಯ ವ್ಯಾಪ್ತಿಯ ಆಧಾರದ ಮೇಲೆ ಶಕ್ತಿಶಾಲಿ ರಾಷ್ಟ್ರ ಎಂದು ಕರೆಯಲಾಗುತ್ತದೆ. ಆದರೆ ಭಾರತ ಒಂದು ಅನಾರೋಗ್ಯಭರಿತ ರಾಷ್ಟ್ರ, ಕಾರಣ ಇಲ್ಲಿ ಬಡಜನರ, ಗುಡ್ಡ ಗಾಡು ಜನರ ಮಕ್ಕಳ, ಹೆಣ್ಣು ಮಕ್ಕಳ ಕಡೆಗಣಿಸಲ್ಪಟ್ಟವರ ಆರೋಗ್ಯವನ್ನೂ ಗಮನಿಸಲಾಗುತ್ತಿಲ್ಲ. ಒಳ್ಳೆಯ ತಂತ್ರಜ್ಞಾನ ಹಾಗೂ ಆಧುನಿಕ ಆಸ್ಪತ್ರೆಗಳಿಗೇನೂ ಭಾರತದಲ್ಲಿ ಕಡಿಮೆ ಇಲ್ಲ. ಆದರೆ ಆ ಆಸ್ಪತ್ರೆಗಳನ್ನು ಕೇವಲ ಶ್ರೀಮಂತರು ಉಪಯೋಗಿಸಬಹುದಾಗಿದೆ ಹಾಗೂ 90% ಜನರು ಉಪಯೋಗಿಸುವ ಸಾಧ್ಯತೆ ಇರುವುದಿಲ್ಲ. ಆ ಆಸ್ಪತ್ರೆಗಳ [illegible]ಯೇ ದಿನನಿತ್ಯ ಜನರು [illegible] ಸಾಯುತ್ತಿದ್ದಾರೆ.!

ಹೆಣ್ಣು ಭ್ರೂಣಹತ್ಯೆ ವ್ಯಾಪಕವಾಗಿ ಕಂಡುಬರುವ ಆರೋಗ್ಯ ಸಮಸ್ಯೆ, ತಂತ್ರಜ್ಞಾನದ ದುರ್ಬಳಕೆಯಿಂದಾಗುವ ಪ್ರಕ್ರಿಯೆಯಿಂದ ಭಾರತದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಸರಕಾರ ಇದನ್ನೂ ತಡೆಯಲು ಕಾನೂನು ಜಾರಿಮಾಡಿದೆ. ಆದರೆ ಈಗಲೂ ಹೆಣ್ಣು ಭ್ರೂಣಹತ್ಯೆಯನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿರುವುದನ್ನು ದಿನ ಪತ್ರಿಕೆಗಳಲ್ಲಿ ಓದುತ್ತೇವೆ ನಮ್ಮ ಸಮಾಜದಲ್ಲಿ ವರದಿಯಾಗುವ ಇನ್ನೊಂದು ಅನಿಷ್ಟ ಪದ್ಧತಿ ಕಿಡ್ನೀ ಕಳ್ಳತನ ವೈದ್ಯವೃತ್ತಿ ಜನಾರೋಗ್ಯದ ಬಗ್ಗೆ ಯಾವ ಕಾಳಜಿಯನ್ನೂ ಹೊಂದಿಲ್ಲ. ಅವರಿಗೆ ರೋಗ ಗುಣಪಡಿಸಲು ಚಿಕಿತ್ಸೆಗಳಿಗೆ ಮಾತ್ರ ಸಮಯ ನೀಡಲು ಸಾಧ್ಯವಾಗಿದೆ. ಆದರೆ ಈಗಿನ ದಿನಗಳಲ್ಲಿ ಆರೋಗ್ಯದ ಬಗ್ಗೆ ಕಳಕಳಿಯುಳ್ಳ ಕೆಲವು ಜನರು ಜನಾರೋಗ್ಯ ಪರಿಸ್ಥಿತಿಯನ್ನು ಸುಧಾರಿಸಲು ಮುಂದಾಗಿದ್ದಾರೆ. ಬದಲಾವಣೆ ಜಗತ್ತಿನ ನಿಯಮ, ಅದನ್ನು ತಡೆಯಲು ಸಾಧ್ಯವಿಲ್ಲ. ಆದರೆ [illegible]ಸಾಮಾನ್ಯರು ಆರೋಗ್ಯ ಕ್ಷೇತ್ರದ ನಿಷ್ಕ್ರಿಯತೆಯನ್ನು ಗಮನಿಸಿ ಪ್ರತಿಕ್ರಿಯಿಸಿದಲ್ಲಿ ಮಾತ್ರ ಆರೋಗ್ಯದಲ್ಲಿ ಬದಲಾವಣೆ ಸಾಧ್ಯ.

45 ವರ್ಷ ಸುರೇಶನ ತಂಗಿ ಕ್ಯಾನ್ಸರ್‌ನಿಂದ ಮೃತಪಟ್ಟಳು. ಈಗ ಮುಂಬೈನ ಒಂದು ಔಷಧಿ ಕಂಪನಿಯ ಗೌನ್ಮಿಹೌಸ್ ನಲ್ಲಿ ಕಾವಲುಗಾರನಾಗಿ ಸುರೇಶ್ ಕೆಲಸಮಾಡುತ್ತಿದ್ದಾನೆ. ತಂಗಿಯ ಕ್ಯಾನ್ಸರ್ ಚಿಕಿತ್ಸೆಗೆ ತನ್ನ ಪಿತ್ರಾರ್ಜಿತ ಆಸ್ತಿಯನೂ ಮಾರಿ ಖಾಸಗಿ ಆಸ್ಪತ್ರೆಯಲ್ಲಿ ಕೆಲವು ತಿಂಗಳು ಚಿಕಿತ್ಸೆ ನೀಡಿದ. ಹಣ ಮುಗಿದಾಗ ಸರಕಾರಿ ಆಸ್ಪತ್ರೆಗೆ ಹೋದಾಗ ಅಲ್ಲಿ ಕ್ಯಾನ್ಸರ್ ರೋಗಿಗೆ ಚಿಕಿತ್ಸೆ ನೀಡುವುದಿಲ್ಲವೆಂದು ತಿಳಿದುಬಂಧಿತು. ಚಿಕಿತ್ಸೆ ನಿಂತ ಸ್ವಲ್ಪ ದಿನಗಳಲ್ಲೇ ಅವನ ತಂಗಿ ತೀರಿಹೋದಳು. ಅವನು ಒಂದು ಔಷಧಿ ಕಂಪನಿಯಲ್ಲಿ ಕೆಲಸಮಾಡುತ್ತಿದ್ದರೂ ಅವನ ತಂಗಿಗೆ ಔಷಧಿ ದೊರಕದಿದ್ದುದು ವಿಪರ್ಯಾಸ.

ಭೋಪಾಲ್‌ನ ಸುಲ್ತಾನಿಯಾ ಆಸ್ಪತ್ರೆಯಲ್ಲಿ ರೋಗಿಗಳು ಬಂದರೆ ಅವರಿಗೆ ಚಿಕಿತ್ಸೆ ನೀಡಲು ಸ್ಥಳವಿಲ್ಲ. ಸಂಬಂಧಿಗಳು ಆಸ್ಪತ್ರೆ ಹೊರಗೆ ಕಾದು ಕುಳಿತಿರಬೇಕಾಗುತ್ತಿದೆ. ಇತ್ತೀಚೆಗೆ ವೈದ್ಯಕೀಯ ನಿರ್ಲಕ್ಷೆ ಹೆಚ್ಚುತ್ತಿದೆ. ಅದಕ್ಕೆ ಒಂದು ಮುಖ್ಯಕಾರಣ ಜಾಗತೀಕರಣ, ಖಾಸಗಿಕರಣ ನೀತಿ. ಈ ನಿರ್ಲಕ್ಷ್ಯಗಳು ಹೆಚ್ಚುತ್ತಿರುವುದರಿಂದ ಜನರು ಇತ್ತೀಚೆಗೆ ಅದರ ಅಪಾಯಗಳನ್ನು ಅನುಭವಿಸುತ್ತಿದ್ದಾರೆ. ಈ ನಿರ್ಲಕ್ಷ್ಯಗಳಿಗೆ ಗ್ರಾಹಕ ರಕ್ಷಣಾ ಕಾಯಿದೆ ಅಡಿ ಪರಿಹಾರ ದೊರಕಿಸುತ್ತಾರೆ. ಆದರೆ ಈ ಪರಿಹಾರ ದೊರಕುವಿಕೆ ಬಹಳ ವಿಳಂಬದ ಕೆಲಸ. ಜನಾರೋಗ್ಯ ಸುಧಾರಣೆ ಅಪೇಕ್ಷಿತ ಮಟ್ಟಕ್ಕೆ ಬರದಿರುವುದು ಹಾಗೂ ವೈದ್ಯಕೀಯ ನಿರ್ಲಕ್ಷೆ ಹೆಚ್ಚುತ್ತಿರುವುದು ಈಗ ಒಂದೇ ನಾಣ್ಯದ ಎರಡು ಮುಖಗಳಂತಾಗಿವೆ. ಇದ-ಕ್ಕೆ ಕಡಿವಾಣ ಹಾಕುವವಾರಾರು? ಜನರು ಎಚ್ಚೆತ್ತುಕೊಂಡು ಸರಕಾರದ ಅಧಿಕಾರಿಗಳ ಮೇಲೂ ಹಾಗೂ ವೈದ್ಯವೃತ್ತಿ, ಕಾನೂನು ವ್ಯವಸ್ಥೆ ಮೇಲೂ ಒತ್ತಡ ತರಬೇಕಿದೆ.

JANASHAKTHI KANNADA VARA PATRIKE APR 21, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Sa
Licensed to Post without prepayment License No. WPP-

ಭಾರತಿಯ 'ಭಾರತ್ ಸ್ಟೋರ್ಸ್' ಹುಡುಕಾಟ



ವಸಂತರಾಜ ಎನ್.ಕೆ.

ನಮ್ಮ ಜನಜೀವನವನ್ನು ಕಲಕುವ ಹಲವು ಪ್ರಮುಖ ವಿದ್ಯಮಾನಗಳಿಗೆ ಸಾಹಿತಿಗಳು ಕಲಾವಿದರು ತಮ್ಮ ಕೃತಿಗಳಲ್ಲಿ ಸ್ಪಂದಿಸುವುದು ಅಪರೂಪ. ಸ್ಪಂದಿಸಿದರೂ ಹೆಚ್ಚಾಗಿ ಬಹಳ ತಡವಾಗಿ. ಇದಕ್ಕೊಂದು ಅಪವಾದ ಕಳೆದ ವಾರ ಬಿಡುಗಡೆಯಾದ ಪಿ.ಶೇಷಾದ್ರಿ ಅವರ 'ಭಾರತ್ ಸ್ಟೋರ್ಸ್'. ಚಿಲ್ಲರೆ ವ್ಯಾಪಾರದಲ್ಲಿ ಬರಲಿರುವ ಬಹು-ಚರ್ಚಿತ ಮತ್ತು ವಿವಾದಾಸ್ಪದವಾದ ವಿದೇಶೀ ನೇರ ಬಂಡವಾಳ ಹೂಡಿಕೆ ಮತ್ತು ಈಗಾಗಲೇ ಇರುವ ಭಾರತದ ದೈತ್ಯ ಸೂಪರ್ ಸ್ಟೋರ್ಸ್ ನಮ್ಮ ಜೀವನದ ಮೇಲೆ ಬೀರುವ ಪರಿಣಾಮದ ಬಗ್ಗೆ ತಯಾರಿಸಿರುವ 'ಭಾರತ್ ಸ್ಟೋರ್ಸ್' ಅತ್ಯಂತ ಸಕಾಲಿಕ. ದೈತ್ಯ ಸ್ಟೋರ್ಸ್‌ಗಳ ಮಾಲ್‌ಗಳ ಆಗಮನದಿಂದಾಗಿ ತತ್ತರಿಸಿ ಹೋಗುತ್ತಿರುವ ಒಬ್ಬ ಚಿಲ್ಲರೆ ವ್ಯಾಪಾರಿಯ ಜೀವನದ ಕಥೆಯ ಮೂಲಕ ಅದನ್ನು ಹೇಳುವುದು ಸಹಜವೇ ಆಗಿದೆ.



ಭಾರತಿ ತನ್ನ ತಂದೆ ಅವರ ಮಿತ್ರ ಗೋವಿಂದ ಶೆಟ್ಟಿಯಿಂದ ತನ್ನ ಮದುವೆಗೆ ತೆಗೆದು-ಕೊಂಡ ಸಾಲವನ್ನು ವಾಪಸು ಮಾಡಿ "ಋಣ ಸಂದಾಯ' ಮಾಡಲು ಆತನ 'ಭಾರತ್ ಸ್ಟೋರ್ಸ್'ನ ಹುಡುಕಾಟ ಆರಂಭಿಸುತ್ತಾಳೆ. ಸಾಯುವ ಕಾಲದಲ್ಲಿ ತಂದೆಗೆ ಕೊಟ್ಟ ಭಾಷೆ ಉಳಿಸಿಕೊಳ್ಳುವ ತವಕ ಅವಳದ್ದು. ಆಕೆಗೆ 'ಭಾರತ್ ಸ್ಟೋರ್ಸ್' ಬಸ್ ಸ್ಟಾಪ್ ಸಿಗುತ್ತದೆ. ಆದರೆ 'ಭಾರತ್ ಸ್ಟೋರ್ಸ್' ಮತ್ತು ಗೋವಿಂದ ಶೆಟ್ಟಿ ಅಲ್ಲಿಲ್ಲ. ಹುಡುಕಾಟ ಮುಂದುವರೆಸಿ 'ಭಾರತ್ ಸ್ಟೋರ್ಸ್'ನಲ್ಲಿ ಕೆಲಸಕ್ಕೆ ಇದ್ದವರ ಸಹಾಯದಿಂದ ಈಗ ಸ್ಟೋರ್ಸ್ ಮುಚ್ಚಿ ವೃದ್ಧಾಶ್ರಮದಲ್ಲಿ ಇರುವ ಶೆಟ್ಟಿಯನ್ನು ಕೊನೆಗೂ ಭೇಟಿಯಾಗುತ್ತಾಳೆ. ಅಲ್ಲಿ ಬಂದಿರುವ ಶೆಟ್ಟಿಯ ಮಗಳು ಸೊಸೆಯಿಂದ ಜೀವನದ ದುರಂತದ ಇನ್ನಷ್ಟು ಅಂಶಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಆತನ ಆಗಿನ ಸ್ಥಿತಿಯಲ್ಲಿ ತಾನು ತಂದಿರುವ ಚೆಕ್ ಯಾರಿಗೆ ಕೊಡುವುದು. ಆದರಿಂದ 'ಋಣ ಸಂದಾಯ' ಸಂದಾಯ ಮಾಡಿದಂತಾಗುತ್ತದೆಯೇ ಎಂಬ ಇಕ್ಕಟ್ಟಿನಲ್ಲಿರುವಾಗ, ಶೆಟ್ಟಿಯ ಆರೋಗ್ಯ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ. ಇದು 'ಭಾರತ್ ಸ್ಟೋರ್ಸ್' ಸರಳ ಕಥೆಯ ಹಂದರ.

ಒಂಬತ್ತು ವರ್ಷದ ನಂತರ ಅಮೆರಿಕದಿಂದ ಬಂದಿರುವ ಭಾರತಿ ಗೋವಿಂದ ಶೆಟ್ಟಿಯ 'ಭಾರತ್ ಸ್ಟೋರ್ಸ್' ಹುಡುಕಾಟದ ಮೂಲಕ ಕಥೆ ಅನಾವರಣಗೊಳ್ಳುತ್ತಾ ಹೋಗುವುದು, ಚಿತ್ರಕೊನೆಯವರೆಗೂ ಕುತೂಹಲಕಾರಿಯಾಗಿ ಇರುವಂತೆ ಮಾಡುತ್ತದೆ. ಭಾರತಿಯದ್ದು ಮತ್ತು 'ಅಮೆರಿಕನ್ನರ ಜತೆ ಇದ್ದು ಅಮೆರಿಕನ್ನೇ ಆಗಿರುವ' ಆಕೆಯ ಸಾಫ್ಟ್ ವೇರ್ ಇಂಜಿನಿಯರ ಪತಿ ಶರತ್‌ನದ್ದು ಬೇರೆನೇ ಕಣ್ಣೋಟ. ಈ ಎರಡು ('ಹೊರಗಿನವರ') ಕಣ್ಣೋಟದೊಂದಿಗೆ ಇಡೀ ಕಥೆ ಬೆಳೆಯುವುದರಿಂದ ಅದಕ್ಕೆ ಬೇರೆಯೇ ಆಯಾಮ ಬಂದಿದೆ.


ಪತಿಯದ್ದು 'ವಿದೇಶೀ ಹೂಡಿಕೆಯಲ್ಲಿ ತಪ್ಪೇನಿದೆ, ಅದು ಒಳ್ಳೆಯದು' ಎಂಬ ಧೋರಣೆ. ಪತ್ನಿ ಭಾರತಿಯದ್ದು ಮೊದ ಮೊದಲು ತಟಸ್ಥ ಧೋರಣೆಯಾದರೆ ಕ್ರಮೇಣ ಗೋವಿಂದ ಶೆಟ್ಟಿಯ ದುರಂತ ಕಥೆ ಕೇಳುತ್ತಾ ಹೋದ ಹಾಗೆ ಗೋವಿಂದ ಶೆಟ್ಟಿ ಮಾತ್ರವಲ್ಲ, 'ಭಾರತ್ ಸ್ಟೋರ್ಸ್' ಮಾತ್ರವಲ್ಲ, ಭಾರತದ ಎಲ್ಲಾ ಸ್ಟೋರುಗಳೂ 'ಶೆಟ್ಟಿ' ಅಂಗಡಿಗಳೂ 'ಕಾಕಾ' ಅಂಗಡಿಗಳ ಬಗ್ಗೆ, ಅವರ ಮೇಲೆ ಅವಲಂಬಿತವಾಗಿರುವ ಎಲ್ಲರ ಬಗೆಗೂ, ಇಡೀ ಭಾರತದ ಬಗೆಗೂ ಮರುಗುತ್ತದೆ. ಆರಂಭದಲ್ಲಿ ನೋಡುಗರ ಕಣ್ಣೋಟ ಭಾರತಿಯದ್ದಾಗಿರಲಿ ಅಥವಾ ಶರತ್‌ನದ್ದಾಗಿರಲಿ 'ಭಾರತ್ ಸ್ಟೋರ್ಸ್'ನ ದುರಂತದ ಗಾಢ ಅನುಭವ ಆಗುವಂತೆ ಚಿತ್ರ ಮಾಡುತ್ತದೆ. ಶೆಟ್ಟಿಯ ದುರಂತ ಕಥೆ ಆತನ ಅಂಗಡಿಯಲ್ಲಿ ಕೆಲಸಕ್ಕಿದ್ದ ಇಬ್ಬರಿಂದ ಮತ್ತು ಮಗಳು ಸೊಸೆಯಿಂದ ತಿಳಿಯುವ ಪ್ರಕ್ರಿಯೆ ಸಹ ಇನ್ನೊಂದು ಆಯಾಮ ಕೊಡುತ್ತದೆ. ಗೋವಿಂದ ಶೆಟ್ಟಿಯ 'ಭಾರತ್ ಸ್ಟೋರ್ಸ್'ನ ದುರಂತದೊಂದಿಗೆ ಅವರೆಲ್ಲರ ದುರಂತ ಸಹ ತಳುಕು ಹಾಕಿಕೊಂಡಿರುವುದು ಸ್ಪಷ್ಟವಾಗುತ್ತ ಹೋಗುತ್ತದೆ.

ಇಲ್ಲಿ ಈ ಚಿತ್ರದ ಬಗ್ಗೆ ಈವರೆಗಿನ ಕೆಲವು ಪತ್ರಿಕಾ ವಿಮರ್ಶೆಗಳಲ್ಲಿ ಬಂದಿರುವ ಒಂದು ಅಂಶದ ಬಗ್ಗೆ ಚರ್ಚಿಸುವುದು ಉಚಿತವಾದೀತು. 'ಭಾರತ್ ಸ್ಟೋರ್ಸ್' ಗೋವಿಂದ ಶೆಟ್ಟಿಯ ವೈಯಕ್ತಿಕ ದುರಂತ ಮಾತ್ರ ಆಗಿದೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳ ಹೂಡಿಕೆಯ ಪರಿಣಾಮಗಳ ವ್ಯಾಪಕ ಆಯಾಮಗಳನ್ನು ಮುಟ್ಟಿಲ್ಲ. ಸಂಕೀರ್ಣ ಸಾಮಾಜಿಕ ಸಮಸ್ಯೆಯೊಂದು ವ್ಯಕ್ತಿಗತ ನೆಲೆಗಟ್ಟಿನ ಬಿಂದುವಿನಲ್ಲಿ ನಿಂತು ಹೋಗಿದೆ – ಎಂಬುದು ಈ ವಿಮರ್ಶೆಯ ಸಾರ. ಆದರೆ ಗೋವಿಂದ ಶೆಟ್ಟಿಯ ದುರಂತ ಬರಿಯ ವೈಯಕ್ತಿಕ ದುರಂತವಲ್ಲ. 'ಭಾರತ್ ಸ್ಟೋರ್ಸ್'ನ ದುರಂತ ಅದರ ಮೂಲ ಕಾರಣ. 'ಭಾರತ್ ಸ್ಟೋರ್ಸ್'ನ ದುರಂತ, ಭಾರತ(ಸರ್ಕಾರ)ದ ದುರಂತಕಾರಿ ನೀತಿಗಳಿಂದ ಹೊಮ್ಮಿದ್ದು ಎಂಬ ಬಗ್ಗೆ ಚಿತ್ರದಲ್ಲಿ ಸಾಕಷ್ಟು ಒತ್ತು ಇದೆ. ಭಾರತಿ–ಶರತ್ ವಾಗ್ವಾದ, ಟಿವಿ ಸಂವಾದ, ವ್ಯಾಪಾರಿಗಳ ಸಭೆಯ ಚರ್ಚೆ, ಮಿಲಿಟರಿ ರಾಜಣ್ಣನ ಮನೆಯಲ್ಲಿ ಬಿಸಿ ಬಿಸಿ ಮಾತುಕತೆ, ತೆಂಗಿನಕಾಯಿ ಬೆಳೆಗಾರ ಮತ್ತು ಕೇಟರಿಂಗ್ ದಾಮಣ್ಣರ ಪಾತ್ರಗಳು – ಇವೆಲ್ಲ ಈ 'ಸಂಕೀರ್ಣ ಸಾಮಾಜಿಕ' ಮತ್ತು 'ವ್ಯಾಪಕ' ಆಯಾಮಗಳನ್ನು ಬಹಳ ಮಟ್ಟಿಗೆ ಮುಟ್ಟುತ್ತವೆ.

ಇವೆಲ್ಲಾ ವಾಚ್ಯವಾಗಿದೆ ಎಂದರೂ, ಆರು ತಿಂಗಳಿಂದ ಮಾತಾಡದೆ ಮೂಕನಾದ ಶೆಟ್ಟಿಯ ಸ್ಥಿತಿ,
ಜೀವನದ ಕೊ
ಯಾತ್ರೆ ಮಾಡು
ಅಂಬುಲೆ
ನಗರದ 'ಟ
ಜಾಮ್' ಅರ
ಸಿಕ್ಕಿಹಾಕಿಕೊಂಡಿ
ಕೊನೆಯ ದೃಶ್ಯ
'ದೃಶ್ಯವಾಗಿಯೂ' ದುರಂತದ ಸಾಮ
ಮತ್ತು ವ್ಯಾಪಕ ಆಯಾಮದ
ಅನುಭವ ನೀಡುತ್ತವೆ. ಶೆಟ್ಟಿಯ
ಸ್ಥಿತಿ ಎಲ್ಲಾ ಚಿಲ್ಲರೆ ವ್ಯಾಪಾರಿಗಳ ಸ್ಥಿ
ಪ್ರತೀಕವೂ, ಶೆಟ್ಟಿಯ 'ಭಾರತ್ ಸ್ಟೋರ
'ಋಣ ಸಂದಾಯ' ಮಾಡುವುದು
ಎನ್ನುವ ಭಾರತಿಯ ಸಂಕಟ ಭಾ
ನಮ್ಮೆಲ್ಲರ ಸಂಕಟ ಸಹ ಆಗುತ್ತದೆ. ಭಾ
ದೈತ್ಯ ಮಾಲುಗಳ ಯಜಮಾನಿಕೆಯಿಂ
ಇಷ್ಟೆಲ್ಲಾ ಅವಾಂತರ ಆಗುವುದಾ
ಇನ್ನು ಜಗತ್ತಿನ ದೈತ್ಯ ಮಾಲುಗಳು ಬ
ರೆ ಏನಾದೀತು ಎಂಬ ಆತಂಕವನ್ನ
'ಭಾರತ್ ಸ್ಟೋರ್ಸ್' ನೋಡು
ಹುಟ್ಟಿಸುತ್ತದೆ.

ದತ್ತಣ್ಣರವರ ಅಭಿನಯ ವಿಶೇಷ
ಗಮನ ಸೆಳೆಯುವಂತಾದ್ದು. ಚಿತ್ರದ ತಾ
ಅಂಶಗಳು, ಅಭಿನಯ, ನಿರ್ದೇಶನ ಎ
ಅಚ್ಚುಕಟ್ಟಾಗಿದೆ. ಇಂತಹ ಸ
ಉತ್ತಮ ಚಿತ್ರ ಕೊಟ್ಟಿದ್ದಕ್ಕೆ, ಚೊಚ್ಚಲ
'ಮುನ್ನುಡಿ'ಯಿಂದ ಆರಂಭಿಸಿ ತ
ಚಿತ್ರಗಳಿಗೆ ಪ್ರಶಸ್ತಿ ಗಳಿಸಿ ಪ್ರಶ
'ಸೀರಿಯಲ್ ಕಿಲ್ಲರ್' ಆಗಿರುವ, ನಿರ್ದೇ
ಪಿ.ಶೇಷಾದ್ರಿ ಅವರನ್ನು ಅಭಿನಂದಿಸಲೇಬೇ
ಬೆಂಗಳೂರಿನ ಕೆಲವು ಮಲ್ಟಿಪ್ಲೆಕ್ಸ್‌ಗಳಲ್ಲಿ ಮ
ಚಿತ್ರ ಬಿಡುಗಡೆ ಆಗಿದೆ ಎಂಬುದೇ ವಿಷಾ
ವಿಷಯ. ನಮ್ಮ ಸಿನೆಮಾ ಉದ್ಯಮದ
ವ್ಯವಸ್ಥೆಗೆ ಹಿಡಿದ ಕನ್ನಡಿ. 'ಭಾರತ್ ಸ್ಟೋ
ನ ದುರಂತ ಭಾರತವನ್ನು ತಟ್ಟು

ಅಪ್ರತಿಮ ಹೋರಾಟಗಾರ–ಮಾನವೀಯ ಸಮಾಜ ಕನಸುಗಾರ



ಏಪ್ರಿಲ್ 14, 2013. ಭಾರತ ದೇಶ ಕ
ಒಬ್ಬ ಅಪ್ರತಿಮ ಹೋರಾಟಗಾರ ಉತ್ತ
ಮಾನವೀಯ ಸಮಾಜದ ಕನಸು
ಡಾ. ಬಾಬಾ ಸಾಹೇಬ್ ಅಂಬೇಡ್ಕ
ಜನ್ಮದಿನ. ದಲಿತ–ಶೋಷಿತ ಜನಾಂಗ
ಆತ್ಮಗೌರವದ ರಕ್ಷಣೆಗಾಗಿ, ಅಸ್ಪೃ
ಅಪಮಾನ, ತಾರತಮ್ಯ, ಅಸಮಾ
ಅನ್ಯಾಯಗಳ ವಿರುದ್ದ ಜೀವಮಾನ
ಹಗಲಿರುಳು ಹೋರಾಡಿದ ಅವರೊ
ಮಹಾನ್ ಚೇತನ. ಡಾ. ಭೀಮರಾ
ರಾಮ್‌ಜಿ ಅಂಬೇಡ್ಕರರ 122 ನೇ
ದಿನದ ಅಂಗವಾಗಿ ಒಂದು ಗೌರವಪೂ
ನಮನ.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI